spoke about the scarcity of drips. Yesterday I had called the Divisional Director, District Health Officer from that area and they have me an assurance that they have abundant quantity of drips and there is no scarcity there. This fact could be ascertained. Yesterday, I had a personal consultation with them. Regarding inoculation and other things, the same have been intensified. Regarding the small children between the age of 7 to 12 years, soon after the present session is over, I will be going over three and I have already sent a Deputy Director incharge of communicable diseases and if necessary senior physicians will be sent from Bangalore to see whether they can do anything for this purpose and I will keep the hon'ble Member informed.

FINANCIAL BUSINESS

Reg.—Discussion of voting of Demands for Grands for the year 1982-83 Demand Nos. 4, 35 and 36

ಶ್ರೀ ವೈ. ರಾಮಕೃಷ್ಣ (ಕಾನೂನು ಮತ್ತು ಪಶುಸಂಗೋಪನ ಮಂತ್ರಿಗಳು) —ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ನಾನು ಮಂಡಿಸಿದಂಥ ಬೇಡಿಕೆಗಳ ಮೇಲೆ ಮಾನ್ಯ ಸಭೆಯ ೧೪ ಜನ ಸದಸ್ಯರು ಮಾತನಾಡಿ ತಮ್ಮ ಅಮೋಘವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಎಲ್ಲಿ ತಪ್ಪು ನಡೆಯುತ್ತಿದೆ, ಎಂಬುದನ್ನು ಕೈ ತೋರಿಸಿ ಚುಚ್ಚಿ ಹೇಳಿದ್ದಾರೆ. ಹಾಗೂ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಕೂಡ ನಾನು ಅಭಿನಂದಿಸುತ್ತೇನೆ. ಮೊಟ್ಟಮೊದಲನೆಯದಾಗಿ ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಬಹಳ ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಹೇಳಿದ್ದರಲ್ಲಿ ಮೊದಲನೆಯದು ಎಂದರೆ ನ್ಯಾಯಾಂಗ ಇಲಾಖೆಯಲ್ಲಿ ಬಹಳ ಪೆಂಡೆನ್ಸಿ ಇದೆ ಎನ್ನುವುದು. ಇದು ಸತ್ಯವಾದ ವಿಚಾರ, ಇವತ್ತು ಹೈಕೋರ್ಟ್‌ನಲ್ಲಿ ಒಂದು ಲಕ್ಷದ ಇಪ್ಪತ್ತು ಸಾವಿರ ಕೇಸುಗಳು ಪೆಂಡಿಂಗ್ ಇವೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಇಷ್ಟು ಪೆಂಡಿಂಗ್ ಇರಲಿಕ್ಕೆ ಕಾರಣ ಏನು ? ಸರಿಯಾಗಿ ಕೇಸುಗಳು ಡಿಸ್ಪೋಸ್ ಆಗುವುದಿಲ್ಲವೇ ಎನ್ನುವುದರ ಕಡೆ ಎಲ್ಲಾ ಸದಸ್ಯರುಗಳು ತಮ್ಮ ಗಮನವನ್ನು ಹರಿಸಿದ್ದಾರೆ. ೯ ವರ್ಷಗಳ ಹಿಂದೆ ಹೈಕೋರ್ಟಿನಲ್ಲಿ ಇದ್ದಂಥ ನ್ಯಾಯ ಮೂರ್ತಿಗಳ ಸಂಖ್ಯೆ ಕೇವಲ ೧೦, ಆಗ ಇದ್ದ ಕೇಸುಗಳು ಪೆಂಡೆನ್ಸಿ ಕೇವಲ ೯ ಸಾವಿರ, ಆದರೆ ಈಗ ಒಂದು ಲಕ್ಷದ ಇಪ್ಪತ್ತು ಸಾವಿರ ಕೇಸುಗಳು ಅಡ್ಜುಡಿಕೇಷನ್‌ಗೆ ಇವೆ. ಇವತ್ತಿನ ನ್ಯಾಯಾಧೀಶರ ಸಂಖ್ಯೆಯೂ ಕೂಡ ಜಾಸ್ತಿಯಾಗಿದೆ, ಈಗ ೨೩ ಜನ ನ್ಯಾಯಾಧೀಶರುಗಳು ಇದ್ದಾರೆ ; ಇವರಲ್ಲಿ ಒಬ್ಬರು ವಿಜಿಲೆನ್ಸ್ ಕಮಿಷನ್‌ನಲ್ಲಿದ್ದಾರೆ, ಒಟ್ಟು ೨೨ ಜನ ನ್ಯಾಯಾಧೀಶರುಗಳು ಹೈಕೋರ್ಟಿನಲ್ಲಿ ಕೇಸುಗಳನ್ನು ಕೇಳುತ್ತಿದ್ದಾರೆ. ಇಷ್ಟು ಜನ ನ್ಯಾಯಾಧೀಶರುಗಳು ಇದ್ದರೂ ಸಹ ಇಷ್ಟೊಂದು ಪೆಂಡೆನ್ಸಿ ಇದೆಯಲ್ಲಾ ಎಂದು ಆತಂಕವನ್ನು ಬಹಳ ಜನ ಸದಸ್ಯರು ವ್ಯಕ್ತ ಮಾಡಿದ್ದಾರೆ, ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಈ ವಿಷಯದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ. ಇಷ್ಟು ಪೆಂಡೆನ್ಸಿ ಇರುವುದಕ್ಕೆ ಏನು ಕಾರಣ, ಇದನ್ನು ಕಂಡುಹಿಡಿಯಬೇಕು ಮತ್ತು ಇದಕ್ಕೆ ಯಾರು ಕಾರಣರು ? ಕಳೆದ ೯ ವರ್ಷಗಳಲ್ಲಿ ಅರಿಯರ್ಸ್ ಇಷ್ಟು ಜಾಸ್ತಿಯಾಗಲಿಕ್ಕೆ ಈ ಮನೆಯೇ ಕಾರಣ ಎಂದು ನಾನು ಹೇಳುತ್ತೇನೆ. ಏಕೆಂದರೆ ಇಲ್ಲಿ ನಾವು ಪಾಸ್ ಮಾಡಿರತಕ್ಕ ಕೆಲವು ಸೋಷಿಯಲ್ ಲೆಜಿಸ್ಲೇಷನ್‌ಗಳು. ಅಂದರೆ, ಲ್ಯಾಂಡ್ ರಿಫಾರಮ್ಸ್ ಕರ್ನಾಟಕ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್ ಕೇಸುಗಳು, ಸರ್ವೀಸ್ ಮ್ಯಾಟರ್ಸ್, ಟ್ಯಾಕ್ಸೇಷನ್ ಮ್ಯಾಟರ್ಸ್ ಇವೆಲ್ಲವೂ ಮಾನ್ಯ ಸದಸ್ಯರ ಗಮನವನ್ನು ಸೆಳೆದಿದೆ. ಸೋಷಿಯಲ್ ಲೆಜಿಸ್ಲೇಷನ್ ಮಾಡಿದಂಥ ಸಮಯದಲ್ಲಿ ಯಾರ ಯಾರು ತಮ್ಮ ಜಮೀನನ್ನು ಕಳೆದುಕೊಂಡರೋ ಅಥವಾ ಕೆ.ಡಿ.ಆರ್. ಆಕ್ಟ್ ಕೆಳಗೆ ಹಣವನ್ನು ಕಳೆದುಕೊಂಡರೋ ಅವರು, ಮತ್ತು ಯಾರು ತಮ್ಮ ಹಕ್ಕುಗಳನ್ನು ಕಳೆದುಕೊಂಡರೋ ಅವರು ನಾವು

ಮಾಡಿದಂಥ ಕಾನೂನನ್ನು ಸುಮ್ಮನೆ ಒಪ್ಪಿಕೊಳ್ಳುವುದಕ್ಕೆ ತಯಾರು ಇರಲಿಲ್ಲ, ಅವರೆಲ್ಲರೂ ಕೋರ್ಟಿಗೆ ನುಗ್ಗಿದರು. ಎಲ್ಲಿಯ ತನಕ ರಾಜ್ಯಾಂಗದಲ್ಲಿ ೨೨೬–೨೨೭ರ ಆರ್ಟಿಕಲ್‌ಗಳು ಇರುತ್ತವೆಯೋ ಎಲ್ಲಿಯ ತನಕ ಅಡ್ವೊಕೇಟ್‌ಗಳು ರೆಡಿಯಾಗಿರುತ್ತಾರೋ ಅಲ್ಲಿಯವರಿಗೆ ನಾವು ಮಾಡಿದಂಥ ಕಾನೂನನ್ನು, ಅದರ ಕಾನ್‌ಸ್ಟಿಟ್ಯೂಷನಾಲಿಟಿ, ಲಿಗ್ಯಾಲಿಟಿಯನ್ನು ಪ್ರಶ್ನೆ ಮಾಡತಕ್ಕದ್ದು ಇದೆ, ಅದರಂತೆ ಅವರು ಅದನ್ನು ಚಲಾಯಿಸುತ್ತಾರೆ. ಒಂದೆರಡು ಅಲ್ಲ ಸುಮಾರು ಹತ್ತಾರು ಕೇಸುಗಳಲ್ಲಿ ಇವರಿಗೆ ಸ್ಟೇ ಸಿಕ್ಕ ಮೇಲೆ ಬಹಳ ಜನ ಇದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಹೊರಟರು. ಇವತ್ತು ಲಕ್ಷಾಂತರ ಮಂದಿ ಕೋರ್ಟಿಗೆ ಹೋಗಿದ್ದಾರೆ, ಈ ದಿಸೆಯಿಂದ ಇವತ್ತು ಅಲ್ಲಿ ಇಷ್ಟು ಪೆಂಡೆನ್ಸಿ ಇದೆ. ಇದಕ್ಕೆ ಮೊಟ್ಟ ಮೊದಲನೆಯದಾಗಿ ನಮ್ಮ ಸೋಷಿಯಲ್ ಲೆಜಿಸ್ಲೇಷನ್ ಕಾರಣ. ಕಲ್ಕತ್ತಾ ಹೈಕೋರ್ಟಿನಲ್ಲಿಯೂ ಇದೇ ಪರಿಸ್ಥಿತಿ ಆಗಿದೆ. ಅವರೂ ನಮ್ಮ ಹಾಗೆ ಪ್ರಗತಿಪರ ಸೋಷಿಯಲ್ ಲೆಜಿಸ್ಲೇಷನ್ಸ್ ತೆಗೆದು ಕೊಂಡು ಬಂದಾಗ ಅಲ್ಲಿಯೂ ಇದೇ ಪರಿಸ್ಥಿತಿ ಆಗಿದೆ. ಇದೇ ರೀತಿಯಲ್ಲಿ ಯಾವ ರಾಜ್ಯದಲ್ಲಿ ಮಾಡಿದ್ದಾರೋ ಆ ರಾಜ್ಯಗಳಲ್ಲಿಯೂ ಕೂಡ ಇದೇ ಪರಿಸ್ಥಿತಿ. ಆದ್ದರಿಂದ ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಮೀಸಲಾಗಿರತಕ್ಕ ಪ್ರಶ್ನೆಯಲ್ಲ, ಇಡೀ ರಾಷ್ಟ್ರಕ್ಕೆ ಸೇರಿದ ಪ್ರಶ್ನೆಯಾಗಿದೆ. ಯಾವ ಯಾವ ರಾಜ್ಯಗಳಲ್ಲಿ ೨೦ ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರತಕ್ಕ ಪ್ರಯತ್ನ ನಡೆಯಿತೋ ಮತ್ತು ಅದರ ಅಡಿಯಲ್ಲಿ ಚೆನ್ನಾಗಿ ಕೆಲಸ ಮಾಡಿದರೋ ಆ ರಾಜ್ಯಗಳಲ್ಲಿ ಕೂಡ ಈ ತರಹ ಪರಿಸ್ಥಿತಿ ಬಂದಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕೋಸ್ಕರವಾಗಿ ನಾವು ಅಂಜಬೇಕಾದ್ದೂ ಇಲ್ಲ. ಹೆದರಬೇಕಾದ್ದೂ ಇಲ್ಲ. ಕಾರಣ ಇಷ್ಟೆ, ಇದು ಏನು ತೋರಿಸುತ್ತದೆಂದರೆ ನಮ್ಮ ಜನರಲ್ಲಿ ಲೀಗಲ್ ಅವೇರ್‌ನೆಸ್, ಕಾನ್‌ಷಿಯಸ್‌ನೆಸ್. ಕಾನೂನಿನ ಒಂದು ಪ್ರಜ್ಞೆ ಅವರ ಮನಸ್ಸಲ್ಲಿ ಮಾಡಿದೆ ಎನ್ನುವುದನ್ನು ತೋರಿಸುತ್ತದೆ. ಬಡವರ್ಗಕ್ಕೆ ದೊರಕಬೇಕಾದಂಥ ನ್ಯಾಯಕ್ಕೆ ಅದನ್ನು ತಡೆಗಟ್ಟುವುದಕ್ಕೆ ಈ ಎಲ್ಲಾ ಜನರು ಕೋರ್ಟಿಗೆ ಹೋದರು. ಇವರಿಗೆ ನ್ಯಾಯ ದೊರಕುವುದಕ್ಕೆ ಇನ್ನೆಷ್ಟು ವರ್ಷಬೇಕೋ ಎನ್ನುವುದೇ ನಮ್ಮ ಮುಂದಿರತಕ್ಕ ಪ್ರಶ್ನೆ. ಈ ವಿಚಾರದಲ್ಲಿ ಸಮಗ್ರವಾಗಿ ಪರಿಶೀಲನೆ ನಡೆಯುತ್ತಿದೆ. ಮೊನ್ನೆ ತಾನೆ ಕಾನೂನು ಮಂತ್ರಿಗಳ ಸಮ್ಮೇಳನ ಡೆಲ್ಲಿಯಲ್ಲಿ ನಡೆಯಿತು, ಅಲ್ಲಿ ಕೂಡ ಈ ವಿಷಯದ ಮೇಲೆ ನಾವು ಚರ್ಚೆ ಮಾಡಿದ್ದೇವೆ. ಅನೇಕ ಮಂತ್ರಿಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ನಾನೂ ಕೂಡ ಕೊಟ್ಟಿದ್ದೇನೆ. ಹೈಕೋರ್ಟಿನವರ ಮನಸ್ಸನ್ನು ಒಲಿಸಲಿಕ್ಕೆ ಅವರನ್ನು ನಮ್ಮ ಹತೋಟಿಯಲ್ಲಿ ತೆಗೆದುಕೊಳ್ಳಲಿಕ್ಕೆ ರಾಜ್ಯಾಂಗದಲ್ಲಿ ಅವಕಾಶವಿಲ್ಲ, ಆದರೆ ಅವರ ಜೊತೆಯಲ್ಲಿ ನಾವು ಮಾತನಾಡಬಹುದು, ರಿಕ್ವೆಸ್ಟ್ ಮಾಡಬಹುದು, ನಮ್ಮ ಪರಿಸ್ಥಿತಿಯನ್ನು ಅವರಿಗೆ ತಿಳಿಸಬಹುದು, ಈ ಕೆಲಸವನ್ನು ನಾವು ಮಾಡಿದ್ದೇವೆ. ನಾನೂ ಸಹ ಅನೇಕ ಸಾರಿ ಮುಖ್ಯ ನ್ಯಾಯಾಧೀಶರೊಡನೆ ಮಾತನಾಡಿದ್ದೇನೆ. ಅವರೂ ಸಹ ಅವರ ಒಂದು ಮಾತನ್ನು ನಮಗೆ ಹೇಳಿದ್ದಾರೆ. ಕೇಸುಗಳನ್ನು ಸ್ಪೀಡಿ ಡಿಸ್ಪೋಸಲ್ ಮಾಡುವುದಕ್ಕೋಸ್ಕರ, ಅವು ಲ್ಯಾಂಡ್ ರಿಫಾರಮ್ಸ್‌ಗೆ ಸಂಬಂಧಪಟ್ಟವುಗಳಾಗಲೀ, ಸರ್ವೀಸ್ ಮ್ಯಾಟರ್ಸ್‌ಗೆ ಸಂಬಂಧಪಟ್ಟವುಗಳಾಗಲೀ, ಅಥವಾ ಕೆ.ಡಿ.ಆರ್. ಗೆ ಸಂಬಂಧಪಟ್ಟವುಗಳಾಗಲೀ ಏನೇನು ಸಲಕರಣೆಗಳನ್ನು ಕೇಳುತ್ತಾರೋ ಅವನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಅವರು ಎಷ್ಟು ಜನ ಗವರ್ನಮೆಂಟ್ ಪ್ಲೀಡರ್ಸ್‌ನ್ನು ಕೇಳುತ್ತಾರೋ ಎಷ್ಟು ಜನ ಅಡ್ವೊಕೇಟ್ಸ್‌ನ್ನು ಕೇಳುತ್ತಾರೋ ಅಷ್ಟು ಜನರನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ಎಂ. ಸಿ ನಾಣಯ್ಯ.—ಇವರು ಪಾರ್ಷಿಯಲ್ ಆಗದ ಹಾಗೆ ಮಾಡಿ.

ಶ್ರೀ ವೈ. ರಾಮಕೃಷ್ಣ.—ಇವರುಗಳು ಓವರ್ ಟೈಂ ಕೂತುಕೊಳ್ಳುವುದಕ್ಕೆ ಇಷ್ಟಪಟ್ಟರೆ ನಾವು ಸಿಬ್ಬಂದಿಯನ್ನು ಕೊಡುವುದಕ್ಕೆ ತಯಾರಿದ್ದೇವೆ. ಯಾವ ವಿಧದಲ್ಲಿ ಬೇಕಾದರೂ ಒತ್ತಾಸೆಯನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಇದರ ಜೊತೆಯಲ್ಲಿ ಮಾನ್ಯ ಸದಸ್ಯರಿಗೆ ಒಂದು ಕಳವಳ ಇರಬಹುದು ಅದೇನೆಂದರೆ, ಹೈಕೋರ್ಟಿನಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ಕೇಸುಗಳು ಪೆಂಡಿಂಗ್ ಇವೆ, ಇದಕ್ಕೆ ಏನು ಕಾರಣ ಎನ್ನುವುದು. ನಾನು ಸ್ವಲ್ಪ ಈ ವಿಷಯದಲ್ಲಿ ಮನಸ್ಸು ಬಿಚ್ಚಿ ಮಾತನಾಡುತ್ತೇನೆ. ಚೀಫ್ ಜಸ್ಟೀಸ್ ಕಾನ್‌ಫರೆನ್ಸ್‌ನಲ್ಲಿ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದೇನೆಂದರೆ. ಒಬ್ಬ ನ್ಯಾಯಾಧೀಶರು ಎಷ್ಟು ಕೇಸುಗಳನ್ನು ಡಿಸ್ಪೋಸ್ ಮಾಡಬಹುದು ಎನ್ನುವುದು, ಅವರೇ ಹಾಕಿಕೊಂಡಿರತಕ್ಕ ನಿರ್ಣಯದ ಪ್ರಕಾರ ಒಬ್ಬ ಹೈಕೋರ್ಟ್ ನ್ಯಾಯಾಧೀಶರು ಸುಮಾರು ೬೫೦ ಕೇಸುಗಳನ್ನು ಒಂದು ವರ್ಷದಲ್ಲಿ ವಿಲೇವಾರಿ ಮಾಡಬಹುದು.

೧೨-೩೦ ಪಿ.ಎಂ.

ಈ ಒಂದು ನಿರ್ಣಯಕ್ಕೆ ಸಾಮಾನ್ಯವಾಗಿ ಎಲ್ಲಾ ಹೈಕೋರ್ಟ್ ನ್ಯಾಯಾಧೀಶರೂ ಬದ್ಧರಾಗಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಹೈಕೋರ್ಟ್ ನ್ಯಾಯಾಧೀಶರು ತೀರ್ಮಾನ ಮಾಡಿರತಕ್ಕಂಥ ಕೇಸ್‌ಗಳ ಸಂಖ್ಯೆ ೬೫೦ ಅಲ್ಲ; ಅವರು ತೀರ್ಮಾನ ಮಾಡಿರತಕ್ಕಂಥ ಕೇಸ್‌ಗಳ ಸಂಖ್ಯೆಯನ್ನು ನೋಡಿದಾಗ ಸರಾಸು ೯೪೦ ಕೇಸ್‌ಗಳನ್ನು ಒಂದು ವರ್ಷಕ್ಕೆ ವಿಲೇವಾರಿ ಮಾಡಿದ್ದಾರೆ. ಈ ಒಂದು ಡಿಸ್ಪೋಸಲ್ಸ್‌ನ್ನು ನೋಡಿದಾಗ ನಮಗೆ ಸಂತೋಷವಾಗುತ್ತದೆ. ಅದಕ್ಕೋಸ್ಕರವಾಗಿ ಈ ಜಡ್ಜ್‌ಗಳ ವಿಚಾರವನ್ನು ನಾವು ಇಲ್ಲಿ ಸಾಮಾನ್ಯವಾಗಿ ಮಾತನಾಡಬಾರದು. ಬೇರೆ ರಾಜ್ಯಗಳಲ್ಲಿ ಎಷ್ಟು ಡಿಸ್ಪೋಸಲ್ಸ್ ಕೊಟ್ಟಿದ್ದಾರೆಯೋ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಇವತ್ತಿನ ದಿವಸ ಡಿಸ್ಪೋಸಲ್ಸ್‌ನ್ನು ಕೊಟ್ಟಿದ್ದಾರೆ. ೬೫೦ ಕೇಸ್‌ಗಳು ಎಲ್ಲಿ, ೯೪೦ ಕೇಸ್‌ಗಳು ಎಲ್ಲಿ. ಆದ್ದರಿಂದ ನಾವು ಅತ್ತಕಡೆ ಕೈತೋರಿಸುವುದು ಬೇಡ. ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಕೇಸ್‌ಗಳನ್ನು ವಿಲೇವಾರಿ ಮಾಡುವುದಕ್ಕೆ ಏನಾದರೂ ಒಂದು ಮಾರ್ಗವನ್ನು ನಾವು ಕಂಡುಹಿಡಿಯಲೇಬೇಕು. ಈಗ ತಮಗೆ ಗೊತ್ತಿರುವ ಹಾಗೆ. ಬಂದಿರತಕ್ಕಂಥ ಕೇಸ್‌ಗಳನ್ನು ತೆಗೆದುಕೊಂಡು ಅವುಗಳನ್ನು ವಿಂಗಡಣೆ ಮಾಡಬೇಕು. ಸೆಕ್ಷನ್ ೩೨ರ ಕೆಳಗೆ ಯಾವ ಯಾವುದು ಡಿಫೆಕ್ಟ್ಸ್ ಇದೆ ಎಂಬುದನ್ನು ನೋಡಬೇಕು. ಪ್ರಿಸೈಡಿಂಗ್ ಆಫೀಸರ್ ಹ್ಯಾಂಡ್ ರೈಟಿಂಗ್‌ನಲ್ಲೇ ಪ್ರೊಸೀಡಿಂಗ್ಸ್ ಬರೆದಿರಬೇಕು. ಬೇರೆಯವರು ಬರೆದಿದ್ದರೆ ಅದು ಇನ್‌ವ್ಯಾಲಿಡ್ ಆಗಬೇಕು. ಇಂತಹ ಕೇಸ್‌ಗಳು ಎಷ್ಟು ಸಾವಿರ ಬರುತ್ತದೆ ಎಂಬುದನ್ನು ನೋಡಬೇಕು, ಅದೇ ರೀತಿ ಮೆಟೀರಿಯಲ್ ಡಿಫೆಕ್ಟ್ ಕೇಸಸ್, ಇಷ್ಯೂ ಆಫ್ ನೋಟೀಸಸ್,—ವಯೋಲೇಷನ್ ಆಫ್ ನ್ಯಾಚ್ಯುರಲ್ ಜಸ್ಟೀಸ್—ಈ ರೀತಿ ವಿಂಗಡಣೆ ಮಾಡಿ ಆಯಾ ಕೆಟಗರಿಯಲ್ಲಿ ಬರತಕ್ಕಂಥ ಕೇಸ್‌ಗಳನ್ನು ತೆಗೆದುಕೊಂಡು ಜಡ್ಜ್‌ಮೆಂಟ್ ಕೊಟ್ಟು ಮುಕ್ತಾಯ ಮಾಡಬಹುದು ಎನ್ನುವ ವಿಷಯ ಕೂಡ ಹೈಕೋರ್ಟಿನ ಮುಂದೆ ಪರಿಶೀಲನೆಯಲ್ಲಿದೆ. ಇವತ್ತು ಈ ಲ್ಯಾಂಡ್ ರಿಫಾರಂಸ್‌ನಲ್ಲಿ ೩೪ ಸಾವಿರ ಕೇಸ್‌ಗಳು ಏನಿವೆ ಆ ಕೇಸ್‌ಗಳ ಪಾರ್ಟಿಗಳು ಅದಕ್ಕೆ ಒಪ್ಪಬೇಕು. ಮತ್ತು ಅದರ ಜೊತೆಗೆ ಅಡ್ವೋಕೇಟ್ಸ್ ಸಹ ಒಪ್ಪಬೇಕು. ಇದಕ್ಕೆ ಅವರು ಕನ್‌ಸೆಂಟ್ ಕೊಡಬೇಕು. ಇದೊಂದು ದೊಡ್ಡ ಸಮಸ್ಯೆ. ಈ ವಿಷಯವನ್ನು ಕೂಡ ನಾವು ಅವರ ಹತ್ತಿರ ಮಾತನಾಡಿದ್ದೇವೆ. ಬಹುಶಃ ಅವರು ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಇದು ಮೊದಲನೆಯ ಕೆಟಗರಿ. ಇನ್ನು ಎರಡನೆಯ ಕೆಟಗರಿಯಲ್ಲಿ ಹೆಚ್ಚಾಗಿ ಇರತಕ್ಕಂಥ ಕೇಸ್‌ಗಳು ಎಂದರೆ ಇವತ್ತು ಸರ್ವೀಸ್ ಮ್ಯಾಟರ್ಸ್‌ಗೆ ಸಂಬಂಧಪಟ್ಟಿರತಕ್ಕಂಥ ಕೇಸ್‌ಗಳು. ಇವೆಲ್ಲಾ ನ್ಯಾಚರಲ್ ಆಗಿ ಬಂದಿರತಕ್ಕಂಥವುಗಳು. ೧ನೇ ನವೆಂಬರ್ ೧೯೫೬ರಲ್ಲಿ ನಾವು ಇದನ್ನು 'ಕರ್ನಾಟಕ ರಾಜ್ಯ' ಎಂದು ಏನು ಒಪ್ಪಿಕೊಂಡೆವೊ' ಆ ಸಂದರ್ಭದಲ್ಲಿ ನಮ್ಮ ಕರ್ನಾಟಕಕ್ಕೆ ವಿವಿಧ ಭಾಗಗಳಿಂದ ವಿವಿಧ ಆಡಳಿತದಲ್ಲಿದ್ದಂತಹ ಸರ್ಕಾರಿ ನೌಕರರು ಯಾವಾಗ ಸೇರಿಕೊಂಡರೋ ಆಗ ಅವರಿಗೆ ಅವಶ್ಯಕವಾಗಿ ಬೇಕಾಗಿದ್ದಂತಹ ಸ್ಥಳವನ್ನು ನಾವು ಸಿವಿಲ್ ಲಿಸ್ಟ್‌ನಲ್ಲಿ ತೋರಿಸಲೇ ಬೇಕಾಗಿತ್ತು. ಅದಕ್ಕೋಸ್ಕರ ನಾವು ಪ್ರಾವಿಷನಲ್ ಇಂಟರ ಸ್ಟೇಟ್ ಲಿಸ್ಟನ್ನು ಮಾಡಲೇಬೇಕಾಯಿತು. ಸ್ಟೇಟ್ ರೀಆರ್ಗನೈಸೇಷನ್ ಆಕ್ಟ್‌ನಲ್ಲಿ ಅವರು ಅಪೀಲ್ ಹೋಗುವುದಕ್ಕೆ ಪ್ರಾವಿಷನ್ ಇದೆ. ಅವರು ಇವತ್ತಿನ ದಿವಸ ಅಪೀಲ್ ಹೋಗಿದ್ದಾರೆ. ಈಗಾಗಲೇ ಫೈನಲ್ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಆಗಿದೆ. ಇವತ್ತಿನ ದಿವಸ ಯಾರ್‍ಯಾರು ಇದನ್ನು ಒಪ್ಪುತ್ತಾ ಇಲ್ಲ. ಅವರೆಲ್ಲಾ ಈ ಸರ್ವೀಸ್ ಮ್ಯಾಟರ್ಸ್ ವಿಚಾರದಲ್ಲಿ ಹೈಕೋರ್ಟಿಗೆ ಹೋಗಿದ್ದಾರೆ. ಆರ್ಟಿಕಲ್ ೨೨೬ರಲ್ಲಿ ಹೇಳಿರುವ ಪ್ರಕಾರ ಅವರಿಗೆ ಒಳ್ಳೆಯ ಸ್ಥಾನ ಸಿಕ್ಕುವತನಕ ಅವರು ಇದನ್ನು ಪ್ರಶ್ನೆ ಮಾಡಬಹುದು. ಬಹುಷಃ ಎಲ್ಲರೂ ಕೂಡ ಮೇಲಕ್ಕೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ವಿನಃ ಯಾರೂ ಕೆಳಗಡೆ ಬರುವುದಕ್ಕೆ ತಯಾರು ಇರುವುದಿಲ್ಲ. ಅದರಲ್ಲೂ ಕೂಡ ವಿದ್ಯಾವಂತರಾದವರು, ಸರ್ಕಾರಿ ನೌಕರರ—everyone wants to assert.

ಶ್ರೀ ಎಂ. ಸಿ. ನಾಣಯ್ಯ.—ಈ ಬಗ್ಗೆ ಗೌರ್ನಮೆಂಟ್ ಆರ್ಡರ್ ಎಲ್ಲಿದೆ?

ಶ್ರೀ ವೈ. ರಾಮಕೃಷ್ಣ.—ಈಗ ನಾನು ಅದನ್ನೆಲ್ಲಾ ಹೇಳುತ್ತಿದ್ದೇನೆ. ಎಸ್. ಆರ್. ಸಿ. ಆಕ್ಟಿನಿಂದ ಪ್ರಾರಂಭ ಮಾಡಿ ನಾನು ಹೇಳುತ್ತಿದ್ದೇನೆ. ಇದರಲ್ಲಿ ಗೌರ್ನಮೆಂಟ್ ಆರ್ಡರ್ ಎಲ್ಲಿ ಬರುತ್ತದೆ? Because it is bound by decisions. Decisions are questioned in the High court now. ಅದಕ್ಕೋಸ್ಕರ ಇದು ನ್ಯಾಚ್ಯುರಲ್ ಆಗಿ ಬಂದಿರತಕ್ಕಂಥಾದ್ದು. ಆದ್ದರಿಂದ ಇದನ್ನೆಲ್ಲಾ ನಾವು ಶೀಘ್ರವಾಗಿ ಪರಿಶೀಲನೆ ಮಾಡಿ ಮುಗಿಸುತ್ತೇವೆ ಎಂದು ನಾನು ಹೇಳುತ್ತೇನೆ. ಈ ಬಗ್ಗೆ ಕೇಸ್‌ಗಳು ನಡೆಯುತ್ತಾ ಇವೆ. ಇದರ ಅಂಕೆ ಸಂಖ್ಯೆಗಳೂ ಕೂಡ ಜಾಸ್ತಿ ಇದೆ. ಈ

ಕರ್ನಾಟಕ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್ ಬಗ್ಗೆ ಕುಮಾರಿ ಪ್ರಮೀಳಾರವರು ನಿನ್ನೆ ಹೇಳುತ್ತಾ ಇದ್ದರು. ಈ ಬಗ್ಗೆ ೩ ಲಕ್ಷ ಚಿಲ್ಲರೆ ಕೇಸ್‌ಗಳು ಇವೆ. ಈ ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಹಾಗೂ ಕರ್ನಾಟಕ ಅಗ್ರಿಕಲ್ಚರ್ ಡೆಟ್ ರಿಲೀಫ್ ಆಕ್ಟ್ ಬಗ್ಗೆ ಅಡ್ವೋಕೇಟ್ಸ್‌ಗೆ, ಈ ಶಾಸನಸಭಾ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ, ಈ ಆಕ್ಟಿನ ವ್ಯಾಲಿಡಿಟಿಯನ್ನು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಿದರು. ಈ ಕೇಸನ್ನು ಕಳೆದುಕೊಂಡರು. ಈ ಕೇಸನ್ನು ಕಳೆದುಕೊಂಡಮೇಲೆ ಕೆಲವರು ಸುಪ್ರೀಂ ಕೋರ್ಟಿಗೆ ಅಪೀಲ್ ತೆಗೆದುಕೊಂಡು ಹೋದರು. ಆ ಅಪೀಲನ್ನು ಹಿಯರ್ ಮಾಡಿ ಡಿಸಿಷನ್ ಕೊಡುವುದಕ್ಕೆ ಬಹಳ ವರ್ಷಗಳ ಕಾಲ ಹಿಡಿಯಿತು. ಈ ಮಧ್ಯೆ ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಅಲ್ಲಿ ಯಾವಾಗ ಸ್ಟ್ರಕ್‌ಡೌನ್ ಆಯಿತೋ ಆಗ ಮತ್ತೆ ಒಂದು ಆಕ್ಟನ್ನು ತೆಗೆದುಕೊಂಡು ಬಂದರು ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಅಥವಾ ಈ ಋಣ ಪರಿಹಾರ ಕಾಯಿದೆಯ ಕೆಳಗಡೆ ನಾವು ಏನೇನು ರಿಲೀಫ್ ಕೊಡಬಹುದೋ ಅದನ್ನೆಲ್ಲಾ ನಾವು ಕೊಡುತ್ತಿದ್ದೇವೆ. ಆ ಕೆಲಸ ಇವತ್ತಿಗೂ ಕೂಡ ನಡೆಯುತ್ತಿದೆ. ಅಂದಮೇಲೆ ಮೊದಲು ಏನೊಂದು ಕರ್ನಾಟಕ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್ ತಂದಿದ್ದೆವೋ ಇದಕ್ಕೆ ಸಂಬಂಧ ಪಟ್ಟಂತೆ ಇವತ್ತು ೩೪ ಸಾವಿರ ಚಿಲ್ಲರೆ ಕೇಸ್‌ಗಳು ಏನು ಬಾಕಿ ಇವೆ, ಅದನ್ನು ರಿಪೀಲ್ ಮಾಡಬೇಕಾದ್ದು ನ್ಯಾಯ ವಿದೆ. ಅದನ್ನು ಈ ಸೆಷನ್‌ನಲ್ಲೇ ತಂದು ರಿಪೀಲ್ ಮಾಡುವುದಕ್ಕೆ ಬಿಲ್ ರೆಡಿ ಮಾಡಿದ್ದೇವೆ. ಈ ಸೆಷನ್‌ನಲ್ಲೇ ನಾನು ಅದನ್ನು ಮಂಡಿಸುತ್ತೇನೆ. ಅದರ ಪ್ರಕಾರ ಎಲ್ಲ ಕೇಸ್‌ಗಳು ಹೊರಟು ಹೋಗುತ್ತವೆ. ಅದಕ್ಕೋಸ್ಕರ ಈ ಬಗ್ಗೆ ಯಾರಿಗೂ ಆತಂಕ ಬೇಡ, ಹೀಗೆ ಪ್ರತಿಯೊಂದು ಕೆಟಗರಿಯಲ್ಲೂ ಕೂಡ ಆಫೀಸರ್‌ಗಳಲ್ಲಿ, ಜನಸಾಮಾನ್ಯರಲ್ಲಿ, ಈ ಬಗ್ಗೆ ಹಿತಾಸಕ್ತಿ ಇರತಕ್ಕಂಥ ಜನಗಳಲ್ಲಿ ಒಂದು ವಿಧವಾದ ಲೀಗಲ್ ಅವೇರ್‌ನೆಸ್ ಜಾಸ್ತಿಯಾಗಿ ಅಲ್ಲಿ ಪೆನ್‌ಡೆನ್ಸಿ ಜಾಸ್ತಿಯಾಗುತ್ತಿದೆಯೇ ಹೊರತು ಬೇರೆ ಇನ್ನೇನೂ ಕಾರಣವಿಲ್ಲ. ಇದನ್ನು ವಿಲೇವಾರಿ ಮಾಡುವುದಕ್ಕೆ ಸರ್ಕಾರ ಈ ಬಗ್ಗೆ ಸರ್ವ ಪ್ರಯತ್ನವನ್ನೂ ಮಾಡುತ್ತಿದೆ. ಎಲ್ಲೆಲ್ಲಿ ಕೋರ್ಟುಗಳು ಬೇಕು ಅಲ್ಲೆಲ್ಲಾ ನಾವು ಜಾಸ್ತಿ ಕೋರ್ಟ್‌ಗಳನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್‌ರವರು ಈ ಬಗ್ಗೆ ಏನೊಂದು ತತ್ವವನ್ನು ಹೇಳುತ್ತಿದ್ದರೋ ಆ ಒಂದು ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ, ಇಡೀ ರಾಷ್ಟ್ರದಲ್ಲಿ ಇನ್ಯಾವ ರಾಜ್ಯದವರು ಈ ಒಂದು ತತ್ವವನ್ನು ಒಪ್ಪಿಕೊಂಡಿಲ್ಲ. ನಾವು ಕೊಟ್ಟಿರುವಷ್ಟು ಕೋರ್ಟುಗಳನ್ನು ಇನ್ಯಾವ ಸರ್ಕಾರದವರೂ ಕೊಟ್ಟಿಲ್ಲ. ಈ ಒಂದು ತತ್ವಕ್ಕೆ ನಾವು ಕಟ್ಟುಬಿದ್ದಿದ್ದೇವೆ. ಈ ಸಾರಿ ಕೂಡ ನಾವು ಹಿರಿಯೂರ್, ಕನಕಪುರ, ತೀರ್ಥಹಳ್ಳಿ, ಮೊಳಕಾಲ್ಮೂರ್, ಮಾಲೂರು, ಸಂಡೂರು, ಬ್ಯಾಡಗಿ, ಶಿಗ್ಗಾವ್ ಮತ್ತು ಜೇವರ್ಗಿ—ಈ ಸ್ಥಳಗಳಿಗೆ ಜೆ ಎಂ.ಎಫ್.ಸಿ ಕೋರ್ಟ್‌ಗಳನ್ನು ಕೊಡಬೇಕು ಎಂದು ತೀರ್ಮಾನಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಸಿವಿಲ್ ಕೋರ್ಟುಗಳ ಬಗ್ಗೆ ನೀವಿನ್ನೂ ತೀರ್ಮಾನಕ್ಕೆ ಬಂದಿಲ್ಲ.

ಶ್ರೀ ವೈ. ರಾಮಕೃಷ್ಣ.- ಅದಕ್ಕೇ ಬರುತ್ತಿದ್ದೇನೆ. ಈ ಜೆ.ಎಂ.ಎಫ್.ಸಿ ಕೋರ್ಟ್‌ಗೋಸ್ಕರ ಕೆಲವಕ್ಕೆ ಹೈಕೋರ್ಟಿನಿಂದ ರೆಕಮಂಡೇಷನ್ ಬಂದಿದೆ. ಮತ್ತೆ ಕೆಲವಕ್ಕೆ ನಾವು ರೆಕ್‌ಮೆಂಡೇಷನ್ಸ್ ಅವೈಟ್ ಮಾಡುತ್ತಿದ್ದೇವೆ. ಶ್ರೀಮಾನ್ ದೇವೇಗೌಡರು ಕೇಳಿರುವಂತೆ ಹೊಳೇನರಸೀಪುರದ ಕೋರ್ಟಿಗೆ ಈಗಾಗಲೇ ಹೈಕೋರ್ಟಿನಿಂದ ನಮಗೆ ರೆಕ್‌ಮೆಂಡೇಷನ್ ಬಂದಿದೆ. ಅದನ್ನು ನಾವು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಕಳಿಸುತ್ತೇವೆ.

ಶ್ರೀ ಕೆ. ಬಿ. ಮಲ್ಲಪ್ಪ.—ಅರಕಲಗೂಡು ಮುನ್ಸೀಫ್ ಕೋರ್ಟ್ ಬಗ್ಗೆ ಕೂಡ ರೆಕ್‌ಮೆಂಡೇಷನ್ ಬಂದಿದೆ. ಎಲ್ಲಾ ರೆಡಿಯಾಗಿದೆ. ಅದನ್ನು ತಾವು ಮಾಡುತ್ತಾ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಅದನ್ನೂ ಈ ಸಾರಿ ಸೇರಿಸೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ,.... ..

ಅಧ್ಯಕ್ಷರು.—ಅವರು ಈಗ ಉತ್ತರ ಹೇಳಲಿ. ತಾವು ನಂತರ ಕೇಳಿ.

ಶ್ರೀ ವೈ ರಾಮಕೃಷ್ಣ. ನಿನ್ನೆಯ ದಿವಸ ಅವರೆಲ್ಲಾ ವ್ಯಂಗವಾಗಿ ಹೇಳಿದ್ದಾರೆ. ನಾವು ಮಾಡುತ್ತೇವೆ ಎಂದು ಹೇಳಿದಮೇಲೆ ನಾವು ಅದನ್ನು ಮಾಡಿಯೇ ಮಾಡುತ್ತೇವೆ. Treating in a most lighter vain hurts me more. If I am wrong, point out your finger and tell me Please tell me which Government has sanctioned

more than ours. I have sanctioned 40 courts within two years. ಮಾಡುವುದಿಲ್ಲ ಎಂದು ನಾನು ಹೇಳುವುದಿಲ್ಲ. I am not a person belonging to that category. ಈ ಕೋರ್ಟ್‌ಗಳನ್ನು ನಾವು ಎಲ್ಲಿ ಕೊಟ್ಟಿಲ್ಲ? ನಾವು ಎಲ್ಲಾ ಕಡೆ ಕೊಟ್ಟಿದ್ದೇವೆ. ಈ ಸಾರಿ ಕೂಡ ನಾನು ಹೇಳಿದ ಕಡೆಯಲ್ಲಿ ಜೆ. ಎಂ. ಎಫ್. ಸಿ ಕೋರ್ಟುಗಳನ್ನು ಸ್ಯಾಂಕ್ಷನ್ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಆಗಲೇ ಹೇಳಿದರು ಹೈಕೋರ್ಟಿನವರು ೬೪೧ ಕೇಸ್‌ಗಳನ್ನು ತೀರ್ಮಾನ ಮಾಡಿದ್ದಾರೆ ಎಂದು.

ಅಧ್ಯಕ್ಷರು.—ಒಂದು ವರ್ಷಕ್ಕೆ ಆವರೇಜ್ ಅಷ್ಟು ಎಂದು ಅವರು ಹೇಳಿದ್ದಾರೆ. ಚೀಫ್ ಜಸ್ಟೀಸ್ ಕಾನ್‌ಫರೆನ್ಸ್‌ನಲ್ಲಿ ಅವರು ಅದನ್ನು ೭೫೦ ಎಂದು ತೀರ್ಮಾನ ಮಾಡಿಕೊಂಡಿದ್ದರು ; ಆದರೆ ಇಲ್ಲಿ ಸರಾಸರಿ ೬೪೦ ಮಾಡಿದ್ದಾರೆ ಅಂತ ಅವರು ಹೇಳಿದರು.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆ ಮತ್ತೆ ಪುನರುಚ್ಚಾರ ಮಾಡಬೇಕೆಂದು ನಾನು ಅದನ್ನು ಹೇಳಲಿಲ್ಲ ಅಷ್ಟೆ. ಈಗ ನಾನು ಕೇಳುವುದು ಏನೆಂದರೆ, ಇದರಲ್ಲಿ ಸಬ್‌ಸ್ಟಾನ್ಸಿಯಲ್ ಕೇಸಸ್ ಎಷ್ಟು ಇವೆ ? ಮಿಸಲೇನಿಯಸ್ ಕೇಸಸ್ ಎಷ್ಟು ಇವೆ ? ಮಿಸಲೇನಿಯಸ್ ಅಪೀಲ್ ಕೇಸಸ್ ಎಷ್ಟು ಇವೆ ? ಇಂಟರ್‌ನಲ್ಲಿ ಅಕ್ವಿಟ್ಟಲ್ ಕೇಸಸ್ ಎಷ್ಟು ಇವೆ ? ರಿವಿಷನ್ ಕೇಸಸ್ ಎಷ್ಟು ಇವೆ ? ಈ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು ಎಂದು ಕೇಳುತ್ತೇನೆ. ಏಕೆಂದರೆ ಬರೀ ಈ ಸಬ್‌ಸ್ಟಾನ್ಸಿಯಲ್ ಕೇಸಸ್ ಮತ್ತು ಮಿಸಲೇನಿಯಸ್ ಕೇಸಸ್‌ಗೆ ಗಂಟುಬಿದ್ದು ಆ ಬಗ್ಗೆ ಲೆಕ್ಕ ಕೊಟ್ಟರೆ ಏನು ಪ್ರಯೋಜನ ?

ಶ್ರೀ ವೈ. ರಾಮಕೃಷ್ಣ.—ನಾನು ಇಂಟರ್‌ನಲ್ ಅಕ್ವಿಟ್ಟಲ್ ಕೇಸಸ್ ಅನ್ನು ಬಿಟ್ಟು ಉಳಿದಿರ ತಕ್ಕಂಥಾದ್ದನ್ನು ಹೇಳಿದ್ದೇನೆ. This excludes internal acquittal cases. ಮಿಸಲೇನಿಯಸ್ ಆಪೀಲ್, ರೆಗ್ಯುಲರ್ ಅಪೀಲ್, ಸೆಕೆಂಡ್ ಅಪೀಲ್. ರೆಗ್ಯುಲರ್ ಕೇಸಸ್ ಬಗ್ಗೆ ಹೇಳಿದ್ದೇನೆ.

ಇನ್ನು ಜುಡಿಷಿಯಲ್ ಆಫೀಸರ್‍ಸ್ ಹುದ್ದೆಗಳು ಖಾಲಿ ಇವೆ ಎಂದು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಅಂಕಿಅಂಶಗಳ ಸಮೇತ ಹೇಳಿದ್ದಾರೆ. ಜುಡಿಷಿಯಲ್ ಆಫೀಸರ್‍ಸ್ ಹುದ್ದೆಗಳು ಖಾಲಿ ಇವೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ಜುಡಿಷಿಯಲ್ ಆಫೀಸರ್‍ಸ್ ಹುದ್ದೆಗಳು ಈ ರೀತಿ ಖಾಲಿ ಇವೆ. ಅವು ಯಾವುವೆಂದರೆ ಜಿಲ್ಲಾ ನ್ಯಾಯಾದೀಶರ ಹುದ್ದೆಗಳು ೧೭ ಖಾಲಿ ಇವೆ. ಮತ್ತು ಸಿವಿಲ್ ನ್ಯಾಯಾದೀಶರ ಹುದ್ದೆಗಳು ೧೧ ಖಾಲಿ ಇವೆ. ಮತ್ತೇ ೪೫ ಮುನ್ಸೀಫ್ ನ್ಯಾಯಾದೀಶರ ಹುದ್ದೆಗಳು ಖಾಲಿ ಇವೆ. ಇದಕ್ಕೆ ಕಾರಣ ಏನು ಎಂದು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ್ದಾರೆ. ಇದರಲ್ಲಿ ಮೂಲಭೂತವಾಗಿ ಜಿಲ್ಲಾ ನ್ಯಾಯಾದೀಶರನ್ನು ಯಾವ ರೀತಿಯಲ್ಲಿ ನೇಮಕ ಮಾಡಬೇಕು ಎನ್ನುವ ಪ್ರಶ್ನೆ ಬಂದಿದೆ. ಮೊದಲು ನಾವು ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡುವಾಗ ಒಂದು ಫಾರ್ಮಲಿಟಿಯನ್ನು ಹಾಕಿಕೊಂಡು ನೇಮಕ ಮಾಡುತ್ತಿದ್ದವು. ಆದರೆ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟು ನೇಮಕ ಮಾಡಿಕೊಳ್ಳಬಹುದಾಗಿತ್ತು. ಆದರೆ ಈಗ ಏನಾಗಿದೆ ಎಂದರೆ, ಸುಪ್ರೀಂ ಕೋರ್ಟಿನಿಂದ ಒಂದು ತೀರ್ಮಾನ ಬಂದಿದೆ. ಆದ್ದರಿಂದ ನಾವು ಈ ಒಂದು ಪದ್ಧತಿಯನ್ನು ಬದಲಾವಣೆ ಮಾಡಿ ಈಗ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಅದು ಏನೆಂದರೆ, ಅರ್ಜಿದಾರರಿಂದ ಒಪ್ಪಿಗೆಯನ್ನು ಪಡೆದುಕೊಂಡು ಅನಂತರ ಜಿಲ್ಲಾ ನ್ಯಾಯಾಧೀಶರ ಹುದ್ದೆಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈಗಾಗಲೇ ಜಿಲ್ಲಾ ನ್ಯಾಯಾದೀಶರ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅರ್ಜಿಯನ್ನು ಕರೆಯಲಾಗಿದೆ. ಇದಕ್ಕೆ ಈ ತಿಂಗಳ ೩೧ನೇ ತಾರೀಖು ಕಡೆಯ ದಿನವಾಗಿದೆ. ಮತ್ತು ಸಿ ಅಂಡ್ ಆರ್ ರೂಲ್ಸ್ ಪ್ರಕಾರ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಸಹ ತೀರ್ಮಾನ ತೆಗೆದುಕೊಂಡಿದ್ದೇವೆ. ೪೫ ಜನ ಮುನ್ಸೀಫ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತಹ ಅಧಿಕಾರವನ್ನು ರಾಜ್ಯ ಹೈಕೋರ್ಟಿನವರಿಗೆ ಕೊಟ್ಟಿದ್ದೆವು. ಆದರೆ ಇದೇ ಸದನದಲ್ಲಿ ಹಲವಾರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತ ಹಿಂದುಳಿದ ವರ್ಗದವರಿಗೆ ಮತ್ತು ಹರಿಜನ ಮತ್ತು ಗಿರಿಜನರಿಗೆ ಅನ್ಯಾಯವಾಗಿದೆ ಮತ್ತು ಸರ್ಕಾರದವರು ಮಾಡಿರುವ ಸಿ ಅಂಡ್ ಆರ್ ರೂಲ್ಸನ್ನು ಫಾಲೋ ಮಾಡಿಲ್ಲ, ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳಿದರು. ಅದನ್ನು ನಾನು ಗಮನದಲ್ಲಿಟ್ಟು

ಕೊಂಡು ರಾಜ್ಯ ಹೈಕೋರ್ಟಿನವರಿಗೆ ಇದ್ದ ಈ ಒಂದು ಅಧಿಕಾರವನ್ನು ವಾಪಸ್ಸು ತೆಗೆದುಕೊಂಡು ನಮ್ಮ ಕರ್ನಾಟಕ ಲೋಕ ಸೇವಾ ಆಯೋಗದವರಿಗೆ ಕೊಟ್ಟಿದ್ದೇವೆ. ಈಗಾಗಲೇ ಅವರು ಪರೀಕ್ಷೆಗಳನ್ನು ಸಹ ಮಾಡಿದಾರೆ. ಬಹುಶಃ ಅವರು ಇನ್ನು ಕೆಲವೇ ದಿನಗಳಲ್ಲಿ ಸಂದರ್ಶನವನ್ನು ಮುಗಿಸಿ ಈ ತಿಂಗಳ ಕೊನೆಯಲ್ಲಿ ತೇರ್ಗಡೆಯಾದವರ ಹೆಸರುಗಳನ್ನು ಪ್ರಕಟ ಮಾಡುವವರಿದ್ದಾರೆ. ಇನ್ನು ಹನ್ನೊಂದು ಜನ ಸಿವಿಲ್ ನ್ಯಾಯಾಧೀಶರ ಹುದ್ದೆಗಳು ಖಾಲಿ ಇರುವುದರಿಂದ, ಆ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದು ಹೇಗೆಂದರೆ, ಈಗ ಇರುವಂತಹ ನ್ಯಾಯಾಧೀಶರಿಗೆ ಬಡ್ತಿ ಕೊಡುವುದರ ಮೂಲಕ ತುಂಬಿ ಕೊಳ್ಳಬೇಕಾಗುತ್ತದೆ ಆದ್ದರಿಂದ ನಾನು ಹೇಳುವುದೇನೆಂದರೆ, ಈಗ ಹೊಸದಾಗಿ ಬರುವಂತಹ ಅಭ್ಯರ್ಥಿಗಳಿಗೆ ಈ ಕೆಲಸವನ್ನು ವಹಿಸಿ ನಾವು ಸಿವಿಲ್ ನ್ಯಾಯಾಧೀಶರಿಗೆ ಬಡ್ತಿ ಕೊಡಬಹುದು. ಮತ್ತೆ ನಮ್ಮ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಈ ಜುಡಿಷಿಯಲ್ ಆಫಿಸರ್ಸ್‌ಗೆ ಮನೆಗಳನ್ನು ಕಟ್ಟಿ ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ನಾನು ಮಾನ್ಯ ಸದಸ್ಯರ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ, ಅದು ಏನೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೪೪ ಕೋರ್ಟುಗಳಿಗೆ ಸ್ವಂತ ಕಟ್ಟಡಗಳು ಇಲ್ಲ. ಈ ೪೪ ಕೋರ್ಟುಗಳಿಗೂ ಸುಮಾರು ಒಂದು ಅಥವಾ ಎರಡು ವರ್ಷಗಳಲ್ಲಿ ಕಟ್ಟಡ ಗಳನ್ನು ಕಟ್ಟಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಆದಷ್ಟು ಬೇಗ ಈ ಕೆಲಸವನ್ನು ಮಾಡಿ ಮುಗಿಸುತ್ತೇವೆ.

ಕುಮಾರಿ ಎಸ್. ಪ್ರಮೀಳ.— ನ್ಯಾಯಾಧೀಶರಿಗೇ ಎವಿಕ್ಷನ್ ನೋಟೀಸ್ ಕೊಟ್ಟಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ.

ಶ್ರೀ ವೈ. ರಾಮಕೃಷ್ಣ.—ರೂಲ್ ಆಫ್ ಲಾ ಇದೆಯಲ್ಲ. ಈಗ ನಮ್ಮ ರಾಜ್ಯದಲ್ಲಿ ಸುಮಾರು ೨೫೮ ಜನರಿಗೆ ನ್ಯಾಯಾಧೀಶರಿಗೆ ಕ್ವಾರ್ಟರ್ಸ್ ಇಲ್ಲ. ಈಗ ಸುಮಾರು ೫೦ ಜನ ನ್ಯಾಯಾಧೀಶರಿಗೆ ಮಾತ್ರ ಕ್ವಾರ್ಟರ್ಸ್‌ಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದ ೨೫೮ ಜನ ನ್ಯಾಯಾಧೀಶರಿಗೆ ಕ್ವಾರ್ಟರ್ಸ್‌ಗಳನ್ನು ಕಟ್ಟಿ ಕೊಡಬೇಕೆಂದು ಹೇಳಿ ಹುಡ್ಕೊ ಸ್ಕೀಮಿನಲ್ಲಿ ಸುಮಾರು ೧೭ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಡುವುದಕ್ಕೆ ಈಗಾಗಲೇ ಸೈಟುಗಳನ್ನು ವಶಪಡಿಸಿಕೊಂಡಿದ್ದೇವೆ. ಆದಷ್ಟು ಬೇಗ ಈ ಕೆಲಸವನ್ನು ಮಾಡುತ್ತೇವೆ ಸರ್ಕಾರದಿಂದ ಸುಮಾರು ೧೦ನೇ ೧ ಭಾಗ ದಷ್ಟು ಹಣವನ್ನು ಕೊಡುತ್ತೇವೆ ಮತ್ತು ಈ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಈ ವರ್ಷವೇ ಪ್ರಾರಂಭ ಮಾಡುತ್ತೇವೆ.

ಇನ್ನು ಅನೇಕ ಜನ ಮಾನ್ಯ ಸದಸ್ಯರು ಕೆಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ನಮ್ಮ ವಿರೋಧಪಕ್ಷದ ನಾಯಕರಾದಂತಹ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಕೋರ್ಟ್ ಫೀಜ್ ರದ್ದು ಮಾಡುವ ಬಗ್ಗೆ ಪ್ರಸ್ತಾಪ ಮಾಡುವಾಗ ಬಹಳ ಚನ್ನಾಗಿ ಭಾಷಣ ಮಾಡಿದ್ದಾರೆ. ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಸರ್ಕಾರದವರು ಯಾವುದಾದರು ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾದರೆ ಯೋಚನೆ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಈ ಒಂದು ನಿರ್ಣಯವನ್ನು ನಮ್ಮ ಕರ್ನಾಟಕ ರಾಜ್ಯ ಒಂದೇ ತೆಗೆದುಕೊಂಡಿಲ್ಲ. ಇಡೀ ಭಾರತ ದೇಶವೇ ತೆಗೆದುಕೊಂಡಿರುವ ಒಮ್ಮತದ ಏಕೈಕ ನಿರ್ಣಯ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ ಇದರಿಂದ ಬರತಕ್ಕಂತಹ ಹಣ ಸುಮಾರು ೫ ಕೋಟಿ ರೂಪಾಯಿಗಳು. ಈ ೫ ಕೋಟಿ ರೂಪಾಯಿಗಳನ್ನು ನಾವು ಕೋರ್ಟ್‌ಗಳಿಗೆ ಕೊಡುತ್ತಿದ್ದೇವೆ. ೭ನೇ ಹಣಕಾಸಿನ ಆಯೋಗದಲ್ಲಿ ನಮಗೆ ಹಣವನ್ನು ಒದಗಿಸಿಕೊಡುತ್ತಿಲ್ಲ. ಆದರೆ ಆಂಧ್ರ ಪ್ರದೇಶದವರಿಗೆ ೧೫ ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ಇದಕ್ಕೆ ಕಾರಣವೇನೋ ನನಗೆ ಗೊತ್ತಿಲ್ಲ. ಈಗ ಒಬ್ಬ ಬಡವನು ಯಾರಾದರು ಇದ್ದರೆ ಅವನ ಮೇಲೆ ಬೇಕಾದಷ್ಟು ಕೇಸ್‌ಗಳನ್ನು ಹಾಕಿ, ಅವನ ಮೇಲೆ ದ್ವೇಷ ಮತ್ತು ಜಿದ್ದು ಬೆಳೆಸಿಕೊಂಡು ಅವನನ್ನು ನಾಶ ಮಾಡುವವರಿವಿಗೂ ಸುಮ್ಮನೆ ಇರುವು ದಿಲ್ಲ. ಇಂತಹ ಜನರಿಗೆ ಕೋರ್ಟ್ ಫೀಜ್ ರದ್ದು ಮಾಡಿದರೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಈ ಕೋರ್ಟ್ ಫೀಜ್ ಇರಬೇಕೆಂದು ಮಾಡಿದ್ದೇವೆ. ಇನ್ನು ನಮ್ಮ ಕುಮಾರಿ ಪ್ರಮೀಳಾರವರು ಮಾತನಾಡುತ್ತ ಕೆಲವು ವಿಧವಾದಂತಹ ಕೇಸುಗಳಿಗೆ ಕೋರ್ಟ್ ಫೀಜ್ ರಿಯಾಯ್ತಿ ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಲ್ಯಾಂಡ್ ಅಕ್ವಿಜೇಷನ್ ಕೇಸ್‌ಗಳಲ್ಲಿ ರೈತರು ಭೂಮಿಯನ್ನು ಕಳೆದುಕೊಂಡು ಕೇಸ್ ಹಾಕಬೇಕಾಗಿ ಬಂದರೆ ಅಂತಹವರು

ಕೋರ್ಟ್ ಫೀಜು ಕೊಡುವುದಕ್ಕೆ ಆಗುತ್ತದೆಯೋ ಮತ್ತು ಮೋಟಾರ್ ವಾಹನಗಳಿಂದ ಅಪಘಾತವಾಗಿ ಪರಿಹಾರವನ್ನು ಕೇಳಲು ಬಂದಂತಹವರು ಕೋರ್ಟ್ ಫೀಜ್ ಕೊಡುವುದು ಯಾವ ನ್ಯಾಯ ಎನ್ನುವ ವಾದವನ್ನು ಮಾಡಿದರು. ಆದರೆ......

ಅಧ್ಯಕ್ಷರು. – ಈಗ ಲ್ಯಾಂಡ್ ಆಕ್ವಿಜೀಷನ್ ಮತ್ತು ಎಂ.ವಿ.ಸಿ. ಕೇಸ್‌ಗಳಿಗೆ ಕೋರ್ಟ್ ಫೀಜ್ ತೆಗೆದುಕೊಳ್ಳುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ. — ಇದರ ಬಗ್ಗೆ ಒಂದು ಕಮಿಟಿಯನ್ನು ಭಾರತ ಸರ್ಕಾರದವರು ಮಾಡಿದ್ದಾರೆ. ಅದರಲ್ಲಿ ಸುಮಾರು ೫-೬ ರಾಜ್ಯಗಳ ಮಂತ್ರಿಗಳು ಇದ್ದಾರೆ. ಅವರು ಇದನ್ನು ಪರಿಶೀಲನೆ ಮಾಡಿ ಒಂದು ವರದಿಯನ್ನು ಕೊಡುತ್ತಾರೆ. ಆ ವರದಿ ಬಂದ ಕೂಡಲೆ ಅದನ್ನು ತರಿಸಿಕೊಂಡು ನೋಡಿ ಅದರಲ್ಲಿರುವಂತಹ ಎಲ್ಲಾ ಅಂಶಗಳನ್ನು ಚಾಚು ತಪ್ಪದೆ ಜಾರಿಗೆ ತರುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಇನ್ನು ನಮ್ಮ ವಿರೋಧಪಕ್ಷದ ನಾಯಕರು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದರು, ಅದು ಏನೆಂದರೆ ಅಫಿಷಿಯಲ್ ಲಾಂಗ್ವೇಜ್ ಕಮೀಷನನ್ನು ರದ್ದು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದರು ಮತ್ತು ಟ್ರಾನ್ಸ್‌ಲೇಷನ್ ಕೆಲಸ ಎಲ್ಲಾ ಮುಗಿದಿತ್ತು ಎನ್ನುವ ಮಾತನ್ನು ಸಹ ಹೇಳಿದರು. ಆದರೆ ಆ ವಿಷಯ ನನ್ನ ಖಾತೆಗೆ ಬರುವುದಿಲ್ಲ. ಆದರೂ ಸಹ ಅದರ ವಿಷಯವಾಗಿ ನಾನು ಕಾಗದ ಬರೆದು ವಿವರಗಳನ್ನು ಕಳುಹಿಸಿಕೊಡುವಂತೆ ಹೇಳುತ್ತೇನೆ. ಇನ್ನು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರಾದಂತಹ ಶ್ರೀಮಾನ್ ಲಕ್ಷ್ಮೀಸಾಗರ್ ರವರು ನ್ಯಾಯಾಧೀಶರನ್ನು ಟ್ರಾನ್ಸ್‌ಫರ್ ಮಾಡುವ ವಿಷಯವನ್ನು ಪ್ರಸ್ತಾಪ ಮಾಡಿದರು. ಆದರೆ ನ್ಯಾಯಾಧೀಶರನ್ನು ಟ್ರಾನ್ಸ್‌ಫರ್ ಮಾಡುವ ವಿಷಯದಲ್ಲಿ ನಾವು ಇಂಟರ್‌ಫಿಯರ್ ಆಗುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. — ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ಟ್ರಾನ್ಸ್‌ಲೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ. ಮತ್ತು ಅಲ್ಲಿ ಕೆಲಸ ಮಾಡುತ್ತಿರುವಂತಹವರಿಗೆ ಬಡ್ತಿ ಕೊಡುವ ಬಗ್ಗೆ.

ಶ್ರೀ ವೈ. ರಾಮಕೃಷ್ಣ. — ಈ ಟ್ರಾನ್ಸ್‌ಲೇಷನ್ ಡಿಪಾರ್ಟ್‌ಮೆಂಟ್ ಹೊಸ ಇಲಾಖೆ. ಒಂದು ವೇಳೆ ಇಲ್ಲಿ ಬಡ್ತಿ ಕೊಡುವ ವಿಷಯದಲ್ಲಿ ಲೋಪದೋಷಗಳು ಆಗಿರಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಇನ್ನು ನನಗೆ ಇರತಕ್ಕಂಥ ಡಿಸ್ಕ್ರಿಷನರಿ ಅಮೌಂಟನ್ನು ನಾನು ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಗೊತ್ತಿರುವಂತೆ ಎಲ್ಲೆಲ್ಲಿ ಬಾರ್ ಅಸೋಸಿಯೇಷನ್‌ಗಳಿವೆ, ಅವುಗಳಿಗೆ ಕೊಟ್ಟು ಉಳಿದ ಹಣವನ್ನು ಬೆಂಗಳೂರಿನ ಬಾರ್ ಅಸೋಸಿಯೇಷನ್‌ಗೆ ಕೊಟ್ಟುಬಿಟ್ಟಿದ್ದೇನೆ. ಯಾಕೆಂದರೆ ಇಲ್ಲಿ ಹೈಕೋರ್ಟ್ ಇದೆ. ಇದು ಅವರಿಗೆ ಗೊತ್ತು. ನಾನು ಹೋದ ಕಡೆಗಳಲ್ಲಿ ಈ ಡಿಸ್ಕ್ರಿಷನರಿ ಅಮೌಂಟನ್ನು ಕೊಟ್ಟಿದ್ದೇನೆ. ಇತ್ತೀಚೆಗೆ ಮಂಡ್ಯಕ್ಕೆ ಹೋಗಿ ನೋಡಿದೆ. ಅಲ್ಲಿ ಲೈಬ್ರರಿ ಎಕ್ವಿಪ್‌ಮೆಂಟ್ಸ್‌ಗೆ ಹತ್ತು ಸಾವಿರ ರೂಪಾಯಿಗಳು ಬೇಕಾಗಿತ್ತು. ಅದನ್ನು ಕೊಟ್ಟಿದ್ದರ ಜೊತೆಗೆ ಹುಬ್ಬಳ್ಳಿಯ ಎರಡು ತಾಲೂಕುಗಳಿಗೆ ಐದೈದು ಸಾವಿರ ಕೊಟ್ಟಿದ್ದೇನೆ. ಎಲ್ಲೆಲ್ಲಿ ಸಾಮಾನ್ಯವಾಗಿ ತೊಂದರೆ ಇರುತ್ತದೆಯೋ ಅಲ್ಲಿಗೆ ನಾವು ಹಣ ಸಹಾಯ ಮಾಡಿದ್ದೇವೆ. ಕೆಲವು ಕಡೆ ಎ.ಐ.ಆರ್ ರಿಪೋರ್ಟ್‌ನ್ನು ತರಿಸಿಕೊಳ್ಳುವ ಶಕ್ತಿ ಇರುವುದಿಲ್ಲ. ಬೇಸಿಕ್ ಆಗಿ ಇರಬೇಕಾದಂಥಾದ್ದು ಅಂದರೆ ಉದಾಹರಣೆಗೆ ಲೀಗಲ್ ಮ್ಯಾಗಜಿನ್‌ಗಳನ್ನು ತರಿಸುವುದಕ್ಕೆ ಕೂಡ ಹಣ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಹಣ ಕೂಡಲೇ ಕೊಡಬೇಕಾಗುತ್ತದೆ. ಅದರಂತೆ ಕೊಟ್ಟಿದ್ದೇವೆ. ಜಡ್ಜ್‌ಗಳ ಹುದ್ದೆಗಳ ಬಗ್ಗೆ ಅಡ್ವಾನ್ಸ್ ಲಿಸ್ಟ್ ಮಾಡಿ ಎಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದಾರೆ. ಈಗಾಗಲೇ ನಾವು ಆಲೋಚನೆ ಮಾಡಿ ೪೫ ಜನ ಜಡ್ಜ್ ಹುದ್ದೆಗಳಿಗೆ ಇವತ್ತು ಕರೆದಿರುವುದು ೭೫ ಜನರನ್ನು. ೩೦ ಜಡ್ಜ್‌ಗಳು ಜಾಸ್ತಿ ಇದ್ದಾರೆ. ಇನ್ನು ಇವತ್ತು ಕೋರ್ಟುಗಳಲ್ಲಿ ಎಲ್ಲಿ ಲ್ಯಾವೆಟ್ರಿಗಳಿರಲಿಲ್ಲ ಅಲ್ಲೆಲ್ಲಾ ಕಟ್ಟಿಸಿಕೊಟ್ಟಿದ್ದೇವೆ. ಗಂಡಸರಿಗೆ ಬೇರೆ, ಹೆಂಗಸರಿಗೆ ಬೇರೆ ಕಟ್ಟಿಸಿದ್ದೇವೆ. ಮಾಸ್ಟರ್ ಪ್ಲಾನ್ ತಯಾರಿಸಿದ ಪ್ರಕಾರವೇ ಬಿಲ್ಡಿಂಗ್‌ನ್ನು ಕಟ್ಟಿಸುತ್ತಿದ್ದೇವೆ. ಬೆಂಗಳೂರಿನ ಕೋರ್ಟುಗಳಲ್ಲಿ ಇದ್ದಂತಹ ಪರಿಸ್ಥಿತಿ ವಿಷಯ ತಮಗೆ ಗೊತ್ತಿದೆ ಅಲ್ಲಿ ಕೂತುಕೊಳ್ಳುವುದಕ್ಕೆ ಬೆಂಚುಗಳಿರಲಿಲ್ಲ. ವರಾಂಡ ದೊಡ್ಡದಾಗಿದ್ದರೂ ಅನುಕೂಲಕರವಾಗಿರಲಿಲ್ಲ. ಇವತ್ತು ೨೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಟೀಕ್‌ಉಡ್ ಮರ ಉಪಯೋಗಿಸಿ ಬೆಂಚುಗಳನ್ನು ತಯಾರು ಮಾಡಬೇಕೆಂದು ಸೆಂಟ್ರಲ್ ಜೈಲಿಗೆ ಆರ್ಡರ್ ಕೊಟ್ಟಿದ್ದೇವೆ. ಅಲ್ಲಿಂದ ಬಂದ ಕೂಡಲೇ

ಬೆಂಚ್ ಹಾಕುತ್ತೇವೆ. ಹೀಗೆ ಅವರು ಎಷ್ಟು ಹಣ ಕೇಳಿದ್ದಾರೋ ಅಷ್ಟು ಹಣವನ್ನು ಕೊಟ್ಟಿದ್ದೇವೆ. ಅದೇರೀತಿಯಲ್ಲಿ ಕಾರಾಗೃಹಗಳಲ್ಲಿ ಹಿಂದಿದ್ದ ಪರಿಸ್ಥಿತಿಯನ್ನು ಈಗ ಸುಧಾರಿಸಲಾಗಿದೆ. ಇನ್ನು ಜ್ಯುಡಿಶಿಯಲ್ ಆಫೀಸರುಗಳಿಗೆ ಎಮೂಲ್ಯುಮೆಂಟ್ ಜಾಸ್ತಿ ಕೊಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಇಡೀ ಇಂಡಿಯಾ ದೇಶದಲ್ಲೇ ನಮ್ಮದು ಚೆನ್ನಾಗಿದೆಯೆಂದು ಕಾಣುತ್ತದೆ. ಒಂದುವೇಳೆ ಬೇರೆಯಕಡೆ ಹೆಚ್ಚಿಗೆ ಕೊಟ್ಟಿದ್ದರೆ ನಾವು ಕೂಡ ಕೊಡಲು ಮನಸ್ಸು ಮಾಡೋಣ. ಇನ್ನೂ ಅನೇಕ ಸಲಹೆ ಸೂಚನೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಅವುಗಳನ್ನು ಅನುಷ್ಠಾನಕ್ಕೆ ತರುವಾಗ ಜ್ಞಾಪಕದಲ್ಲಿಟ್ಟುಕೊಳ್ಳುತ್ತೇನೆ.

ಸ್ವಾಮಿ, ಕುಮಾರಿ ಪ್ರಮೀಳಾರವರು ಹೇಳಿದ್ದನ್ನು ನಾನು ಹೇಳುವದಿಲ್ಲ. ಅವರು ಮೂರು ವಿಚಾರಗಳನ್ನು ಹೇಳಿದ್ದಾರೆ. ನ್ಯಾಯ ಪಂಚಾಯಿತಿಗಳನ್ನು ಸ್ಥಾಪನೆ ಮಾಡಿ ಎನ್ನುವುದು ಅದರಲ್ಲಿ ಒಂದು ಅಂಶ. ಮತ್ತೆ ಮೇಘಾಲಯದಲ್ಲಿ ಸಂವಿಧಾನದ ಆರನೇ ಷೆಡ್ಯೂಲ್‌ನಲ್ಲಿ ಇರುವುದನ್ನು ರಿಯಾಯ್ತಿ ನೀಡಿ ಕ್ರಿಮಿನಲ್ ಮತ್ತು ಸಿವಿಲ್ ಪ್ರೊಸಿಜರ್ ಕೋಡ್‌ಗಳನ್ನು ಅಮೆಂಡ್ ಮಾಡಿ ಒಂದು ಕಾನೂನು ಮಾಡಿದ್ದಾರೆ. ಅಂತಹ ಒಂದು ಕಾನೂನನ್ನು ನಾವು ಇಲ್ಲಿ ತರುವುದಾದರೆ ನಮ್ಮಲ್ಲಿ ಕೇಸ್‌ಗಳ ಸಂಖ್ಯೆ ಕಡಿಮೆಯಾಗಬಹುದೇ ಎಂಬುದು ಯೋಚಿಸಬೇಕಾದಂಥ ವಿಷಯ. ನಿನ್ನೆ ದಿವಸ ಶ್ರೀ ಬಸವಲಿಂಗಪ್ಪನವರು ಒಂದು ಪಾಯಿಂಟ್ ಹೇಳಿದರು, ಏನೆಂದರೆ, ಟ್ರಿಬ್ಯುನಲ್‌ಗಳಲ್ಲಿ ಇಷ್ಟು ಕೇಸುಗಳ ಬಗ್ಗೆ ಅಪೀಲ್ ಹೋಗಿರುವಾಗ ಇನ್ನು ಉಳಿದ ಕೇಸುಗಳು ಸರಿಯಾಗಿವೆ ಎಂದು ಭಾವಿಸಬಹುದಲ್ಲ ಎಂದು. ಈ ಅನಾಲಜಿ ಮೇರೆಗೆ ಅದು ಸರಿಹೋಗುತ್ತದೆ. ಆದರೆ ಭೂನ್ಯಾಯ ಮಂಡಳಿಗಳ ಮುಂದೆ ಸಾಕ್ಷಿಗಳು ಸುಳ್ಳು ಹೇಳುವುದು ಅಪರಾಧ. ಯಾವ ಯಾವ ಭೂನ್ಯಾಯ ಮಂಡಳಿಗಳಲ್ಲಿ ಏನೇನು ನಡೆದಿದೆಯೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ಸ್ಟಡಿ ಮಾಡುತ್ತೇನೆ. ಅದು ಫಿಸಿಬಲ್ ಆಗಿದ್ದರೆ ಸಾಧ್ಯವಾದ ಎಲ್ಲ ಕ್ರಮಗಳನ್ನು ಖಂಡಿತ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾನಯ್ಯ.—ಜೊತೆಗೆ ಸ್ವಲ್ಪ ಬೇರೆಯವರನ್ನೂ ಡೆಲಿಗೇಷನ್ ಜೊತೆಯಲ್ಲಿ ತೆಗೆದುಕೊಂಡು ಹೋಗಿ.

MR. SPEAKER.—Take Mr. Nanaiah also.

SRI Y. RAMAKRISHNA.—Let them come and study. I have no objection. ಇನ್ನು ಕೋರ್ಟ್ ಫೀ ರಿಯಾಯ್ತಿ ಕೊಡುವುದಾದರೆ They can claim damage against the acts of the Government servants for the loss they have sustained. I see reason in this. ಇದರ ಬಗ್ಗೆ ಇಂಡಿಯಾ ಗವರ್ನಮೆಂಟಿನ Rationalisation Committee ಅವರಿಗೆ ಕಾಗದ ಬರೆಯುತ್ತೇನೆ. ಸೂಕ್ತವಾಗಿ ಕಂಡುಬಂದರೆ ಮತ್ತು ಅಂತೆಯೇ ನಿರ್ಣಯ ಕೊಟ್ಟರೆ ನಾನು ಕೂಡ ಅದಕ್ಕೆ ಬದ್ಧನಾಗಿರುತ್ತೇನೆ ಎಂದು ಈ ಸಭೆಯಲ್ಲಿ ತಿಳಿಸುವುದಕ್ಕೆ ಸಂತೋಷಪಡುತ್ತೇನೆ. ಮತ್ತೊಂದು ವಿಷಯ. ಅದು Opening of Refreshment courses ಬಗ್ಗೆ, ನನಗನ್ನಿಸುತ್ತದೆ. ನಾವು ಸಾಮಾನ್ಯವಾಗಿ ಸುಪ್ರೀಂ ಕೋರ್ಟ್‌ಗೆ, ಹೈಕೋರ್ಟ್‌ಗೆ ಸೋಶಿಯಲ್ ಲೆಜಿಸ್ಲೇಷನ್ ಬಗ್ಗೆ ಹೋಗುತ್ತೇವೆ. ಅದರ ಅವಶ್ಯಕತೆ ನನಗೆ ಕಾಣುತ್ತಿಲ್ಲ. ಆದರೆ ಅಧಿಕಾರಿಗಳಿಗೆ ಇಂತಹ ಒಂದು ರೆಫ್ರೆಶ್‌ಮೆಂಟ್ ಕೋರ್ಸ್‌ನ್ನು ಕೊಡುವ ವ್ಯವಸ್ಥೆ ಈಗ ಮೈಸೂರಿನಲ್ಲಿದೆ. ಉದಾಹರಣೆಗೆ ಹೇಳುವುದಾದರೆ ಲ್ಯಾಂಡ್ ಅಕ್ವಿಸೆಶನ ಕೇಸ್‌ಗಳಲ್ಲಿರತಕ್ಕಂಥ ವ್ಯತ್ಯಾಸಗಳು ಇಲಾಖೆಯ ಅಧಿಕಾರಿಗಳಿಗೆ ಗೊತ್ತಿರುವುದಿಲ್ಲ. ಹೈಕೋರ್ಟ್‌ನಲ್ಲಿ ಯಾವ ಯಾವ ಪಾಯಿಂಟ್‌ಗಳ ಮೇಲೆ ಇದನ್ನು ಹಾಕುತ್ತೇವೆ ಎಂಬುದು ಅವರಿಗೆ ಸರಿಯಾಗಿ ಗೊತ್ತಿರುವುದಿಲ್ಲ ಅದೇ ರೀತಿಯಲ್ಲಿ ಬಡವರಿಗೆ ಸೈಟುಗಳನ್ನು ಕೊಡತಕ್ಕಂಥ ವಿಷಯ ಇರಬಹುದು. ಜಮೀನು ಕಳೆದುಕೊಂಡವರಿಗೆ ಪುನರ್‌ವಸತಿ ಮಾಡತಕ್ಕಂಥ ವಿಚಾರ ಇರಬಹುದು. ಈ ವಿಷಯಗಳಲ್ಲಿ ಅಧಿಕಾರಿಗಳಿಗೆ ತರಬೇತಿಯನ್ನು ಈಗಾಗಲೇ ಕೊಡುತ್ತಿದ್ದೇವೆ. ಒಂದು ಸಲ, ಎರಡು ಸಲ ಅಡ್ವೋಕೇಟ್ ಜನರಲ್, ಲಾ ಸೆಕ್ರೆಟರಿಯವರು ಅಲ್ಲಿ ಎರಡು-ಮೂರು ಕಾನ್ಫರೆನ್ಸ್‌ಗಳನ್ನು ಮಾಡಿದ್ದಾರೆ. ಆದ್ದರಿಂದ ಅದರ ಅವಶ್ಯಕತೆ ಜಡ್ಜ್‌ಗಳಿಗೆ ಇರಲಾರದು. ಫಾರಿನ್‌ನಲ್ಲಿ Legal terminology programme ಮತ್ತು Client advocasy programme ಇದೆ ಎಂದು ಹೇಳಿದ್ದಾರೆ. ಅದು ನನಗೆ ಸರಿಯಾಗಿ ಅರ್ಥ

ಆಗಿಲ್ಲ. ಅದರ ಬಗ್ಗೆ ಹೆಚ್ಚಿನ ವಿವರಗಳನ್ನು ಅವರು ಕೊಟ್ಟರೆ ಅದನ್ನು ಸ್ಟಡಿ ಮಾಡುವುದಕ್ಕೆ ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿಕೊಡುತ್ತೇನೆ. ಉತ್ತಮವಾಗಿದ್ದರೆ ಅಡಾಪ್ಟ್ ಮಾಡೋಣ.

ಮತ್ತೊಂದು ವಿಚಾರವೆಂದರೆ ೧೦೦ ಜನ ಮಹಿಳೆಯರಿಗೆ ಸ್ಟೈಪೆಂಡರಿ ಕೊಡುವುದಕ್ಕೆ ಬದಲು ೫ ಜನರಿಗೆ ಮಾತ್ರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ನಾವು ಒಂಬತ್ತು ಜನರಿಗೆ ಕೊಟ್ಟಿದ್ದೇವೆ. ಆ ಒಂಬತ್ತು ಜನರ ಹೆಸರುಗಳನ್ನು ಬೇಕಾದರೆ ಹೇಳುತ್ತೇನೆ.

ಕುಮಾರಿ ಎಸ್. ಪ್ರಮೀಳ.—೪೫ ಇದ್ದುದನ್ನು ೧೦೦ ಮಾಡಿದಿರಿ. ಆದರೆ ಒಂಬತ್ತು ಜನರಿಗೆ ಮಾತ್ರ ಕೊಟ್ಟಿದ್ದೀರಲ್ಲ ?

ಶ್ರೀ ವೈ. ರಾಮಕೃಷ್ಣ.—ಸಿ ಅಂಡ್ ಆರ್ ರೂಲ್ಸ್ ಪ್ರಕಾರ ಅದರಲ್ಲಿ ಎಸ್‌ಸಿ, ಎಸ್‌ಟಿ, ಬಿಟಿ, ಬಿಎಸ್‌ಟಿ ಕ್ಯಾಟಗಿರಿಯವರು ಬರುತ್ತಾರೆ. ಅವರಿಗೂ ಕೂಡ ಕೊಡಬೇಕಾಗುತ್ತದೆ. ಕೆಲವರಿಗೆ ಯಾಕೆ ಕೊಟ್ಟಿಲ್ಲ ಎಂದರೆ ಅವರು ಬಹುಶಃ ಹಣವಂತರು ಇರಬಹುದು, ಶ್ರೀಮಂತರು ಇರಬಹುದು.

ಕುಮಾರಿ ಎಸ್. ಪ್ರಮೀಳ.—ನಾನು ಮಹಿಳೆಯವರಿಗೆ ರಿಸರ್ವೇಶನ್ ಕೇಳುತ್ತಿದ್ದೇನೆ. ಈ ಅಧಿಕಾರವನ್ನು ಗಂಡಸರಿಗೆ ಕೊಟ್ಟರೆ ಅವರು ಏನು ಮಾಡಿದರೂ ಕೊಡುವುದಿಲ್ಲ.

(ಗೊಂದಲ)

ಶ್ರೀ ವೈ. ರಾಮಕೃಷ್ಣ.—ಇಷ್ಟು ವಿಚಾರಗಳನ್ನು ಶ್ರೀಮಂತಿ ಪ್ರಮೀಳಾರವರು ಹೇಳಿದ್ದಾರೆ. ಮತ್ತೊಂದು ವಿಚಾರ ಅನಿಮಲ್ ಹಸ್ಬೆಂಡರಿ ಬಗ್ಗೆ ಹೇಳಿದ್ದಾರೆ.

೧-೦೦ ಪಿ.ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಒಂದು ಗಂಟೆ ಆಯಿತು, ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡಲು ಇನ್ನೂ ಒಂದು ಗಂಟೆ ಬೇಕು ಎಂದು ಕಾಣಿಸುತ್ತದೆ.

ಶ್ರೀ ವೈ. ರಾಮಕೃಷ್ಣ.—ಇನ್ನು ೧೫ ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೫ ನಿಮಿಷದಲ್ಲಿ ಆಗುವುದಿಲ್ಲ. ಎಲ್ಲಾ ಪಾಯಿಂಟ್ಸ್ ಕವರ್ ಮಾಡಿದರೆ ಒಳ್ಳೆಯದು, ನಾನು ಸ್ವಾಗತ ಮಾಡುತ್ತೇನೆ. ತಾವು ಹೇಳುವ ಧಾಟಿ ನೋಡಿದರೆ ಅದಕ್ಕೆ ಇನ್ನೂ ಒಂದು ಗಂಟೆ ಬೇಕಾಗುತ್ತದೆ.

ಅಧ್ಯಕ್ಷರು.—ಅವರು ಉತ್ತರ ಮುಗಿಸಲಿ, ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಎಲ್ಲಾ ಮುಗಿಯಿತು.—ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕು. ಕುಮಾರಿ ಪ್ರಮೀಳರವರು ಮತ್ತೊಂದು ವಿಚಾರವನ್ನು ಅನಿಮಲ್ ಹಸ್ಬೆಂಡರಿ ಬಗ್ಗೆ ಹೇಳಿದ್ದಾರೆ, ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್ ತೆಗೆದುಕೊಂಡಾಗ ನಾನು ಹೇಳುತ್ತೇನೆ.

ಶ್ರೀ ವಿ. ಬಿ. ಭಾವಿ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.—ಆಮೇಲೆ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಡವಾದರೆ ನಮಗೆ ಊಟ ಸಿಕ್ಕುವುದಿಲ್ಲ, ಮತ್ತೆ ೩ ಗಂಟೆಗೆ ಕೂಡೋಣ.

ಅಧ್ಯಕ್ಷರು.—ಅವರು ಉತ್ತರ ಮುಗಿಸಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನೂ ಎರಡು ಮೂರು ಡಿಪಾರ್ಟ್‌ಮೆಂಟ್ಸ್ ಇದೆ.

ಅಧ್ಯಕ್ಷರು.—ತಮಗೆ ಎಷ್ಟು ಟೈಂ ಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ. ಇನ್ನು ೨೦ ನಿಮಿಷ ಬೇಕಾಗುತ್ತದೆ, ೨೦ ನಿಮಿಷಗಳಲ್ಲಿ ಮುಗಿಸುತ್ತೇನೆ. ನನ್ನ ಭಾಷಣವನ್ನು ಕಟ್ ಮಾಡುತ್ತೇನೆ.

ಶ್ರೀ ಬಿ. ರಾಮೇಗೌಡ.—ಕ್ಲಾರಿಫಿಕೇಷನ್‌ಗೆ ಒಂದು ಗಂಟೆ ಬೇಕಾಗುತ್ತದೆ.

ಅಧ್ಯಕ್ಷರು.—ಉತ್ತರವನ್ನು ಅರ್ಧದಲ್ಲಿ ನಿಲ್ಲಿಸಿದರೆ ಸರಿಹೋಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಗಂಗಾಧರನ್‌ರವರು ಭಾಷಣ ಮಾಡುತ್ತಾ ೧೦ ವರ್ಷಗಳಿಂದ ಸಬ್‌ಸ್ಟ್ಯಾನ್‌ಷಿಯಲ್ ಬಿಲ್ ತಂದಿಲ್ಲ, ಬರೀ ಅಮೆಂಡ್‌ಮೆಂಟ್ಸ್ ತೆಗೆದುಕೊಂಡು ಬಂದಿದ್ದಾರೆ ಎನ್ನತಕ್ಕ ವಿಚಾರವನ್ನು ಹೇಳಿದ್ದಾರೆ. ಸೋಷಿಯಲ್ ಲೆಜಿಸ್ಲೇಷನ್ ತಂದು ಇಷ್ಟು ದೊಡ್ಡ ಅರಿಯರ್ಸ್ ಇದ್ದು ನಾವು ಪಡುತ್ತಿರುವ ಕಷ್ಟ ಸಾಕಾಗಿದೆ. ಇನ್ನು ಸಬ್‌ಸ್ಟ್ಯಾನ್‌ಷಿಯಲ್ ಬಿಲ್‌ನ ಅವಶ್ಯಕತೆ ಇದ್ದರೆ ತರೋಣ, ಅವಶ್ಯಕತೆ ಕಂಡಾಗ ತರೋಣ. ಉದಾಹರಣೆಗೆ ಹೇಳುವುದಾದರೆ, ಅಡ್ವೋಕೇಟ್ಸ್ ಆಕ್ಟ್ ಈಗ ಇಂಟರ್‌ಡ್ಯೂಸ್ ಮಾಡುತ್ತೇವೆ. ಅದು ರೆಡಿಯಾಗಿದೆ, ಮತ್ತೆ ತಾವು ಕನ್ನಡದಲ್ಲಿ ಬಿಲ್‌ಗಳನ್ನು ತಯಾರುಮಾಡಿ ಎಂದು ಹೇಳಿದಿರಿ. ನಾನು ಕನ್ನಡದಲ್ಲಿ ಬಿಲ್ಲುಗಳನ್ನು ಮಾಡಿಸುತ್ತಾ ಇದ್ದೇನೆ. ದೇವದಾಸಿ ಬಿಲ್ ಕನ್ನಡದಲ್ಲಿ ರೆಡಿಯಾಗಿದೆ. ಅದನ್ನೂ ಕೂಡ ಈ ಅಧಿವೇಶನದೊಳಗೆ ಇಂಟರ್‌ಡ್ಯೂಸ್ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ಮತ್ತು ಕೆ.ಡಿ.ಆರ್. ಆಕ್ಟ್ (ರಿಪೀಲಿಂಗ್) ಅದೂ ಕೂಡ ರೆಡಿಯಾಗಿದೆ. ಈ ಮೂರು ಬಿಲ್ಲುಗಳನ್ನು ಈ ಅಧಿವೇಶನದಲ್ಲಿ ಇಂಟರ್‌ಡ್ಯೂಸ್ ಮಾಡುವುದಕ್ಕೆ ತಯಾರಾಗಿದ್ದೇನೆ. ನಾವು ಕನ್ನಡದಲ್ಲಿ ಬಿಲ್ಲುಗಳನ್ನು ಏಕೆ ಮಾಡುತ್ತಾ ಇರಲಿಲ್ಲ ಎನ್ನುವುದು ತಮಗೆ ಗೊತ್ತಿದೆ, ಕಾನ್‌ಸ್ಟಿಟ್ಯೂಷನ್‌ನಲ್ಲಿ ಇಂಗ್ಲೀಷ್‌ನಲ್ಲಿ ಮಾಡಬೇಕು ಎಂದು ಇತ್ತು. ಕಳೆದ ಅಧಿವೇಶನದಲ್ಲಿ ಕನ್ನಡದಲ್ಲಿ ಮಾಡಬಹುದು ಎಂದು ತಿದ್ದುಪಡಿ ತಂದಾಗ ಮಾನ್ಯ ಸಭೆ ಅದಕ್ಕೆ ಒಪ್ಪಿಗೆ ಕೊಟ್ಟಿದೆ. ಸಭೆ ಒಪ್ಪಿಗೆ ತೆಗೆದುಕೊಂಡ ಮೇಲೆ ಇವತ್ತಿನ ದಿವಸ ದೇವದಾಸಿ ಬಿಲ್ಲನ್ನು ಕನ್ನಡದಲ್ಲಿ ಮಾಡಿಸಿದ್ದೇನೆ. ಇನ್ನು ಮುಂದೆ ಬರತಕ್ಕ ಎಲ್ಲಾ ಬಿಲ್ಲುಗಳನ್ನೂ ಕೂಡ ಕನ್ನಡದಲ್ಲಿ ಮಾಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ ಎನ್ನತಕ್ಕ ಆಶ್ವಾಸನೆಯನ್ನು ಕೊಡುತ್ತಾ ಇದ್ದೇನೆ. ಮಾನ್ಯ ಗಂಗಾಧರನ್‌ರವರು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕಾಪಿಯಿಂಗ್ ಶೀಟ್ಸ್ ಸಿಕ್ಕುವುದು ಕಷ್ಟ, ಡಿಲೇ ಆಗುತ್ತದೆ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಅದಕ್ಕೋಸ್ಕರ ರೂಲ್ ಅಮೆಂಡ್‌ಮೆಂಟ್ ಮಾಡಬೇಕಾಗಿದೆ. ಇವತ್ತು ಜೆರಾಕ್ಸ್ ಮಿಷಿನ್ ಮತ್ತು ಫೋಟೋಸ್ಟೇಟ್ಸ್—ಇವೆರಡನ್ನೂ ಕೂಡ ಕೋರ್ಟುಗಳಲ್ಲಿ ಇಂಟರ್‌ಡ್ಯೂಸ್ ಮಾಡಬೇಕು ಎಂದು ರೂಲ್ ತಿದ್ದುಪಡಿ ಮಾಡಬೇಕು ಎಂದು ಈಗಾಗಲೇ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಸುಮಾರು ಒಂದು ತಿಂಗಳಲ್ಲಿ ಇದು ಕಾರ್ಯಾಚರಣೆಗೆ ಬರಬಹುದು ಎಂದು ಸಂತೋಷದಿಂದ ತಿಳಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ ಗಂಗಾಧರನ್‌ರವರು ಕಾನೂನನ್ನು ಸರಿಯಾಗಿ ಪರಿಪಾಲಿಸುತ್ತಾ ಇಲ್ಲ ಎಂದು ಹೇಳಿದ್ದಾರೆ. ನಾನು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್ ವಿಚಾರ ಬಂದಾಗ ಹೇಳಬೇಕು ಎಂದು ಇದ್ದೆ. ಕಾನೂನನ್ನು ಪರಿಪಾಲನೆ ಮಾಡುವುದರೊಳಗೆ ಕಾನೂನು ಡಿಪಾರ್ಟ್‌ಮೆಂಟ್ ಮೊಟ್ಟಮೊದಲನೆಯದು. ಇದನ್ನು ಅವರು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ಹೇಳಿದ್ದಾರೆ. ೬ ತಿಂಗಳಲ್ಲಿ ಅಂದರೆ ೧ನೇ ತಾರೀಖು ೧ನೇ ತಿಂಗಳು ೧೯೮೨ನೇ ಇಸವಿಯಿಂದ ಇದುವರೆಗೆ ನಾವು ಗೋವಧೆ ಕಾನೂನಿನ ಕೆಳಗೆ ಕೈಗೊಂಡಿರತಕ್ಕ ಕಾರ್ಯಕ್ರಮ ೨೪. ಬಹುಶಃ ಯಾವ ಸರ್ಕಾರ ಕೂಡ ಇಷ್ಟೊಂದು ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಧಾಳಿ ನಡೆಸಿರತಕ್ಕಂಥಾದ್ದು ೨೪ ಅಂಗಡಿಗಳದ್ದು. ನನ್ನ ಹತ್ತಿರ ಫಿಗರ್ಸ್ ಇದೆ, ಅನೇಕ ಸಾವಿರ ರೂಪಾಯಿಗಳು ಪೋರ್ಕ್, ಬೀಫ್ ಮತ್ತು ಮಟನ್ ಸೀಜ್ ಮಾಡಿದ್ದೇವೆ. ಅದನ್ನು ಇವತ್ತು ಡೆಸ್ಟ್ರಾಯ್ ಮಾಡಿದ್ದೇವೆ. ಮತ್ತು ಹೈವೇಗಳಲ್ಲಿ ದನಗಳನ್ನು ಹೊಡೆದುಕೊಂಡು ಹೋಗುವವರನ್ನು ಹಿಡಿದು ಕೇಸ್ ಹಾಕಿದ್ದೇವೆ. ಇವತ್ತು ೬೫ ದನಗಳನ್ನು ಗೋಸಂರಕ್ಷಣಾ ಕೇಂದ್ರಕ್ಕೆ ಒಪ್ಪಿಸಿದ್ದೇವೆ. We have taken prompt action to protect the lives of the animals under Cow Protection Act. ಏಕೆಂದರೆ ತಾವು ಹೇಳಿದಿರಿ, ಅದಕ್ಕೋಸ್ಕರ ತಮಗೆ ಹೇಳುತ್ತಿದ್ದೇನೆ. ಮತ್ತೆ ಟೇಪ್ ರಿಕಾರ್ಡ್ ಸಿಸ್ಟಮನ್ನು ಇಂಟರ್‌ಡ್ಯೂಸ್ ಮಾಡಬೇಕು ಮತ್ತು ಮಾನ್ಯ ಸಭೆಯ ನಡೆವಳಿಕೆಯನ್ನು ಟೆಲಿವೈಸ್ ಮಾಡಬೇಕು ಎನ್ನುವ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಈಗ ಇಲ್ಲಿ ಟೇಪ್ ರಿಕಾರ್ಡ್‌ಗೆ ಅವಕಾಶ ಇದೆ. ಈಗಾಗಲೇ ನಾವು ಅದನ್ನು ಇಟ್ಟಿದ್ದೇವೆ. ಆದರೆ ಟೆಲಿವೈಸ್ ಮಾಡುವುದಕ್ಕೆ ಅದು ಒಂದು ನ್ಯಾಷನಲ್ ಪಾಲಿಸಿ ಆಗುತ್ತದೆ. ಈ ರೀತಿ ಎಲ್ಲೂ ಮಾಡಿಲ್ಲ. Yov have drrwn the attention of the Government to this aspect of the matter. I will certainly get it examined.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ. ಈ ಶಾಸಕಾಂಗದ ಉಪಸಮಿತಿಗಳು ಆಗಾಗ್ಯೆ ಬಹಳ ಮುಖ್ಯವಾದಂಥ ವರದಿಗಳನ್ನು ಸರ್ಕಾರಕ್ಕೆ ಕೊಡುತ್ತವೆ. ತಮ್ಮ ಅನುಭವದಲ್ಲಿ ಮತ್ತು ನಮ್ಮೆಲ್ಲರ ಅನುಭವದಲ್ಲಿ ಗೊತ್ತಾಗಿರುವುದೇನೆಂದರೆ, ಇದುವರೆಗೆ ಅದಕ್ಕೆ ಒಂದು ಪೈಸೆ ಬೆಲೆ ಕೂಡ

ನಾವು ಕೊಡುತ್ತಾ ಇಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತಾ ಇದ್ದೇನೆ. ಆದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈ ಉಪಸಮಿತಿಗಳವರು ಯಾವುದೇ ಒಂದು ಸಮಸ್ಯೆ ಬಗ್ಗೆ ಅಧ್ಯಯನ ಮಾಡಿ ಏನು ವರದಿಯನ್ನು ಕೊಟ್ಟಿರುತ್ತಾರೋ ಆ ವರದಿಯಲ್ಲಿ ಏನು ಶಿಫಾರಸು ಗಳನ್ನು ಮಾಡಿರುತ್ತಾರೋ ಆ ಶಿಫಾರಸುಗಳ ಬಗ್ಗೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ, ಮತ್ತೆ ಯಾವ ಶಿಫಾರಸುಗಳನ್ನು ಒಪ್ಪಿಕೊಂಡಿದೆ, ಅವುಗಳನ್ನು ಯಾವರೀತಿ ಕಾರ್ಯಗತ ಮಾಡುತ್ತಿದೆ ಮತ್ತು ಕೆಲವು ಶಿಫಾರಸುಗಳನ್ನು ಒಪ್ಪದೇ ಇದ್ದರೆ ಅದಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಒಂದು ಪುಟದ ಹೇಳಿಕೆ ಮಾಡಿದರೆ ನಮಗೂ ಗೊತ್ತಾಗುತ್ತದೆ. ಸರ್ಕಾರ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎನ್ನುವುದು ಸಾರ್ವಜನಿಕರಿಗೂ ಕೂಡ ಗೊತ್ತಾಗುತ್ತದೆ. ಮತ್ತೆ ನಿಯಮಾವಳಿಗಳನ್ನು ಬದಲಾವಣೆ ಮಾಡತಕ್ಕ ಬಗ್ಗೆ ಒಂದು ಸಮಿತಿಯನ್ನ ರಚನೆ ಮಾಡಿದ್ದೀರಿ, ಅದರಲ್ಲಿ ಏನಾದರೂ ಬದಲಾವಣೆಮಾಡಿ ಆ ಹೊಣೆಗಾರಿಕೆಯನ್ನು ಮಂತ್ರಿಗಳಿಗೆ ಕೊಡಿ, ಏಕೆಂದರೆ, ಮಂತ್ರಿಗಳು ಅದನ್ನು ಓದಿ ನೋಡಿರುವುದಿಲ್ಲ. ನಾವೇನಾದರೂ ಇಲ್ಲಿ ಪ್ರಸ್ತಾಪ ಮಾಡಿದಾಗ, ಏನಾದರೂ ಬಿಚ್ಚಿ ನೋಡುತ್ತಾರೋ ಏನೋ ಗೊತ್ತಿಲ್ಲ. ಆದುದರಿಂದ ಈ ಉಪಸಮಿತಿಗಳು ಮಾಡತಕ್ಕ ಕೆಲಸಕ್ಕೆ ಸ್ವಲ್ಪ ಗೌರವ ಬರಬೇಕಾದರೆ, ಈ ಸದನದಲ್ಲಿ ಯಾರೇ ಶಾಸಕರಾಗಲಿ, ಅವರು ಗೌರವಯುತ ವಾಗಿ ಕೆಲಸಮಾಡುವುದಕ್ಕೆ ಅವರು ಮಾಡಿದಂಥ ಕೆಲಸಕ್ಕೆ ಕಿಮ್ಮತ್ತು ಬರಬೇಕಾದರೆ ದಯಮಾಡಿ ಸರ್ಕಾರವೂ ಕೂಡ ಅಷ್ಟೇ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗುತ್ತದೆ. ಜವಾಬ್ದಾರಿಯುತ ವಾಗಿ ನಡೆದುಕೊಳ್ಳಬೇಕಾದರೆ, ನನ್ನ ಸಲಹೆ ಏನೆಂದರೆ, ಸಂಬಂಧಪಟ್ಟ ಮಂತ್ರಿಗಳು ಈ ಉಪಸಮಿತಿ ಗಳು ಮಾಡಿರತಕ್ಕ ಶಿಫಾರಸುಗಳ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕಾಗುತ್ತದೆ. ಆದ್ದರಿಂದ ಈಗಿನ ನಿಯಮವನ್ನು ಮಾನ್ಯ ಮಂತ್ರಿಗಳು ಬದಲಾವಣೆ ಮಾಡುತ್ತಾರೆಯೋ ಎನ್ನುವುದನ್ನು ತಿಳಿಸಬೇಕು.

SRI Y. RAMAKRISHNA.—I do not differ. It is a very good suggestion. I welcome it. ನಮ್ಮ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಈ ಒಂದು ಕಾಲವನ್ನು ಅಳವಡಿಸಬೇಕು ಎಂದು ಹೇಳುತ್ತಾ ಇದ್ದೀರಿ. ಈಗ ಒಂದು ಹೊಸ ಪದ್ಧತಿಯನ್ನು ನಾವು ಜಾರಿಗೆ ತರುವುದಕ್ಕೆ ಬುಕ್ಸ್ ಎಲ್ಲಾ ತಮಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರಿಗೆಲ್ಲಾ ಸರ್ಕ್ಯುಲೇಟಾಗಿದೆ. ಇಷ್ಟರಲ್ಲೇ ಅದನ್ನು ಸಭೆಯ ಒಪ್ಪಿಗೆಗೆ ತೆಗೆದುಕೊಳ್ಳುತ್ತಾ ಇದ್ದೇವೆ. ಅದು ಚರ್ಚೆಗೆ ಬರುತ್ತದೆ. ಲೋಕಸಭಾ ಪ್ಯಾಟರ್ನ್ ಅಡಾಪ್ಟ್ ಮಾಡಿಕೊಂಡಿದ್ದೇವೆ. ಕೊಶ್ಚನ್ಸ್ ಹೇಗೆ ಇರಬೇಕು, ಬೇರೆಯದು ಹೇಗೆ ಇರಬೇಕು ಎಂದು ಪ್ರತಿಯೊಂದನ್ನೂ ಕೂಡ ಕೂಲಂಕಷವಾಗಿ ಪರಿಶೀಲನೆ ಮಾಡಿ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ನಾವು ಬದ್ಧರಾಗುತ್ತೇವೆ. ಅದನ್ನು ಒಂದು ವಾರದಲ್ಲಿ ತೆಗೆದು ಕೊಳ್ಳುತ್ತೇವೆ. ಸ್ವಾಮಿ, ನನಗೆ ಸದಸ್ಯರುಗಳು ಪೀಡಿಸುವುದು ಏನೆಂದರೆ, ಈ ಅಧಿಕೃತ ವರದಿಗಾರರ ವಿಷಯ. ನಾನು ಏನೋ ಭಾಷಣ ಮಾಡಿಬಿಟ್ಟಿದ್ದೇನೆ, ನಾನು ಏನೋ ಭಾಷಣ ಮಾಡಿಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ಬಹುಶಃ ನೀವು ಈ ಜಾಗದಲ್ಲಿ ಕೂತಿದ್ದರೂ ಹಾಗೇ ಭಾಷಣ ಮಾಡುವುದು. ನಾನು ಹಾನೆಸ್ಟಾಗಿ ಹೇಳುತ್ತೇನೆ, ನನ್ನ ಮನಸ್ಸು ಏನು ಎನ್ನುವುದು ವರದಿಗಾರರಿಗೆ ಗೊತ್ತು. ನಾನು ಏನು ಮಾಡಿದ್ದೇನೆ ಎನ್ನುವುದು ಅವರಿಗೆ ಗೊತ್ತಿದೆ. ಅದಕ್ಕೆ ನಾನು ಒಬ್ಬನೇ ಅಲ್ಲ, ಫೈನಾನ್ಸ್ ಡಿಪಾರ್ಟ್‌ಮೆಂಟ್ ಒಪ್ಪಬೇಕಾಗುತ್ತದೆ. They are satisfied with my bona-fide. ಆದರೆ ಒಂದು ವಿಷಯ. ಯಾವ ರಾಜ್ಯದಲ್ಲೂ ಕೂಡ ಇಲ್ಲದೇ ಇರತಕ್ಕಂಥ ಸಂಬಳವನ್ನು ನಾವು ಇಲ್ಲಿ ಕೊಡುವುದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಒಪ್ಪುವುದಿಲ್ಲ. ಅದಕ್ಕೋಸ್ಕರವಾಗಿ ಎಲ್ಲಾ ರಾಜ್ಯಗಳಲ್ಲಿ ಏನೇನು ಗ್ರೇಡ್ ಇದೆ, ಅದನ್ನು ತರಿಸಿ ಎಂದು ನಾನು ಹೇಳಿದ್ದೇನೆ, ತರಿಸಲಿ, ಅದನ್ನು ಪುನರ್ಪರಿಶೀಲನೆ ಮಾಡಿ ಅವರಿಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ನಾನು ಮೊದಲಿಗ ಎನ್ನತಕ್ಕಂಥಾದ್ದನ್ನು ನಾನು ಇಲ್ಲಿ ಹೇಳುವುದಕ್ಕೆ ತಯಾರಾಗಿದ್ದೇನೆ.

SRI M. C. NANAIAH.—For everything you say it. Do not become a borrowing state.

ಶ್ರೀ ಹೆಚ್. ಗಂಗಾಧರನ್,— ಹೋಗಲಿ, ವರದಿಗಾರರ ಪ್ರಮೋಷನ್ ವಿಚಾರ ಹೇಳಿ. ಏಕೆಂದರೆ, Juniors have become the officers there.

ಶ್ರೀ ವೈ. ರಾಮಕೃಷ್ಣ.—ಕ್ಯಾಬಿನೆಟ್ ಸಬ್ ಕಮಿಟಿಯೊಳಗೆ ನಾನೇ ಇದ್ದೆ, ಅವರಿಗೆ ಏನು ಕೊಡಬೇಕೋ ಅದನ್ನು ನಾವು ಇವತ್ತಿನ ದಿವಸ ಕೊಡಿಸಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಸಂಬಳದ ಬಗ್ಗೆ ಅಲ್ಲ, ವರದಿಗಾರರಿಗೆ ಪ್ರಮೋಷನಲ್ ಆಪರ್ಚುನಿಟೀಸ್, ಗ್ರೇಡ್, ಕ್ಲಾಸ್ ಕೊಡುವ ಬಗ್ಗೆ ಹೇಳಿ.

MR. SPEAKER.—It comes within the jurisdiction of the Legislature Secretariate. Why discussing it here?

ಶ್ರೀ ಹೆಚ್. ಗಂಗಾಧರನ್.—ಅದು ಅವರ ಪೋರ್ಟ್‌ಪೋಲಿಯೋ ತಾನೆ. ನಿನ್ನೆ ನಮ್ಮ ಡಿಬೇಟ್‌ನಲ್ಲಿ ಆ ಪಾಯಿಂಟನ್ನು ರೈಸ್ ಮಾಡಿದ್ದೆವು, ಅದಕ್ಕೋಸ್ಕರ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಅದರ ಬಗ್ಗೆ ಸರಿಯಾಗಿ ಅಭ್ಯಾಸ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಲೆಜಿಸ್ಲೇಚರ್ ಸೆಕ್ರೆಟರಿಯೇಟನ್ನು ಸಪರೇಟ್ ಮಾಡಿಬಿಡಿ. ಲೋಕಸಭಾ ರೀತಿ ಮಾಡಿಬಿಡಿ. ಮಾನ್ಯ ಸ್ಪೀಕರ್‌ರವರು ಮಂತ್ರಿಗಳಾಗಿದ್ದಾಗ ಈ ಪ್ರಯತ್ನ ನಡೆಯಿತು, ಲೆಜಿಸ್ಲೇಚರ್ ಸೆಕ್ರೆಟರಿಯೇಟನ್ನು ಸಪರೇಟ್ ಮಾಡಿಬಿಟ್ಟರೆ ಈ ಸಮಸ್ಯೆಗಳನ್ನೆಲ್ಲಾ ಅವರೇ ಸಾಲ್ವ್ ಮಾಡುತ್ತಾರೆ.

ಶ್ರೀ ವೈ. ರಾಮಕೃಷ್ಣ.—ತಮ್ಮ ಭಾಷಣದಲ್ಲಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು, ಈಗ ಬೋರ್ಡ್ ಇದೆ. ಇವತ್ತು ನಾನೇನೂ ಇಂಟರ್‌ಫಿಯರ್ ಮಾಡುತ್ತಾ ಇಲ್ಲ. ಇವತ್ತು ಬೋರ್ಡಿಗೆ ಇದೆಲ್ಲಾ ಗೊತ್ತಿದೆ.

MR. SPEAKER.—Let us not discuss here.

ಶ್ರೀ ವೈ. ರಾಮಕೃಷ್ಣ.—ಅವರ ಸಮಾಧಾನಕ್ಕೆ ಹೇಳಬೇಕು ತಾನೆ. ಈಗ ಸರ್ಕಾರ ಏನೋ ಒಂದು ಒತ್ತಾಯ ತಂದಂ ಹಾಗೆ ಮಾಡಿದರು ಹೀಗೆ ಮಾಡಿದರು ಅಂದರೆ ನಾವು ಯಾವತ್ತೂ ಒತ್ತಾಯ ತರುವುದಿಲ್ಲ. ಕ್ಲಾಸ್-೪ ಬಗ್ಗೆ ತಾವು ಹೇಳಿದಿರಿ. ಅದು ಅವರ ಆಡಳಿತಕ್ಕೆ ಬರುತ್ತದೆ. It comes under the Board. ಅದಕ್ಕೆ ನಾವು ಕೈ ಹಾಕುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಆ ಪ್ರಶ್ನೆಯನ್ನು ಎತ್ತಿದರು. ಅದಕ್ಕೆ ರಿಪ್ಲೈ ಕೊಡಬೇಕಲ್ಲ ಎಂದು ಕೊಡುತ್ತಿದ್ದೇನೆ, ಅಷ್ಟೆ.

ಶಾಸಕರಿಗೆ ಬೇಕಾಗುವಂಥಾ ವರದಿಗಳು ಸಿಗುತ್ತಿಲ್ಲ, ಉದಾಹರಣೆಗೆ ಫೈನಾನ್ಸಿಯಲ್ ರಿಪೋರ್ಟ್ ಆಗಲೀ, ಎಕಾನಮಿಕ್ ಸರ್ವೆ ಅಂಥಾ ಪುಸ್ತಕಗಳು ಆಗಲೀ ಸಿಗುತ್ತಿಲ್ಲವೆಂದು ಮಾನ್ಯ ಶ್ರೀ ಎಚ್. ಗಂಗಾಧರನ್‌ರವರು ಹೇಳಿದರು, ಅವೆಲ್ಲವನ್ನೂ ಕೂಡ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ. ಸಾಕಷ್ಟು ಹಣವನ್ನು ಅದಕ್ಕೋಸ್ಕರ ಇಡುತ್ತೇವೆ ಎನ್ನತಕ್ಕ ವಿಚಾರವನ್ನು ಸಹ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ಹೈಕೋರ್ಟ್ ಬೆಂಚ್‌ನ್ನು ಓಪನ್ ಮಾಡುವ ವಿಚಾರ ಏನಾಯಿತು ?

ಶ್ರೀ ವೈ. ರಾಮಕೃಷ್ಣ.—ಲಾಯರ್ ಕಾನ್‌ಫರೆನ್ಸ್‌ನಲ್ಲೂ ಕೂಡ ಇದನ್ನು ಒಪ್ಪಿಕೊಂಡು ಒಂದು ರೆಜಲ್ಯೂಷನ್ ಮಾಡಿದ್ದಾರೆ. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. It is a subject matter between the President of India and the Chief Justice of the Supreme Court. ಯಾವಾಗ ಅವರು ಅನುಮತಿ ಕೊಡುತ್ತಾರೋ ಆಗ ಆ ಅನುಮತಿಯನ್ನು ಅನುಸರಿಸಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅದರ infrastructure ಹೇಳುವುದಾದರೆ ಅದಕ್ಕೆ ೧೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಷ್ಟು ದುಡ್ಡು ಬೇಕಾಗುವುದರಿಂದ ಇದರ ಬಗ್ಗೆ ಏನು ಮಾಡಬೇಕು ಎಂದು ನಾವು ಪರ್ಯಾಲೋಚನೆ ಮಾಡುತ್ತಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರದವರಿಂದ ಪರ್ಮಿಷನ್ ಕೂಡ ಬರಬೇಕಾಗಿದೆ ಮತ್ತು ನಮ್ಮ ಆದಾಯವನ್ನು ಕೂಡ ಜಾಸ್ತಿ ಮಾಡಿಕೊಳ್ಳಬೇಕಾಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕ್ಯಾಬಿನೆಟ್‌ನಲ್ಲಿ ಈ ಬಗೆ ಡಿಸಿಷನ್ ಆಗಿದೆಯೋ ? ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ಕ್ಯಾಬಿನೆಟ್ ಡಿಸಿಷನ್ ಅವಶ್ಯಕತೆ ಇಲ್ಲ. ಮುಖ್ಯ ಮಂತ್ರಿಗಳವರು ಕೇಂದ್ರ ಸರ್ಕಾರಕ್ಕೆ ಬರೆದರೆ ಸಾಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಸರ್ಕ್ಯೂಟ್ ಕೋರ್ಟ್ ಮಾಡಿಕೊಡುತ್ತೇವೆಂದು ಹೇಳಿದ್ದೀರಿ ಅದು ಏನಾಯಿತು ?

ಶ್ರೀ ವೈ. ರಾಮಕೃಷ್ಣ.—ಇದು ಆಲೋಚನೆ ಮಾಡಬೇಕಾದಂಥ ವಿಚಾರವಾಗಿದೆ, ಆಲೋಚನೆ ಮಾಡೋಣ. ಇನ್ನು ಸುಪ್ರೀಂ ಕೋರ್ಟ್ ಬಗ್ಗೆ ಹೇಳುವುದಾದರೆ ನಮ್ಮ ದಕ್ಷಿಣ ರಾಜ್ಯದ ೩ ರಾಜ್ಯಗಳವರೂ ಸಹ ಕೇಳಿದ್ದಾರೆ. ಮದ್ರಾಸ್ ಮಂತ್ರಿ, ಆಂಧ್ರದವರೂ ಕೇಳಿದ್ದಾರೆ, ಅದೇ ರೀತಿ ನಾವು ಸಹ ಕೇಳಿದ್ದೇವೆ. ಅವರಿಗೆ ಬಿಲ್ಡಿಂಗ್ ಸಹ ತೋರಿಸಿದ್ದೇವೆ. ಇನ್ಸ್‌ಪೆಕ್ಷನ್ ಟೀಮ್ ಬಂದಿಲ್ಲ, ೩ ರಾಜ್ಯಗಳಿಗೂ ಅವರು ಭೇಟಿ ಕೊಡುತ್ತಾರೆ, ಎಲ್ಲಿ ಸೂಕ್ತವೆಂದು ತೋರುತ್ತದೆಯೋ ಅಲ್ಲಿಗೆ ಅವರು ಕೊಡುತ್ತಾರೆ, ನಮಗೆ ಬೇಡವೆಂದು ನಾವು ಏನೂ ಹೇಳಿಲ್ಲ. ನಾವು ಸಹ ವೆಲ್‌ಕಂ ಮಾಡಿದ್ದೇವೆ.

ಶ್ರೀ ವಿ.ವಿ. ಭಾವಿ.—ಹೈಕೋರ್ಟ್ ಜಡ್ಜ್‌ಗಳ ಟ್ರಾನ್ಸ್‌ಫರ್ ಬಗ್ಗೆ......

ಶ್ರೀ ವೈ. ರಾಮಕೃಷ್ಣ.—ಇದು ನಮ್ಮ ಪರಿಮಿತಿಯೊಳಗೆ ಬಿಟ್ಟಂಥ ವಿಚಾರವಲ್ಲ. ಮಾನ್ಯ ಸದಸ್ಯರು ತಮ್ಮ ಮನಸ್ಸಿನ ಭಾವನೆಗಳನ್ನು ತೋರ್ಪಡಿಸಿಕೊಂಡಿದ್ದಾರೆ. ಇದರ ಬಗ್ಗೆ ನಾವು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆರ್ಟಿಕಲ್ ೨೨೨-ಎ ಪ್ರಕಾರ ಪ್ರೆಸಿಡೆಂಟ್‌ರವರು ಜಡ್ಜ್‌ಗಳನ್ನು ನೇಮಕ ಮಾಡುತ್ತಾರೆ, ಆದರೆ ಜಡ್ಜ್‌ಗಳವರನ್ನು ಶಿಫಾರಸ್ಸು ಮಾಡಿ ಕಳುಹಿಸತಕ್ಕವರು ನೀವೇ ತಾನೇ? ನೀವು ಶಿಫಾರಸ್ಸು ಮಾಡಿ ಕಳುಹಿಸಿದರೆ ಪ್ರೆಸಿಡೆಂಟ್ ಆಫ್ ಇಂಡಿಯಾದವರು ಪರಿಶೀಲನೆ ಮಾಡಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತಾರೆ. ಅದನ್ನು ಮಾಡುವುದನ್ನು ಬಿಟ್ಟು ಕೈಕಟ್ಟಿಕೊಂಡು ಕುಳಿತುಕೊಂಡರೆ ಹೇಗೆ? ಇದನ್ನು ನಾವು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಕಾನೂನು ಮಂತ್ರಿಗಳವರಿಗೆ ಏನು ಹೇಳಬೇಕು ?

ಶ್ರೀ ವೈ. ರಾಮಕೃಷ್ಣ.—ಸಂವಿಧಾನದ ಯಾವ ಸೆಕ್ಷನ್‌ನಲ್ಲಿ ಆ ರೀತಿಯಾಗಿ ಹೇಳಿದೆ, ನಿಮ್ಮ ಮನಸ್ಸಿನ ಭಾವನೆಯನ್ನು ನೀವು ವ್ಯಕ್ತಪಡಿಸಿದ್ದೀರಿ, ಅದಕೋಸ್ಕರವಾಗಿ ನಾನು ಹೇಳಿದೆ.

ಅಧ್ಯಕ್ಷರು.—ಕಾನ್‌ಸ್ಟಿಟ್ಯೂಷನಲ್ ಪ್ರಾವಿಜನ್‌ನಲ್ಲಿ ಎಲ್ಲಿದೆ ?

ಶ್ರೀ ಬಿ. ಬಸವಲಿಂಗಪ್ಪ.—ದಯವಿಟ್ಟು ಆರ್ಟಿಕಲ್ ೨೨೨ ಓದಿ ನೋಡಿ. ನಾವು ಕಣ್ಣುಮುಚ್ಚಿ ಕುಳಿತುಕೊಳ್ಳುವುದು ಅಲ್ಲ, ತಾವು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬಹುದು.

SRI M.C. NANAIAH.—Article 222 reads that,

> "the President may, after consultation with the Chief Justice of India, transfer a Judge from one High Court to any other High Court."

So, the President has to do in consultation with the Chief Justice of India......

SRI B. BASAVALINGAPPA.—He is the final authority. You send proposals.

ಶ್ರೀ ವಿ.ವಿ. ಭಾವಿ.—ಮಾನ್ಯ ಬಸವಲಿಂಗಪ್ಪನವರು ಸಲಹೆ ಮಾಡಿದ್ದು ಏನೆಂದರೆ, ಸರ್ಕಾರ ಮಾಡಿರತಕ್ಕ ಪಾಲಿಸಿ ವಿಚಾರದಲ್ಲಿ ಹೈಕೋರ್ಟಿನಲ್ಲಿ ಯಾವುದೇ ವಿಚಾರ ಹೋದಾಗ ಅದರ ವಿರುದ್ಧವಾಗಿ ತೀರ್ಮಾನವನ್ನು ಜಡ್ಜ್‌ಗಳು ಕೊಟ್ಟರೆ ಅದರಿಂದ ರಾಜ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ ಇಲ್ಲಿಯು ಸ್ಥಳೀಕರನ್ನೇ ಆರಿಸಿ ನೇಮಕ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.--ಶ್ರೀ ನಾನಯ್ಯನವರು ಓದಿ ಹೇಳಿದ್ದಾರೆ, ಈ ಚೀಫ್ ಜಸ್ಟೀಸ್ ಗಳನ್ನು ನೇಮಕ ಮಾಡತಕ್ಕದರ ಬಗ್ಗೆ ಅನೇಕವಾದ ವಿವಾದಗಳು ಎದ್ದು ಕೊನೆಗೆ ಅದರ ಬಗ್ಗೆ ಕೇಸ್ ಸಹ ಹಾಕಿ ಅದರ ಪರಿಣಾಮ ಕೊನೆಗೆ ಏನಾಯಿತು ಎಂಬುದನ್ನು ಓದಿದ್ದೇವೆ. ಲಾ ಮಿನಿಸ್ಟರ್‌ರವರು ಶಿಫಾರಸ್ಸು ಮಾಡಿದ್ದನ್ನು ಪ್ರೆಸಿಡೆಂಟ್ ಆಫ್ ಇಂಡಿಯಾದವರು ಒಪ್ಪಿಕೊಂಡಿರತಕ್ಕದನ್ನು ನಾವು ನೋಡಿದ್ದೇವೆ. ಆದ್ದರಿಂದ ಕೈ ಕಟ್ಟಿ ಕುಳಿತುಕೊಂಡರೆ ಆಗುವುದಿಲ್ಲ, ಬೇರೆಯವರು ಹೇಗೆ ಮಾಡಿದ್ದಾರೆಂಬುದನ್ನು ನೋಡಿ, ನೀವೂ ಸಹ ಶಿಫಾರಸ್ಸು ಮಾಡುವುದಕ್ಕೆ ಬರುತ್ತದೆ. ನೀವು ಸುಮ್ಮನೇ ಇಲ್ಲಿ ಕೈ ಕಟ್ಟಿಕೊಂಡು ಕುಳಿತುಕೊಂಡು ನಮ್ಮ ವ್ಯಾಪ್ತಿಯಲ್ಲಿ ಹೇಗೆ ಬರುತ್ತದೆಂದು ಹೇಳುತ್ತಿದ್ದೀರಿ.

SRI M. C. NANAIAH.—I Want to know whether any State Government has jurisdiction to represent the President of India, The President of India can do that only after consultation with the Central Government.

ಶ್ರೀ ವೈ. ರಾಮಕೃಷ್ಣ.--ಇನ್ನು ಅನಿಮಲ್ ಹಸ್ಬೆಂಡ್ರಿ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಸನ್ಮಾನ್ಯ ಭಾಸ್ಕರ ನಾಯ್ಡುರವರು ಬಹಳ ಪ್ರಾಮುಖ್ಯವಾದ ಅಂಶಗಳನ್ನು ಎತ್ತಿದ್ದಾರೆ. ಮೆಡಿಕಲ್ ಕಾಲೇಜ್‌ಗಳಿಗೆ ಇಷ್ಟೊಂದು ಡಿಮ್ಯಾಂಡ್ ಇದೆ, ಆದರೆ ವೆಟರ್ನರಿ ಕಾಲೇಜ್‌ಗಳಿಗೆ ಅಷ್ಟೊಂದು ಡಿಮ್ಯಾಂಡ್ ಏತಕ್ಕೆ ಇಲ್ಲ, ಸರ್ಕಾರದವರೇ ಏತಕ್ಕೆ ಈ ವೆಟರ್ನರಿ ಕಾಲೇಜುಗಳನ್ನು ಸ್ಟಾರ್ಟ್ ಮಾಡಬಾರದು, ಇದರಿಂದ ನಮ್ಮ ದೇಶಕ್ಕೂ ಬಹಳ ಉಪಯೋಗವಿದೆಂದು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ ಆದುದರಿಂದ ಸರ್ಕಾರದವರೇ ಏತಕ್ಕೆ ಇನ್ನೊಂದು ವೆಟರ್ನರಿ ಕಾಲೇಜ್‌ನ್ನು ತೆಗೆಯಬಾರದು ಎಂದು ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು ಬುಲ್ ಪವರ್‌ನ್ನು ಆದಷ್ಟು ಮಟ್ಟಿಗೆ ಉಪಯೋಗಿಸಬೇಕೆಂದು ಹೇಳಿದರು. ಈಗ ನಿಜವಾಗಿಯೂ ಡೀಜಲ್ ಮತ್ತು ಪೆಟ್ರೋಲ್‌ನ ಅಭಾವವಿರುವುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಬುಲ್ ಪವರ್‌ನ್ನು ಯಾವ ರೀತಿಯಾಗಿ ಉಪಯೋಗಿಸಬೇಕು ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅಂತೂ ಅವರ ಸಲಹೆ ಬಹಳ ಸೂಕ್ತವಾಗಿದೆ.

ಇನ್ನು ಅಮೃತ ಮಹಲ್ ಕಾವಲ್ ಮತ್ತು ಹಳ್ಳಿಕಾರ ಫಾರಂನ ಕುರಿಗಳನ್ನು ರೈತರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಇನ್ನು ರೈತರಿಗೆ ಬಹಳ ಮುಖ್ಯವಾದದು ರೆಂಡರ್ ಪೆಸ್ಟ್. ಕಳೆದ ಸಾರಿ ಭಾಷಣ ಮಾಡುವಾಗ ಹೇಳಿದ್ದೆ. ತಮಗೆ ಹೇಳುವುದಾದರೆ ರೆಂಡರ್‌ಪೆಸ್ಟ್ ವ್ಯಾಕ್ಸಿನೇಷನ್ ಗೋಸ್ಕರವಾಗಿ ನಾವು ಅಡ್ವಾನ್ಸ್ ಮನಿ ಕೊಟ್ಟಿದ್ದೇವು. ಇವತ್ತು ನಮ್ಮ ರಾಜ್ಯಕ್ಕೆ ಎಷ್ಟೋ ಬೇಕೋ ಅಷ್ಟನ್ನು ಉತ್ಪನ್ನ ಮಾಡಿ ಬೇರೆ ರಾಜ್ಯಗಳವರಿಗೂ ಸಹ ಬೇಕಾಗಿದ್ದರೆ ಕಳುಹಿಸುವುದಕ್ಕೂ ಸಹ ಸಿದ್ಧ ಮಾಡಿಟ್ಟಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಫುಟ್ ಅಂಡ್ ಮೌತ್ ವ್ಯಾಕ್ಸಿನ್ ಬಗ್ಗೆ ಮಾನ್ಯ ಶ್ರೀ ರಾಮೇಗೌಡರವರು ಹೇಳಿದರು. ಈ ರೋಗ ಯಾವಾಗ ಉಲ್ಬಣವಾಗುತ್ತದೆಯೋ ಆಗ ಇದನ್ನು ಕೊಡುತ್ತೇವೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಕಳ್ಳತನದಿಂದ ಬೇರೆ ರಾಜ್ಯಗಳಿಗೆ ಹೊರಟು ಹೋಗಿ ಬಿಡುತ್ತದೆ. ದುಡ್ಡು ಕೊಟ್ಟರೂ ಈ ವಸ್ತು ಸಿಗುವುದಿಲ್ಲ. ಇದಕ್ಕೆ ನಮಗೆ ಕೇಂದ್ರ ಸರ್ಕಾರದವರಿಂದ ಸ್ವಲ್ಪ ಸಬ್ಸಿಡಿ ಸಿಗುತ್ತಿದೆ. ಆದುದರಿಂದ ಈ ವ್ಯಾಕ್ಸಿನೇಷನ್ ಮಿಸ್ ಯೂಸ್ ಆಗದ ಹಾಗೆ ನೋಡಿಕೊಂಡು, ಅದು ಸ್ವಲ್ಪ ಉಲ್ಬಣವಾದಾಗ ನಮಗೆ ತಿಳಿಸಿದರೆ ಸಾಕು. ಅದನ್ನು ಒದಗಿಸಿ ಕೊಡುತ್ತೇವೆ. ಆದುದರಿಂದ ಆ ಕಾಯಿದೆ ಇಲ್ಲದಿದ್ದರೂ ಆ ವ್ಯಾಕ್ಸಿನೇಷನ್ ಬೇಕು ಎಂದು ಕೇಳಬೇಡಿ ಅದರ ಬಗ್ಗೆ ಪ್ರೆಸ್ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ ರೈತರ ಹಿತದೃಷ್ಟಿಯಿಂದ ಫ್ರೀಯಾಗಿ ಕೊಡಬೇಕೆಂದು ಕಂಡು ಬಂದರೆ ಕೊಡೋಣವೆಂದು ನಾವು ಈಗಾಗಲೇ ಯೋಚನೆ ಮಾಡಿದ್ದೇವೆ.

ಮಾನ್ಯ ಸದಸ್ಯರು ಕೆಲವಾರು ವಿಚಾರಗಳನ್ನು ಇಲ್ಲಿ ತಿಳಿಸಿದ್ದಾರೆ. ಆದಕ್ಕೆಲ್ಲ ಉತ್ತರಗಳನ್ನು ತರಿಸಿದ್ದೇನೆ. ರೈಂಡರ್‌ಪೆಸ್ಟೋ ಕಾಯಿಲೆ ಬಂದದ್ದು ೩೦ನೇ ಏಪ್ರಿಲ್ ೧೯೮೨ ರಂದು. ಅದು ೧೫ ಹಸುಗಳಿಗೆ ಮತ್ತು ೫ ಎಮ್ಮೆಗಳಿಗೆ ಅಟ್ಯಾಕ್ ಆಗಿತ್ತು. ಅದನ್ನು ವೈದ್ಯರು ಹೋಗಿ ನೋಡಿದ ಮೇಲೆ ಅವುಗಳ ಪೈಕಿ ಎರಡು ಪ್ರಾಣಿಗಳು ಸತ್ತಿವೆ ಎಂದು ವರದಿ ಕಳುಹಿಸಿದ್ದಾರೆ. ಉಳಿದವು ಪರವಾಗಿಲ್ಲವೆಂದು ಹೇಳಿದ್ದಾರೆ ಆ ಗ್ರಾಮದ ಎಲ್ಲ ದನಗಳಿಗೂ ವ್ಯಾಕ್ಸಿನೇಷನ್ ಮಾಡಿದ್ದಾರೆ. ದೊಡ್ಡಬಳ್ಳಾಪುರದಲ್ಲಿರತಕ್ಕ

ಮೊಬೈಲ್ ವ್ಯಾನಿಗೆ ಡ್ರೈವರ್ ಮತ್ತು ಪೆಟ್ರೋಲ್ ಇಲ್ಲವೆಂದರು. ಈಗ ನವೀನ ವ್ಯಾನ್ ಒಂದನ್ನು ಕೊಟ್ಟಿದ್ದೇವೆ ಅದಕ್ಕೆ ಸರ್ಕಾರಿ ಆಜ್ಞೆ ಮಾಡಿ ಡ್ರೈವರನ್ನು ಅಪಾಯಿಂಟ್ ಮಾಡುವುದಕ್ಕೆ ಮುಂಚೆ ಸವಾರಿ ಮಾಡಬೇಕೆಂದರೆ ಹೇಗಾಗುತ್ತದೆ? ಇವತ್ತು ಅದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನೂ ಸರ್ಕಾರಿ ಆಜ್ಞೆ ಆಗಿಲ್ಲ. ೧೧-೬-೮೨ ರಲ್ಲಿ ಡೈರೆಕ್ಟರ್ ಕಾಗದ ಬರೆದಿದ್ದಾರೆ.

ಶ್ರೀ ಜಿ. ರಾಮೇಗೌಡ.—ವ್ಯಾನ್ ಕೊಟ್ಟು ಎಷ್ಟು ದಿವಸವಾಯಿತು?

ಶ್ರೀ ವೈ. ರಾಮಕೃಷ್ಣ.—ಇನ್ನೂ ನಮ್ಮ ಹತ್ತಿರವೇ ಇದೆ. ಅಷ್ಟರಲ್ಲಿ ಉಪಯೋಗಿಸಬೇಕೆಂದರೆ ಹೇಗೆ ? ಅದಕ್ಕೆ ಪ್ರಾವಿಷನ್ ಮಾಡಿರಲಿಲ್ಲ, ಈಗ ಮಾಡಿದ್ದೇವೆ. ಇನ್ನು ಮುಂದೆ ಅದು ಸಿಗುತ್ತದೆ. ಇನ್ನೂ ಅದು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಬೇಕು. ಅಲ್ಲಿ ಸ್ಯಾಂಕ್ಷನ್ ಆಗಬೇಕು.

ಶ್ರೀ ಜಿ. ರಾಮೇಗೌಡ.—ಹೇಳುವಾಗ ಸತ್ಯವಾಗಿರುವುದನ್ನು ಹೇಳಬೇಕು.

ಶ್ರೀ ವೈ. ರಾಮಕೃಷ್ಣ.—ನಮ್ಮ ಎದುರುಗಡೆ ಕಾಗದ ಬರೆಯುವುದು ಇದೆ ಎಂದು. ಹೇಳುತ್ತೇನೆ. ತಾವು ಈ ಜಾಗದಲ್ಲಿದ್ದಾಗ......……

ಶ್ರೀ ಜಿ. ರಾಮೇಗೌಡ.—ವೆರಿಫೈ ಮಾಡಿ ಹೇಳುತ್ತಿದ್ದೆ,

ಶ್ರೀ ವೈ. ರಾಮಕೃಷ್ಣ.—ನಿನ್ನೆ ಭಾಷಣ ಮಾಡಿ ಇವತ್ತು ವೆರಿಫೈ ಮಾಡಿ ಹೇಳಿ ಎಂದರೆ ಹೇಗೆ ನೀವು ಮಾಡಿರುವ ಕೆಲಸವನ್ನೇ ನಾನೂ ಮಾಡುತ್ತಿರುವುದು.

SRI M. C. NANAIAH.—Sir, when the Minister makes a statement—whatever may be the report given from any source. it is basically the statement of the Minister. It cnnot be the satatement of some body else.

SRI Y. RAMAKRISHNA.—I have got the agency. I got the nformation through that agency.

ನನಗೆ ಮಾಹಿತಿ ಬಂದಿರುವುದು ೧೧-೬-೮೨ರಲ್ಲಿ.

ಶ್ರೀ ಜಿ. ರಾಮೇಗೌಡ.—ಕೋಡಿಹಳ್ಳಿಯಲ್ಲಿ ಎರಡು ಸತ್ತಿವೆ ಎಂದಿರಿ ; ಒಂದು ವೇಳೆ ೫-೬ ಸತ್ತಿದ್ದರೆ ಏನು ಮಾಡುತ್ತಿದ್ದಿರಿ ?

ಅಧ್ಯಕ್ಷರು.—ಆ ಬಗ್ಗೆ ನಂತರ ಪ್ರಸ್ತಾಪ ಮಾಡಿ.

ಶ್ರೀ ವೈ. ರಾಮಕೃಷ್ಣ.—ಹೆಣ್ಣು ಮಕ್ಕಳಿಗೆ ಹೆಸರುಘಟ್ಟದಲ್ಲಿ ತರಬೇತಿ ನೀಡುತ್ತಿಲ್ಲವೆಂದು ಹೇಳಿದ್ದಾರೆ. ೨೫ ಜನ ಹೆಣ್ಣು ಮಕ್ಕಳಿಗೆ ಈಗಾಗಲೇ ತರಬೇತಿ ಕೊಟ್ಟಿದ್ದೇವೆ ; ಈಗ ೧೧ ಜನಕ್ಕೆ ಕೊಡುತ್ತಿದ್ದೇವೆ. ಮುಂದೆಯೂ ಕೊಡುವುದಕ್ಕೆ ಅವಕಾಶ ಮಾಡಿದ್ದೇವೆ. ದನಕರುಗಳನ್ನು ಸರಿಯಾಗಿ ಚೆಕ್‌ಅಪ್ ಮಾಡುತ್ತಿಲ್ಲವೆಂದು ಹೇಳಿದರು. ನಾವು ಈ ಬಾರಿ ಒಟ್ಟು ೨೫೩೧೭ ರಾಸುಗಳಿಗೆ. ವ್ಯಾಕ್ಸಿನೇಷನ್ ಮಾಡಿದ್ದೇವೆ. ಅದೇ ರೀತಿ ಸ್ಲಾಟರ್ ಹೌಸ್ ವಿಚಾರವಾಗಿ ಕೂಡ ಹೇಳಿದ್ದಾರೆ. ಅದು ನಮಗೆ ಸೇರಿದ್ದಲ್ಲ ; ಮುಸ್ಲಿಂ ಸಂಘದವರಿಗೆ ಸೇರಿದ್ದು. ಅದಕ್ಕೆ ೪-೫ ವರ್ಷಗಳಿಂದ ಪ್ರತಿವರ್ಷ ಲೀಸ್ ಅನ್ನು ಜಾಸ್ತಿ ಮಾಡುತ್ತಲೇ ಬಂದದ್ದರಿಂದ ಶಾಶ್ವತವಾಗಿ ಅದನ್ನು ಇಂಪ್ರೂವ್ ಮಾಡುವುದಕ್ಕೆ ಭಯವಾದ ಕಾರಣ ಮಾಡಲಿಲ್ಲ. ಎಷ್ಟು ಮಾಡಬೇಕೋ ಅಷ್ಟನ್ನು ಮಾತ್ರ ಮಾಡಿ ಎಂದು ಸೂಚನೆ ಕೊಟ್ಟಿದ್ದೇವೆ. ಕೆಲವು ಸದಸ್ಯರು ಎಗ್ ಬೋರ್ಡ್ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಒಪ್ಪಿದ್ದೇವೆ ಮತ್ತು ಆದಷ್ಟು ಜಾಗ್ರತೆ ಮಾಡುತ್ತೇವೆ. ಅದಕ್ಕೆ ಬೇಕಾದ ಕೆಲವಾರು ಮಾಹಿತಿಗಳನ್ನು ನಾವು ಸಂಗ್ರಹಿಸಬೇಕಾಗಿದೆ, ಅಲ್ಲದೆ ಬ್ಯಾಂಕಿನವರನ್ನು ಹಿಡಿಯಬೇಕಾಗಿದೆ ಏಕೆಂದರೆ ಎಲ್ಲ ಹಣವನ್ನೂ ನಾವು ಕೊಡುವುದಕ್ಕಾಗುವುದಿಲ್ಲ. ಒಂದು ಭಾಗ ಕೊಡಬಹುದು. ಬ್ಯಾಂಕಿನಿಂದ ಹಣವನ್ನು ಯಾವಾಗ ರಿಲೀಸ್ ಮಾಡುತ್ತಾರೋ ಆವತ್ತು ಎಗ್ ಬೋರ್ಡ್ ಕಾನ್‌ಸ್ಟಿಟ್ಯೂಟ್ ಆಯಿತು ಎಂದು ಹೇಳುತ್ತೇವೆ. ಇದು ಅತಿ ಶೀಘ್ರವಾಗಿ ಆಗಬೇಕಾದ ಕೆಲಸವಾದ್ದರಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಮಾಡಿಸುತ್ತೇನೆ. ಪಿ.ಎನ್ ರೆಡ್ಡಿಯವರು ಜೂನಿಯರ್ ಅಡ್ವೊಕೇಟ್‌ಗಳಿಗೆ ಹೆಚ್ಚಿಗೆ ಅವಕಾಶ ಕಲ್ಪಿಸಿಕೊಡಿ ಎಂದರು. ಜೂನಿಯರ್ ಅಡ್ವೊಕೇಟ್‌ಗಳಿಗೆ ಈ ಸರ್ಕಾರ ಕಲ್ಪಿಸಿದಷ್ಟು ಅವಕಾಶಗಳನ್ನು ಬೇರೆ ಯಾರೂ

ಕಲ್ಪಿಸಿಲ್ಲವೆಂದರೆ ತಪ್ಪಾಗುವುದಿಲ್ಲ. ೧೦೦ ಜನ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ನ್ನು ನೇಮಿಸಿದ್ದೇವೆ. ಇದುವರೆಗೆ ಸುಮಾರು ೨೦೦ ಜನ ಮುನ್ಸೀಫ್‌ಗಳನ್ನು ನೇಮಕ ಮಾಡಿದ್ದೇವೆ. ೧೦೦ ಜನ ಪದವೀಧರರಿಗೆ ಸ್ಟೈಫಂಡರಿ ಯೋಜನೆಯಲ್ಲಿ ಅವಕಾಶ ಕೊಟ್ಟಿದ್ದೇವೆ. ಜೂನಿಯರ್ ಅಡ್ವೊಕೇಟ್‌ಗಳಿಗೆ ಎಷ್ಟು ಪ್ರೋತ್ಸಾಹ ಕೊಡಬೇಕೋ ಅದನ್ನೂ ಕೊಟ್ಟಿದ್ದೇವೆ. ಇನ್ನು ಮಾನ್ಯ ಬೊಮ್ಮಾಯಿಯವರು ಇದ್ದಿದ್ದರೆ ಚೆನ್ನಾಗಿತ್ತು ; ಅವರು ಎಷ್ಟು ಹಣ ಖರ್ಚು ಮಾಡಿದ್ದೀರೆಂದು ಕೇಳಿದ್ದಾರೆ. ಧಾರವಾಡದಲ್ಲಿ ಮಿಲ್ಕ್ ಪೌಡರ್ ಫ್ಯಾಕ್ಟರಿಯನ್ನು ಕಟ್ಟುವುದಕ್ಕಾಗಿ ರೂ.೭೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅದಕ್ಕೆ ಈಗಾಗಲೇ ಭೂಮಿಯನ್ನು ಕೂಡ ತೆಗೆದುಕೊಂಡಿದ್ದೇವೆ. ಆ ಬಾಬಿಗಾಗಿ ೧.[illegible]೦ ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿ ಅದಕ್ಕೆ ಬೇಕಾದ ಮೆಷಿನರಿ ಕೂಡ ಬಂದಿದೆ. ಅಕ್ವಿಜಿಷನ್ ಪ್ರೋಸೆಸ್‌ನಲ್ಲಿ ತಡವಾದ್ದರಿಂದ ಸ್ವಲ್ಪ ನಿಧಾನವಾಯಿತು. ಈಗ ಅಕ್ವಿಜಿಷನ್ ಆಗಿದೆ. ಆದಷ್ಟು ಜಾಗ್ರತೆ ಕಾರ್ಖಾನೆ ಸ್ಥಾಪನೆಯಾಗುತ್ತದೆಂದು ತಿಳಿಸಬಯಸುತ್ತೇನೆ.

ಶ್ರೀ ಜಿ. ರಾಮೇಗೌಡ.—ಮಂಡ್ಯದ್ದು ಏನಾಯಿತು ?

ಶ್ರೀ ವೈ. ರಾಮಕೃಷ್ಣ.—ಅದು ಕಂಪ್ಲೀಟ್ ಆಗಿದೆ. ಗಜ್ಜಲಗೆರೆಯಲ್ಲಿ ಪೌಡರ್ ಫ್ಯಾಕ್ಟರಿ ರೆಡಿಯಾಗುತ್ತಿದೆ. ಎಲೆಕ್ಟ್ರಿಸಿಟಿ ಕೆಲಸ ನಡೆಯುತ್ತಿದೆ ; ಮೆಷಿನರಿ ಬಂದಿದೆ ; ಸಿವಿಲ್ ವರ್ಕ್ ಆಗಿದೆ. ಈ ತಿಂಗಳಲ್ಲಿ ಪೂರ್ಣಗೊಳ್ಳಬಹುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಚಿಲ್ಲಿಂಗ್ ಪ್ಲಾಂಟ್ ಕೆಲಸ ಇನ್ನೂ ಶುರುವಾಗಿಲ್ಲ.

ಶ್ರೀ ವೈ. ರಾಮಕೃಷ್ಣ.—ಆಮೇಲೆ ಅದನ್ನು ಹೇಳುತ್ತೇನೆ. ಶ್ರೀ ಬೊಮ್ಮಾಯಿಯವರು ಒಂದು ಅಲಿಗೇಷನ್ ಮಾಡಿದ್ದರು ; ಅವರು ಹೋದಮೇಲೆ ಜ್ಞಾಪಕ ಆಯಿತು. ಬೇರೆ ರಾಜ್ಯಗಳಿಂದ ವಕೀಲರುಗಳನ್ನು ಕರೆಸಿ ಲಕ್ಷಗಟ್ಟಲೆ ರೂಪಾಯಿಗಳ ಫೀಸು ಕೊಟ್ಟು ಅವರನ್ನು ಅಶೋಕ ಹೋಟೆಲಿನಲ್ಲಿ ಇರಿಸಿದ್ದಿರಿ ಎಂದು ಹೇಳಿದರು. ಅದು ಯಾರ ಕಾಲದಲ್ಲಿ ಆದದ್ದು ಎಂಬುದು ಗೊತ್ತಿಲ್ಲ. ಅವರ ಹೆಸರನ್ನು ಹೇಳಿದರೆ ಪತ್ತೆ ಹಚ್ಚಿಸುತ್ತೇನೆ. ಬೇರೆ ರಾಜ್ಯದಿಂದ ವಕೀಲರನ್ನು ಕರೆಸಿದ್ದು, ಲಕ್ಷ ರೂಪಾಯಿ ಫೀಸು ಕೊಟ್ಟದ್ದು, ಅಶೋಕ ಹೋಟೆಲಿನಲ್ಲಿ ಇಟ್ಟದ್ದು ನನಗೆ ಗೊತ್ತಿದ್ದ ಹಾಗೆ ಇಲ್ಲ. ಶ್ರೀ ಬಸವಲಿಂಗಪ್ಪನವರು ಬ್ಯಾಕ್‌ಲಾಗ್ ಬಗ್ಗೆ ಏನು ಮಾಡಿದ್ದೀರಿ, ಅದನ್ನು ಯಾವ ರೀತಿ ಭರ್ತಿ ಮಾಡುತ್ತೀರಿ, ಹರಿಜನ-ಗಿರಿಜನರಿಗೆ ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ಹರಿಜನರಿಗಷ್ಟೇ ಅಲ್ಲ ; ಹಿಂದುಳಿದವರಿಗೂ ಕೂಡ ಅದರಲ್ಲಿ ಕೊಡಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ. ಈಗಾಗಲೇ ೩ ಸಾರಿ ಮುನ್ಸೀಫರನ್ನು ತೆಗೆದುಕೊಂಡಿದ್ದೇವೆ.

೧-೩೦ ಪಿ. ಎಂ.

ಈಗ ಇರುವ ಸಂಖ್ಯೆ S.Cs 16, S.T.s 3, B.C.M. 9, B. T. 3, B. S. G. 8. total 48. ಕಳೆದ ಎರಡು ವರ್ಷಗಳಿಂದ ಇದೂ ಸೇರಿ ಒಟ್ಟು ೧೮೨ ಬ್ಯಾಕ್‌ಲಾಗ್ ಪೋಸ್ಟ್‌ಗಳಿವೆ ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಯಾವರೀತಿ ಮಾಡಬೇಕೆಂದು ಆಲೋಚನೆ ಮಾಡಿ ಟ್ರೈನಿಂಗ್ ಪ್ರೋಗ್ರಾಂ ಮಾಡಿದ್ದೇವೆ, ೧೦೦ ಜನರಿಗೆ ಅದರಲ್ಲಿ ಸ್ಟೈಫಂಡ್ ಕೊಡುತ್ತೇವೆ. ಆದರಲ್ಲಿ ೨೩ ರಿಸರ್ವೇಷನ್ ಪೋಸ್ಟುಗಳು ಇಟ್ಟಿದ್ದು ೧೭ ಅರ್ಜಿಗಳು ಬಂದಿದ್ದವು. ಆ ೧೭ ಜನರಿಗೂ ನಾವು ಕೊಟ್ಟಿದ್ದೇವೆ. ಇದರಿಂದ ಮಾನ್ಯ ಬಸವ ಲಿಂಗಪ್ಪನವರು ತೃಪ್ತಿಪಡುತ್ತಾರೆಂದು ಕಾಣಿಸುತ್ತದೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನು ಮಾಡಿದ್ದೀರಿ ಎಂದು ಕೇಳಿದರು. ವಿವರ ಬೇಕಾದರೆ ಹೇಳುತ್ತೇನೆ. ೧೭ ಜನ ಸ್ಟೈಫೆಂಡರಿ ಗ್ರಾಜುಯೇಟ್ಸ್‌ಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಶ್ರೀ ರಾಮಕೃಷ್ಣ ಎಂಬುವರನ್ನು ಗೌರ್ನಮೆಂಟ್ ಅಡ್ವೋಕೇಟಾಗಿ ನೇಮಿಸಿದ್ದೇವೆ. ಶ್ರೀ ರಾಘವಯ್ಯ ಎಂಬುವರನ್ನು ಸ್ಟೇಟ್ ಪ್ರಾಸಿಕ್ಯೂಟರ್ ಆಗಿ ನೇಮಿಸಲಾಗಿದೆ. ಶ್ರೀಗಳಾದ ವೆಂಕಟಾಚಲಯ್ಯ, ಪೊನ್ನುರಂಗಂ. ನಾಗರಾಜು ಇವರುಗಳನ್ನು ಗೌರ್ನಮೆಂಟ್ ಪ್ಲೀಡರ್‌ಗಳನ್ನಾಗಿ ಹೈಕೋರ್ಟಿನಲ್ಲಿ ನೇಮಿಸಲಾಗಿದೆ, ಇದಲ್ಲದೆ ಶ್ರೀ ಸಿದ್ದಲಿಂಗಯ್ಯ ಎಂಬುವರನ್ನು ಬೆಂಗಳೂರಿನಲ್ಲಿ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ, ಶ್ರೀ ಸಿದ್ದಮಾದಯ್ಯ ಎಂಬುವರನ್ನು ಚಾಮರಾಜ ನಗರದಲ್ಲಿ ಅಡಿಷನಲ್ ಗೌರ್ನಮೆಂಟ್ ಪ್ಲೀಡರನ್ನಾಗಿ ಶ್ರೀ ಬಿಳಿಗಿರಿರಂಗಯ್ಯ ಎಂಬುವರನ್ನು ಬೆಂಗಳೂರಿನಲ್ಲಿ ಗೌರ್ನಮೆಂಟ್ ಪ್ಲೀಡರನ್ನಾಗಿ ನೇಮಿಸಿದ್ದೇವೆ. ಅಡಿಷನಲ್ ಗೌರ್ನಮೆಂಟ್ ಪ್ಲೀಡರನ್ನಾಗಿ ಶ್ರೀ ಸಿದ್ದಗಂಗಯ್ಯ ಎಂಬುವರನ್ನೂ ಶ್ರೀ ಗಟ್ಟಿ ಎಂಬುವ

ರನ್ನು ಅಫಿಷಿಯಲ್ ರಿಸೀವರನ್ನಾಗಿ ಬೆಳಗಾಂನಲ್ಲಿ ನೇಮಿಸಲಾಗಿದೆ. ಇನ್ನೊಂದು ವಿಚಾರ ಏನೆಂದರೆ ಹೆಚ್ಚಿನ ಅರ್ಜಿಗಳು ನಮ್ಮ ಮುಂದೆ ಬಂದಿಲ್ಲ ಆದರೆ ಎಷ್ಟು ಅರ್ಜಿಗಳು ಬಂದಿವೆಯೋ ಅಷ್ಟು ಅರ್ಜಿಗಳನ್ನು ಪರಿಶೀಲಿಸಿ ಪ್ರೋತ್ಸಾಹ ಕೊಟ್ಟಿದ್ದೇವೆ. ಪಶು ಸಂಗೋಪನೆ ಇಲಾಖೆ ಬಗ್ಗೆ ಹೇಳುವುದಾದರೆ, ಷೆಡ್ಯೂಲ್ಡ್ ಕ್ಯಾಸ್ಟ್‌ನವರಾದ ಶ್ರೀ ಸಿದ್ದಯ್ಯ ಎಂಬುವರನ್ನು ಮೈಸೂರಿನಲ್ಲಿ ಮೈಸೂರು ಡೈರಿಯ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ, ಶ್ರೀ ನರಸಿಂಹನ್ ಎಂಬುವರನ್ನು ಶಿವಮೊಗ್ಗದಲ್ಲಿ ಡೈರಿ ಸೂಪರಿಂಟೆಂಡೆಂಟಾಗಿ ನೇಮಕ ಮಾಡಿದ್ದೇವೆ. ಶ್ರೀ ಹನುಮಂತಪ್ಪ ಎಂಬುವರು ಬೆಂಗಳೂರಿನಲ್ಲಿ ಡೈರಿ ಸೂಪರಿಂಟೆಂಡೆಂಟಾಗಿದ್ದು ಸೀನಿಯಾರಿಟಿ ವಿಚಾರದಲ್ಲಿ ಚರ್ಚೆ ನಡೆದು ಅವರನ್ನು ಆ ಜಾಗದಿಂದ ತೆಗೆದಿದ್ದರು. ಆದ್ದರಿಂದ ಬೋರ್ಡ್‌ನವರನ್ನು ಈ ವಿಚಾರದಲ್ಲಿ ಪುನರ್‌ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅದು ಆಗುತ್ತದೆ. ಇವರು ನೇಮಕಾತಿಗಳನ್ನು ಮಾಡುವವರು. ಆಂದಮೇಲೆ ಇವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಇದರಿಂದ ಮಾನ್ಯ ಬಸವಲಿಂಗಪ್ಪನವರಿಗೆ ತೃಪ್ತಿಯಾಗಬಹುದು. ಶ್ರೀಮಾನ್ ರಾಮದೇವ್ ಅವರು ಮಾತನಾಡಿ ೧ ರೂಪಾಯಿ ೮ ಪೈಸೆಗೆ ಹಾಲು ತೆಗೆದುಕೊಂಡು ಅದನ್ನು ಎರಡು ರೂಪಾಯಿ ಚಿಲ್ಲರೆಗೆ ಮಾರುತ್ತಿದ್ದೀರಿ, ಇದು ಸರಿಯಲ್ಲ ಎಂದು ಹೇಳಿದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಇದು ಕಟ್ಟು ಕಥೆ. ಅಷ್ಟಕ್ಕೆ ಹಾಲು ಮಾರುವುದಕ್ಕಾಗುವುದಿಲ್ಲ. ಮಾನ್ಯ ಜಿ, ರಾಮೇಗೌಡರು ಡೈರಿ ಹಾಲು ಚೆನ್ನಾಗಿಲ್ಲ ಎಂದು ಹೇಳಿದರು ಈ ಡೈರಿ ಹಾಲು ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಪ್ರಕಾರ ಇರುತ್ತದೆ. ಮಾನ್ಯ ರಾಮೇಗೌಡರು ಮಂತ್ರಿಯಾಗಿದ್ದವರು. ನಾನು ಆ ಬೋರ್ಡಿನಲ್ಲಿ ಚೇರ್ಮನ್ನೂ ಅಲ್ಲ, ಕಾರ್ಯದರ್ಶಿಯೂ ಅಲ್ಲ, ಸದಸ್ಯನೂ ಅಲ್ಲ ಬಹುಶಃ ಅವರು ಬೋರ್ಡ್ ಛೇರ್ಮನ್ನರಾಗಿದ್ದರೋ ಇಲ್ಲವೋ ಗೊತ್ತಿಲ್ಲ. ಅವರು ಆಲಿಬಾಬಾ ಮತ್ತು ೪೦ ಮಂದಿ ಕಳ್ಳರು ಎಂಬ ಪದವನ್ನು ಬಳಸಿದ್ದಾರೆ. ಆದರೆ ಅದನ್ನು ಯಾರನ್ನು ಉದ್ದೇಶಿಸಿ ಬಳಸಿದ್ದಾರೆ ಎಂಬುದನ್ನು ಹೇಳಲಿಲ್ಲ.

ಶ್ರೀ ರಾಮೇ ಗೌಡ.—ಸಾರ್ವಜನಿಕರು ಹೇಳಿದ್ದನ್ನು ನಾನು ಹೇಳಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ತುಂಬಿದ ಸಭೆಯಲ್ಲಿ ಇಷ್ಟು ಧೈರ್ಯವಾಗಿ ಈ ಮಾತನ್ನು ಹೇಳಿದ್ದಾರೆ ಶ್ರೀಮಾನ್ ರಾಮೇಗೌಡರು ಹಿರಿಯ ಶಾಸಕರು. ಯಾರು ಅಲಿಬಾಬಾ, ಯಾರು ೪೦ ಮಂದಿ ಕಳ್ಳರು ಎಂಬುದನ್ನು ಸರಿಯಾಗಿ ಹೇಳಿ, ಏತಕ್ಕಾಗಿ ಆ ರೀತಿ ಹೇಳಿದರು ಎಂಬುದನ್ನು ಹೇಳಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಜಿ. ರಾಮೇಗೌಡ.—ನೀವೇ ಕೆಲವು ಸದಸ್ಯರನ್ನು ನೇಮಕ ಮಾಡಿ ಒಂದು ಸಮಿತಿ ಮಾಡಿ. ನಾನು ಅದನ್ನು ಪ್ರೂವ್ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಆಗಲಿ.

ಶ್ರೀ ಎಂ. ಸಿ. ನಾಣಯ್ಯ.—ನಿಮಗೆ ೮೮ ಸಾವಿರ ಲೀಟರ್ ಹಾಲು ಸಿಕ್ಕಿದರೆ ಎರಡೂವರೆ ಸಾವಿರ ಲೀಟರ್ ಹಾಲನ್ನು ಹೇಗೆ ಒದಗಿಸುತ್ತಿದ್ದೀರಿ ಎಂಬ ಪ್ರಶ್ನೆಯನ್ನು ಮಾನ್ಯ ರಾಮದೇವ್ ಅವರೆ ಕೇಳಿದ್ದಾರೆ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ನೆರೆರಾಜ್ಯಗಳಾದ ಮಹಾರಾಷ್ಟ್ರದಲ್ಲಿ ಇವತ್ತು ಹಾಲಿನ ಉತ್ಪಾದನೆ ಕಡಿಮೆಯಾಗಿದೆ. ಗುಜರಾತಿನಲ್ಲಿ ೧ ಲಕ್ಷ ಲೀಟರ್ ಎಂದು ಪತ್ರಿಕೆಯಲ್ಲಿ ಬಂದಿದೆ. ಹಾಲು ಮಾಡುವ ರೀತಿ ಇದೆ.

ಶ್ರೀ ಎಂ ಚಂದ್ರಶೇಖರ್.—ಬೆಲೆ ಜಾಸ್ತಿ ನಿಗದಿ ಮಾಡಿ ರೈತರಿಗೆ ಕೊಡುವ ಬಗ್ಗೆ ಆವು ಅಡ್ಡ ಬರುವುದಿಲ್ಲ. ಎರಡೂವರೆ ಲಕ್ಷ ಲೀಟರ್ ಹಾಲಿನಲ್ಲಿ ೮೦ ಸಾವಿರ ಲೀಟರ್ ಹಾಲು ಶುದ್ಧವಾದ ಹಾಲು ಮಿಕ್ಕ ಹಾಲನ್ನು ಬೇರೆ ಪ್ರೋಸೆಸ್‌ನಲ್ಲಿ ಮಾಡಿರುತ್ತೀರಿ. ಆದ್ದರಿಂದ ಎರಡೂ ಹಾಲಿನ ಬೆಲೆಗೆ ತಾಳೆ ಮಾಡಿನೋಡಿದಾಗ ಎರಡು ರೂಪಾಯಿ ನಲವತ್ತು ಪೈಸೆ ತೆಗೆದುಕೊಳ್ಳುವುದು ಹೆಚ್ಚು ಎಂದು ನಾವು ಹೇಳಿದ್ದೇವೆ. ರೈತರಿಗೆ ಕೊಡುವುದರಿಂದ ಹೀಗಾಗಿದೆ ಎಂದು ಹೇಳಬೇಡಿ ಎಂದು ಹೇಳುತ್ತಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಫ್ಲಡ್–೨ರಲ್ಲಿ ಫೆಡರೇಷನ್ ಮಾಡುತ್ತಿದ್ದೇವೆ. ಅದರಲ್ಲಿ ೨೦ ಜನರನ್ನು ನಾಮಕರಣ ಮಾಡುತ್ತಿದ್ದೇವೆ. ಆದರ ಕೆಳಗೆ ಡಿಸ್ಟ್ರಿಕ್ಟ್ ಯೂನಿಯನ್‌ಗಳು ಬರುತ್ತವೆ. ಆದರ ಕೆಳಗೆ ಚುನಾಯಿತ ಸಹಕಾರ ಸಂಘಗಳು ಬರುತ್ತವೆ ಈಗ ನಾಲ್ಕು ಯೂನಿಯನ್‌ಗಳಿದ್ದು

ಇನ್ನೂ ೬ ಯೂನಿಯನ್‌ಗಳನ್ನು ಸ್ಥಾಪನೆ ಮಾಡುತ್ತೇವೆ, ಎರಡು ಜಿಲ್ಲೆಗೊಂದರಂತೆ ಲೆಕ್ಕ ಹಾಕಿದರೂ ಇನ್ನೂ ೬ ಯೂನಿಯನ್‌ಗಳು ಬರಬೇಕಾಗುತ್ತದೆ, ಹಾಲಿನ ದರವನ್ನು ಹೆಚ್ಚಿಸತಕ್ಕದ್ದು, ಕಡಿಮೆ ಮಾಡತಕ್ಕದ್ದು, ಈ ಅಧಿಕಾರ ಅವರಿಗಿರುತ್ತದೆ. ಅವರು ಅದನ್ನು ಮಾಡಿ ಕೊಳ್ಳಬಹುದು. ಸರ್ಕಾರ ದವರು ಅದರಲ್ಲಿ ಇಂಟರ್‌ಫಿಯರ್ ಮಾಡುವುದಿಲ್ಲ.

ಶ್ರೀ ಎಂ, ಸಿ. ನಾಣಯ್ಯ,—ಯಾರನ್ನು ನಾಮಕರಣ ಮಾಡುತ್ತೀರಿ ?

ಶ್ರೀ ರಾಮೇಗೌಡ.—ಜೂನ್ ೬ ರಲ್ಲಿ ಒಪ್ಪಿಕೊಂಡಿದ್ದೀರಿ. ಇನ್ನೂ ಎಷ್ಟು ದಿವಸಬೇಕು ಫೆಡರೇಷನ್ ಮಾಡುವುದಕ್ಕೆ ?

ಶ್ರೀ ವೈ. ರಾಮಕೃಷ್ಣ.—ಅಪ್ರೈಸಲ್ ರಿಪೋರ್ಟ್, ಪೊಟೆನ್‌ಷಿಯಲ್ ರಿಪೋರ್ಟ್ ಆಗಬೇಕು. ಕೆ.ಡಿ.ಡಿ.ಸಿ ರೆಪ್ರಸೆಂಟೇಟೀವ್‌ಗಳು, ಅನಿಮಲ್ ಹಸ್ಬಂಡರಿ ರೆಪ್ರಸೆಂಟೇಟೀವ್‌ಗಳು, ನ್ಯಾಷನಲ್ ಡೈರಿ ಡೆವಲಪ್ಮೆಂಟ್ ಕಾರ್ಪೊರೇಷನ್ ರೆಪ್ರಸೆಂಟೇಟೀವ್‌ಗಳು ಇವರನ್ನೊಳಗೊಂಡ ಸ್ಟಡಿ ಟೀಮ್ ಎಲ್ಲಾ ಕಡೆ ಸುತ್ತಾಡುತ್ತಿದೆ. ೧೩ನೇ ತಾರೀಖು ಕಡೆ ಭೇಟಿ ಇದೆ. ಆದಾದಮೇಲೆ ಅವರು ಒಂದು ವರದಿ ತಯಾರು ಮಾಡುತ್ತಾರೆ. ಈ ಮಧ್ಯೆ ೨೦ ಜನರನ್ನು ನಾಮಕರಣ ಮಾಡಿ ಫೆಡರೇಷನ್ ಮಾಡ ಬೇಕಾಗುತ್ತದೆ. ಪ್ರತಿಯೊಂದು ಯೂನಿಯನ್‌ಗೂ ೧೨ ಜನರನ್ನು ನಾಮಕರಣ ಮಾಡಬೇಕು. ಸೊಸೈಟಿಗಳಿಗೆ ಚುನಾವಣೆ ನಡೆಯಬೇಕಾಗುತ್ತದೆ. ನಾಮಕರಣವನ್ನು ಸರ್ಕಾರ ಮಾಡುತ್ತದೆ. ಅಗ್ರಿಮೆಂಟ್‌ಗೆ ರುಜು ಹಾಕಿರುವುದು ನಿಜ.

ಶ್ರೀ ಎಂ. ಸಿ. ನಾಣಯ್ಯ.—ಅದರಲ್ಲಿ ನಾನ್‌ಅಫಿಷಿಯಲ್ಸ್ ಇರುತ್ತಾರೋ ಅಫಿಷಿಯಲ್ಸ್ ಇರುತ್ತಾರೋ ?

ಶ್ರೀ ವೈ, ರಾಮಕೃಷ್ಣ.—ಎಲ್ಲರೂ ಇರುತ್ತಾರೆ.

ಶ್ರೀ ಎಂ. ಸಿ ನಾಣಯ್ಯ.—ನಾಮಕರಣ ಮಾಡುವಾಗ ಕಾಂಗ್ರೆಸ್(ಐ) ಪಕ್ಷದವರನ್ನೇ ಮಾಡು ವುದನ್ನು ಬಿಟ್ಟು ಯಾರಿಗೆ ಇದರಲ್ಲಿ ಅನುಭವವಿದೆಯೋ ಮತ್ತು ಆಸಕ್ತಿ ಇವೆಯೋ ಅಂಥವರನ್ನು ನಾಮಕರಣ ಮಾಡಿ,

ಶ್ರೀ ವೈ. ರಾಮಕೃಷ್ಣ.—ಗೌರ್ನಮೆಂಟ್ ಪ್ಲೀಡರ್ ನೇಮಕ ಮಾಡುವಾಗ ಪಾರ್ಟಿ ಆಧಾರದ ಮೇಲೆ ಮಾಡಿರುವ ಒಂದು ನಿದರ್ಶನವನ್ನಾದರೂ ತೋರಿಸುತ್ತೀರಾ

ಶ್ರೀ ಜಿ. ರಾಮೇಗೌಡ.—ಹಾಲಿನ ದರ ಹೆಚ್ಚು ಮಾಡಿ ಎಂದರೆ, ಫೆಡರೇಷನ್ ಕಡೆ ಕೈ ತೋರಿ ಸುತ್ತೀರಿ. ಫೆಡರೇಷನ್ ಯಾವಾಗ ಮಾಡುತ್ತೀರಿ ಎಂದರೆ ರಾಮಾಯಣ ಹೇಳುತ್ತೀರಿ.

ಶ್ರೀ ವೈ. ರಾಮಕೃಷ್ಣ.—೬ನೇ ತಾರೀಖು ಅಗ್ರಿಮೆಂಟಿಗೆ ರುಜು ಹಾಕಿದಮೇಲೆ ಹಾಲಿನ ಬೆಲೆ ಹೇಗೆ ಜಾಸ್ತಿ ಮಾಡುವುದಕ್ಕಾಗುತ್ತದೆ ?

ಶ್ರೀ ಜಿ. ರಾಮೇಗೌಡ.—ಬೋರ್ಡ್ ಮೆಂಬರ್ಸನ್ನು ಎಷ್ಟು ದಿವಸಗಳಲ್ಲಿ ನಾಮಿನೇಟ್ ಮಾಡು ತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಎರಡು ತಿಂಗಳಲ್ಲಿ ಮಾಡುತ್ತೇವೆ. ಹಾಲಿಗೆ ಎಷ್ಟು ಬೆಲೆ ಕೊಡ ಬೇಕೆಂಬುದನ್ನು ಅವರೇ ತೀರ್ಮಾನ ಮಾಡಲಿ. ನಾವು ಮಾಡಿಕೊಂಡಿರುವ ಅಗ್ರಿಮೆಂಟಿನ ರೂಪುರೇಷೆ ಗಳನ್ನು ಹೇಳುತ್ತಿದ್ದೇನೆ. ವಹಿವಾಟು ೫೦ ಕೋಟಿ ರೂಪಾಯಿ. ಅದರಲ್ಲಿ ೩೦ ಪರ್ಸೆಂಟ್ ಫ್ರೀ ಅಮೌಂಟ್, ಉಳಿದಿದ್ದನ್ನು ೨೦ ವರ್ಷದಲ್ಲಿ ಎಂಟೂವರೆ ಪರ್ಸೆಂಟ್ ಬಡ್ಡಿಯನ್ನು ತೀರಿಸಬೇಕು. ಐದು ವರ್ಷ ಕಳೆದನಂತರ ಕಂತು ಪ್ರಾರಂಭವಾಗುತ್ತದೆ. ಇದನ್ನು ಅನುಷ್ಠಾನಕ್ಕೆ ತಂದಾಗ ೫೦ ಸಾವಿರದಿಂದ ೧ ಲಕ್ಷ ಜನಸಂಖ್ಯೆ ಇರತಕ್ಕ ೧೪೧ ಪಟ್ಟಣಗಳಿಗೆ ಹಾಲು ಸರಬರಾಜಾಗುತ್ತದೆ. ೧ ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ೧೨ ಪಟ್ಟಣಗಳಿಗೆ ಪ್ರತಿ ಜಿಲ್ಲೆಯಲ್ಲೂ ೨೦೦ರಿಂದ ೨೫೦ ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ಥಾಪನೆಯಾಗುತ್ತವೆ. ಗುಜರಾತಿನಲ್ಲಿ ಒಂದಿದ್ದರೆ ನಾವು ಜಿಲ್ಲೆಗೆ ಎರಡರಂತೆ ಒಪ್ಪಿಕೊಂಡಿದ್ದೇವೆ. ಇದರ ಜೊತೆಗೆ ನಾವು ಅಧಿಕಾರಿಗಳನ್ನು ತಯಾರು ಮಾಡಬೇಕಾಗುತ್ತದೆ. ೮೫ ಜನರನ್ನು ಆನಂದ್‌ಗೆ ಕಳುಹಿಸಿ ಟ್ರೈನಿಂಗ್ ಕೊಟ್ಟು ಕೆಲಸ ಪ್ರಾರಂಭ ಮಾಡುತ್ತೇವೆ. ಅದಕ್ಕೂ ಎಲ್ಲಾ ಏರ್ಪಾಡು ಮಾಡುತ್ತಿದ್ದೇವೆ. ಇಷ್ಟು ಎರಡನೇ ಹಂತದ ಕ್ಷೀರಧಾರೆಯ ರೂಪರೇಷೆಗಳು. ಈ

ಇಲಾಖೆಯಲ್ಲಿ ರೀ–ಆರ್ಗನೈಸ್ ಮಾಡಿ ಅಧಿಕಾರಿಗಳಿಗೆ ಹೆಚ್ಚಿನ ಬಡ್ತಿ ಅವಕಾಶ ಮತ್ತು ಅಧಿಕಾರಗಳನ್ನು ಕೊಟ್ಟಿದ್ದೇವೆ. ಅದನ್ನು ಓದುತ್ತೇನೆ, ದಯವಿಟ್ಟು ಮಾನ್ಯ ಸದಸ್ಯರು ಕೇಳಬೇಕು.

ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಪುನರ್ ಸಂಘಟನೆಯ ಬಗ್ಗೆ ಮಾಡಲಾದ ಮುಖ್ಯ ಶಿಫಾರಸುಗಳು ಈ ಮುಂದಿನಂತಿವೆ :

೧) ನಿರ್ದೇಶನಾಲಯದ ಹಂತದಲ್ಲಿ ಐವರು ಜಂಟಿ ನಿರ್ದೇಶಕರು ಇರಬೇಕು. ಇದಲ್ಲದೆ, ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಉಪ ನಿರ್ದೇಶಕರ ವೇತನ ಶ್ರೇಣಿಗೆ ಸಮವಾದ ವೇತನ ಶ್ರೇಣಿಯ ಅಂಕಿ ಅಂಶಗಳ ಒಬ್ಬ ಜಂಟಿ ನಿರ್ದೇಶಕರು ಇರಬೇಕು.

೨) ಪ್ರತಿ ರೆವಿನ್ಯೂ ವಿಭಾಗಕ್ಕೆ ಒಬ್ಬರು ಜಂಟಿ ನಿರ್ದೇಶಕರು ಇರಬೇಕು.

೩) ಜಿಲ್ಲಾ ಮಟ್ಟದ ಆಡಳಿತವು ಒಬ್ಬ ಉಪನಿರ್ದೇಶಕನ ಅಧೀನದಲ್ಲಿ ಇರಬೇಕು.

೪) ಎಲ್ಲ ಜಾನುವಾರು ಕ್ಷೇತ್ರಗಳು ಒಬ್ಬ ಅಡಿಷನಲ್ ನಿರ್ದೇಶಕರ ಅಧೀನದಲ್ಲಿ ಇರಬೇಕು ಮತ್ತು ಈ ಅಡಿಷನಲ್ ನಿರ್ದೇಶಕರು ನಿರ್ದೇಶಕರ ಅಧೀನದಲ್ಲಿ ಕಾರ್ಯ ನಿರ್ವಹಿಸಬೇಕು.

೫) ಬೆಂಗಳೂರು, ಧಾರವಾಡ, ಮೈಸೂರು ಮತ್ತು ಬೆಳಗಾವಿ ಈ ಸ್ಥಳಗಳಲ್ಲಿರುವ ಕೇಂದ್ರೀಯ ವೀರ್ಯ ಬ್ಯಾಂಕುಗಳನ್ನು ಮುಂದುವರಿಸಿಕೊಂಡು ಹೋಗಬೇಕು.

೬) ಕೇಂದ್ರಿ ಗ್ರಾಮ ಯೋಜನೆಯ ಮೇರೆಗಿನ ಉಪ–ಘಟಕಗಳನ್ನು ಗ್ರಾಮಾಂತರ ಪಶು ವೈದ್ಯ ಶಾಲೆಗಳಾಗಿ ಪರಿವರ್ತಿಸಬೇಕು, ಹಾಗೂ ಆ ಉಪ–ಘಟಕಗಳಲ್ಲಿ ಇರುವ ಹೋರಿಗಳನ್ನು, ಅಲ್ಲಿಂದ ಸಾಗಿಸಿ ಕೇಂದ್ರಿಯ ವೀರ್ಯ ಸಂಗ್ರಹ ಕೇಂದ್ರಗಳಲ್ಲಿ ಇಡಬೇಕು. ಕೇಂದ್ರ ಗ್ರಾಮಯೋಜನೆಯ ಮೇರೆಗೆ ಕೃತಕ ವೀರ್ಯಗರ್ಭಧಾರಣ ಕೇಂದ್ರಗಳಲ್ಲಿರುವ ಹೋರಿಗಳನ್ನು ಕೇಂದ್ರಿಯ ವೀರ್ಯ ಸಂಗ್ರಹ ಕೇಂದ್ರಕ್ಕೆ ಸ್ಥಳಾಂತರಿಸಬೇಕು ಮತ್ತು ಈ ಕೇಂದ್ರಗಳ ಹುದ್ದೆಗಳನ್ನು ರದ್ದುಗೊಳಿಸಬೇಕು. ಕೇಂದ್ರ ಗ್ರಾಮ ಯೋಜನೆಯ ಮೇರೆಗಿನ ಹದಿನಾಲ್ಕು ಕೃತಕ ವೀರ್ಯಗರ್ಭಧಾರಣ ಕೇಂದ್ರಗಳನ್ನು ಮುಂದುವರಿಸಬೇಕು. ಪ್ರತಿಯೊಂದು ಕೇಂದ್ರಕ್ಕೆ ಒಬ್ಬ ಸಹಾಯಕ ನಿರ್ದೇಶಕ, ನಾಲ್ವರು, ಪಶುವೈದ್ಯ ಮತ್ತು ಪಶುಸಂಪತ್ತು ಪರಿವೀಕ್ಷಕರು ಶ್ರೇಣಿ ೧, ಮೂವರು ಅಟೆಂಡರುಗಳು ಮತ್ತು ಒಬ್ಬ ಡ್ರೈವರು ಹೀಗೆ ಸಿಬ್ಬಂದಿ ಇರಬೇಕು. ಹಾಲಿನ ಲೆಕ್ಕ ಇಡುವವರು (ಮಿಲ್ಕ್ ರಿಕಾರ್ಡರ್) ಮತ್ತು ಸೂಪರ್ ವೈಜರು ಈ ಹುದ್ದೆಗಳನ್ನು ರದ್ದುಪಡಿಸಬೇಕು,

೭) ಬೆಂಗಳೂರು ಮತ್ತು ಧಾರವಾಡಗಳಲ್ಲಿರುವ ತೀವ್ರ ಜಾನುವಾರು ಅಭಿವೃದ್ಧಿ ಯೋಜನೆಗಳನ್ನು ರದ್ದುಪಡಿಸಬೇಕು. ಈ ಯೋಜನೆಗಳ ಮೇರೆಗಿನ ಎರಡುನೂರು ಕೃತಕ ವೀರ್ಯಗರ್ಭಧಾರಣ ಘಟಕಗಳನ್ನು ಗ್ರಾಮಾಂತರ ಪಶುವೈದ್ಯ ಶಾಲೆಗಳಾಗಿ ಪರಿವರ್ತಿಸಬೇಕು ಮತ್ತು ಅಂಥ ಪ್ರತಿಯೊಂದು ಪಶುವೈದ್ಯ ಶಾಲೆಗೆ ಒಬ್ಬ ಕಾಂಪೌಂಡರು, ಒಬ್ಬ ಜಾನುವಾರು ಪರಿವೀಕ್ಷಕ ಮತ್ತು ಒಬ್ಬ ಅಟೆಂಡರು ಹೀಗೆ ಸಿಬ್ಬಂದಿ ಇರಬೇಕು.

೮) ಹೆಸರಘಟ್ಟದಲ್ಲಿರುವ ರಾಜ್ಯ ಕೋಳಿ ಸಾಕಣೆ ಕೇಂದ್ರವು ಒಬ್ಬ ಉಪ ನಿರ್ದೇಶಕರ ಅಧೀನದಲ್ಲಿ ಇರಬೇಕು.

೯) ತೀವ್ರ ಕೋಳಿ ಸಾಕಣೆ ಯೋಜನೆಗಳನ್ನು ರದ್ದುಗೊಳಿಸಬೇಕು ಮತ್ತು ಈ ಯೋಜನೆಗಳ ಕಾರ್ಯವನ್ನು ಇತರ ಅಧಿಕಾರಿಗಳಿಗೆ ವಹಿಸಿಕೊಡಬೇಕು.

೧೦) ಹೆಸರಘಟ್ಟ, ಅಜ್ಜಂಪುರ, ಕೊಯ್ಲ, ಕುರಿಕುಪ್ಪಿ ಮತ್ತು ಧನಗೂರ್ ಈ ಸ್ಥಳಗಳಲ್ಲಿರುವ ಪ್ರತಿಯೊಂದು ಜಾನುವಾರು ಕ್ಷೇತ್ರಗಳನ್ನು ಉಪ ನಿರ್ದೇಶಕರ ಕಾರ್ಯನಿರ್ವಹಣೆಗೆ ವಹಿಸಬೇಕು.

೧೧) ಚಳ್ಳಕೆರೆಯಲ್ಲಿರುವ ಭಾರಿ ಪ್ರಮಾಣದ ಕುರಿ ಸಾಕಣೆ ಕೇಂದ್ರವನ್ನು ಒಬ್ಬ ಜಂಟಿ ನಿರ್ದೇಶಕರ ಕಾರ್ಯನಿರ್ವಹಣೆಗೆ ವಹಿಸಬೇಕು.

೧೨) ನಿರ್ದೇಶನಾಲಯದಲ್ಲಿರುವ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಮತ್ತು ಹಣಕಾಸು ಅಸಿಸ್ಟೆಂಟ್ ಇವರಿಬ್ಬರೂ ಜ್ಯೂನಿಯರ್ ೧ನೇ ವರ್ಗದವರಾಗಿರಬೇಕು.

೧೩) ನಿರ್ದೇಶನಾಲಯದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ (ವಿದ್ಯುಚ್ಛಕ್ತಿ) ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ (ಯಾಂತ್ರಿಕ) ಈ ಎರಡು ಹುದ್ದೆಗಳು ಇರಬೇಕು,

೧೪) ನಿರ್ದೇಶನಾಲಯದಲ್ಲಿ ಮೇವು ಅಭಿವೃದ್ಧಿಯ ಒಬ್ಬ ಉಪ ನಿರ್ದೇಶಕರ ಹುದ್ದೆಯಿರಬೇಕು. ಈ ಹುದ್ದೆಯನ್ನು ಕೃಷಿ ಇಲಾಖೆಯಿಂದ ಪ್ರತಿಯೋಜನೆ ಮೂಲಕ ಭರ್ತಿಮಾಡಿಕೊಳ್ಳಬೇಕು.

೧೪) ರೆಡ್-ಡೇನ್ ಯೋಜನೆಯು ಎಲ್ಲ ಜಾನುವಾರು ಕ್ಷೇತ್ರಗಳ ಪ್ರಭಾರ ಹೊಂದಿರುವ ಒಬ್ಬ ಅಡಿಷನಲ್ ನಿರ್ದೇಶಕರ ಸಮಗ್ರ ಆಡಳಿತಕ್ಕೆ ಒಳಪಟ್ಟಿರಬೇಕು. ಸದರಿ ಯೋಜನೆಯು (ಸಂತಾನ ಪರೀಕ್ಷೆ) ಉಪ ನಿರ್ದೇಶಕರು ಇಡೀ ರಾಜ್ಯದಲ್ಲಿ ಸಂತಾನ ಪರೀಕ್ಷೆಯ ಕಾರ್ಯವನ್ನು ನಿರ್ವಹಿಸಬೇಕು ಮತ್ತು ನಿರ್ದೇಶನಾಲಯದಲ್ಲಿರುವ (ಜಾನುವಾರು ಅಭಿವೃದ್ಧಿ) ಜಂಟಿ ನಿರ್ದೇಶಕರಿಗೆ ಅಧೀನರಾಗಿರಬೇಕು,

ಸ್ವಾಮಿ, ಕಡೆಯದಾಗಿ ಪಶುವೈದ್ಯ ಶಾಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎನ್ನುವ ಪ್ರಶ್ನೆ ಕೂಡ ಬಂತು, ನಾವು ಈಗ ೧೧೦ ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿದ್ದೇವೆ. ೧೬೯ ಅರ್ಜಿಗಳು ಬಂದಿವೆ. ಒಟ್ಟು ನಮ್ಮಲ್ಲಿ ೨೦೩ ಹುದ್ದೆಗಳು ಖಾಲಿ ಇವೆ. ಈ ವರ್ಷ ಕನಿಷ್ಠ ೫೦ ಜನ ಪಾಸಾಗಿ ಬರುತ್ತಾರೆ. ಬರತಕ್ಕಂಥವರೆಲ್ಲರಿಗೂ ಡಾಕ್ಟರ್ ಹುದ್ದೆ ಕೊಡುವದಕ್ಕೆ ಸಾಧ್ಯತೆ ಇದೆ. ೬ ತಿಂಗಳು ಅಥವಾ ಒಂದು ವರ್ಷದೊಳಗಾಗಿ ಭರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಮನಗಂಡು ಈ ಸಾರಿ ೨೦೦ ಗ್ರಾಮಾಂತರ ಪಶುವೈದ್ಯಶಾಲೆಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ಒಂದೊಂದು ಪಶುವೈದ್ಯ ಶಾಲೆಗಳನ್ನು ಎಲ್ಲ ಕ್ಷೇತ್ರಗಳಲ್ಲಿ ಕೊಡಬೇಕೆಂದು ನನ್ನ ಆಸೆ ಇದೆ. ಮಾನ್ಯ ಸದಸ್ಯರಾದ ಶ್ರೀ ರಾಂದೇವ್ ರವರು ಹೇಳಿದಂತಹ ವಿಷಯಕ್ಕೆ ಇದೇ ಯೋಜನೆಯಲ್ಲಿ ಮಂಜೂರಾತಿ ಕೊಟ್ಟಿದ್ದೇವೆ.

ಶ್ರೀ ಜಿ. ರಾಮೇಗೌಡ.—ಸೊಸೈಟಿಗಳಿಂದ ಹಾಲನ್ನು ನೇರವಾಗಿ ಡೈರಿಗೆ ತೆಗೆದುಕೊಂಡು ಹೋಗುತ್ತೀರಿ. ಕೆಲವು ಸಂದರ್ಭದಲ್ಲಿ ಹಾಲನ್ನು ತೆಗೆದುಕೊಂಡು ಹೋಗುವುದರಲ್ಲಿ ವಿಳಂಬವಾಗಿ ಹಾಲು ಕೆಟ್ಟು ಹೋಗುತ್ತದೆ. ಇಂತಹ ಸಂದರ್ಭಗಳಲ್ಲಿ ಸೊಸೈಟಿ ಮೇಲೆ ಮಾತ್ರ ಚಾರ್ಜ್ ಮಾಡುತ್ತೀರಿ ? ಇದಕ್ಕೆ ಕಾರಣ ಏನು ? ನಮ್ಮ ತಾಲ್ಲೂಕಿನಲ್ಲಿ ಚಿಲ್ಲಿಂಗ್ ಸೆಂಟರ್ ಕ್ಯಾಪಾಸಿಟಿ ಜಾಸ್ತಿ ಮಾಡುತ್ತೇವೆಂದು ಹೇಳಿದಿರಿ, ಅದನ್ನು ಮಾಡಲಿಲ್ಲ. ಈ ಸಾರಿ ಮಾಡಿಕೊಡುತ್ತೀರಾ ? ಹಾಲನ್ನು ನೇರವಾಗಿ ತೆಗೆದುಕೊಂಡು ಹೋಗುವುದನ್ನು ನಿಲ್ಲಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಹೇಗಿದ್ದರೂ ಫೆಡರೇಷನ್ ಮಾಡುತ್ತೇವೆ. ಅದರಲ್ಲಿ ತಾವು ಇರುತ್ತೀರಿ. ಏನು ಮಾಡಬೇಕೆಂಬುದನ್ನು ಯೋಚನೆ ಮಾಡಿ ಹೇಳಿ.

ಅಧ್ಯಕ್ಷರು.—ಸಭೆಯು ಈಗ ಎದ್ದು ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ಪುನಃ ಮೂರು ಗಂಟೆಗೆ ಸಮಾವೇಶಗೊಳ್ಳಲು ಮಧ್ಯಾಹ್ನ ಒಂದುಗಂಟೆ ನಲವತ್ತು ನಿಮಿಷಕ್ಕೆ ಮುಕ್ತಾಯವಾಯಿತು.)

ವಿಧಾನಸಭೆಯು ೩-೦೦ ಗಂಟೆ ೫ ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು.
ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಕೆ. ಬಿ. ಮಲ್ಲಪ್ಪ,—ಅರಕಲಗೂಡು ತಾಲ್ಲೂಕ್‌ನಲ್ಲಿ ಬಹಳ ಹಿಂದಿನಿಂದ ಒಂದು ಮುನಸೀಫ್ ಕೋರ್ಟ್ ಸ್ಥಾಪಿಸಬೇಕೆಂದು ಕೇಳಿದ್ದೇವೆ. ಅದು ಸ್ಯಾಂಕ್ಷನ್ ಆಗಿದೆ ಅಂತ ವರ್ತಮಾನ ಗೊತ್ತಾಗಿದೆ. ಅಲ್ಲಿ ಬಿಲ್ಡಿಂಗ್ ಕೊಡಲಿಕ್ಕೆ ನಾವು ತಯಾರಿದ್ದೇವೆ. ಬೆಂಗಳೂರು ಹೈಕೋರ್ಟಿನಿಂದ ಒಬ್ಬರು ಜಡ್ಜ್ ಬಂದು, ಹಾಸನದಿಂದ ಒಬ್ಬರು ಸಿವಿಲ್ ಜಡ್ಜ್ ಬಂದು ಸ್ಥಳ ಪರೀಕ್ಷೆ ಮಾಡಿ ಅಲ್ಲಿನ ತಾಲ್ಲೂಕ್ ಬೋರ್ಡ್‌ನ ರೆಸಲ್ಯೂಷನ್ ತೆಗೆದುಕೊಂಡು ಕೋರ್ಟ್ ಕೊಡುತ್ತೇವೆ, ಗವರ್ನಮೆಂಟಿಗೆ ರೆಕಮಂಡ್ ಮಾಡುತ್ತೇವೆಂದು ಹೇಳಿಕೊಂಡು ಹೋದರು. ಹೊಳೇನರಸೀಪುರದಲ್ಲಿ ಇರತಕ್ಕ ಕೇಸ್‌ಗಳ ಪೈಕಿ ಅರಕಲಗೂಡಿನದೇ ಸುಮಾರು ಮುಕ್ಕಾಲು ಭಾಗ ಕೇಸುಗಳು ನಡೆಯುತ್ತಿವೆ. ಆದ್ದರಿಂದ ನಮ್ಮ ತಾಲ್ಲೂಕಿಗೆ ಮುನೇಸೀಫ್ ಕೋರ್ಟ್ ಒಂದನ್ನು ಕೊಡಲಿಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಹೈಕೋರ್ಟ್‌ನಿಂದ ರೆಕಮಂಡೇಷನ್ ಇನ್ನೂ ಬಂದಿಲ್ಲ. ಬಂದರೆ ಮಾಡಿಕೊಡುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಷೀಪ್ ಮತ್ತು ಉಲ್ಲನ್ ಬೋರ್ಡ್‌ಗೆ ಸಂಬಂಧಪಟ್ಟಂತೆ ಏನೇನು ಮಾಡಿದ್ದೀರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಿಂದೆ ನಾವು ಈ ಸದನದಲ್ಲಿ ಕುರಿ

ಗಳು ರೋಗ ಬಂದು ಸತ್ತ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ಪರಿಹಾರ ಕೊಡುತ್ತೇವೆ. ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದರು. ಆ ದಿಸೆಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ. ಇನ್ನು ಕೋರ್ಟ್ ಕಟ್ಟಡಗಳಿಗೆ ಸರ್ಕಾರದ ಮಂಜೂರಾತಿ ಪಡೆದಿದ್ದು ಅಲ್ಲಿ ಜಮೀನು ಸ್ಟೇ ಮಾಡಿ ಎರಡು ವರ್ಷ ಆಯಿತು. ಆ ಸ್ಟೇ ವೆಕೇಟ್ ಆಗದೇ ಕಟ್ಟಡ ಆಗುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಲುಕ್ಸಾನು, ಒಂದಕ್ಕೆ ಎರಡರಷ್ಟು ಎಸ್ಟಿಮೇಟ್ ಆಗುತ್ತದೆ. ಅಲ್ಲಿ ಸ್ಟೇ ವೆಕೇಟ್ ಮಾಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೈ. ರಾಮಕೃಷ್ಣ. - ಸ್ಟೇ ಆರ್ಡರ್ ವೆಕೇಟ್ ಮಾಡಲಿಕ್ಕೆ ಅಡ್ವೊಕೇಟ್ ಜನರಲ್‌ಗೆ ಇನ್‌ಸ್ಟ್ರಕ್ಷನ್ ಕೊಡುತ್ತೇನೆ. ಇನ್ನು ಕುರಿಗಳು ಸತ್ತಿದ್ದ ಬಗ್ಗೆ ೫ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇಷ್ಟು ಕುರಿಗಳು ಸತ್ತಿವೆ ಇಷ್ಟು ರಿಲೀಫ್ ಕೊಡಬೇಕೆಂದು ವರದಿ ಬಂದ ಕೂಡಲೇ ೫ ಲಕ್ಷ ರೂಪಾಯಿ ಕೊಟ್ಟಿದ್ದೇವೆ, ಮತ್ತೆ ಬೇಕಾದರೆ ಕೊಡುತ್ತೇವೆ. ಇನ್ನು ಷೀಪ್ ಡೆವಲಪ್‌ಮೆಂಟ್‌ಗೆ ಏನು ಮಾಡಿದ್ದೀರಾ ಎಂದು ಕೇಳಿದ್ದಾರೆ. ೪೬ ಲಕ್ಷ ರೂಪಾಯಿಗಳ ಯೋಜನೆ ತಯಾರು ಮಾಡಿದ್ದೇವೆ. ಈ ವರ್ಷ ಇಂಪ್ಲಿಮೆಂಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ. —ತಮ್ಮ ಇಲಾಖೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ಸ್ ಮತ್ತು ಅವರ ಕೆಳಪಟ್ಟ ಅಧಿಕಾರಿಗಳಿಗೆ ಅನೇಕ ವರ್ಷಗಳಿಂದ ಪ್ರಮೋಷನ್ ಕೊಡುವುದರ ಬಗ್ಗೆ ತಮ್ಮ ಕಚೇರಿಯಲ್ಲಿ ತಡೆಹಿಡಿದು ಜಿಲ್ಲೆಗಳಲ್ಲಿ ಡೆಪ್ಯುಟಿ ಡೈರೆಕ್ಟರ್ಸ್ ಪೋಸ್ಟ್‌ಗಳನ್ನು ತುಂಬಿಲ್ಲ. ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ಸ್ ಹುದ್ದೆಗಳನ್ನು ಬಹಳ ವರ್ಷಗಳಿಂದ ಕೊಳೆ ಹಾಕಿದ್ದೀರಿ. ಇದು ತಮ್ಮ ಇಲಾಖೆಯ ಪರಿಶೀಲನೆಯಲ್ಲಿದೆ. ಇನ್ನೂ ಎಷ್ಟು ವರ್ಷಗಳವರೆಗೆ ಅದನ್ನು ಪರಿಶೀಲಿಸುತ್ತೀರಿ ? ಇವರಿಗೆ ಯಾವಾಗ ಪ್ರಮೋಷನ್ ಕೊಟ್ಟು ಡೆಪ್ಯುಟಿ ಡೈರೆಕ್ಟರ್ಸ್ ಆಫ್ ಅನಿಮಲ್ ಹಸ್ಬೆಂಡರಿ ಎಂದು ಮಾಡುತ್ತೀರಿ ? ಅಸಿಸ್ಟೆಂಟ್ ಡೈರೆಕ್ಟರ್ಸ್ ಗ್ರೇಡ್‌ಗಳನ್ನು ಯಾವಾಗ ಫಿಕ್ಸ್ ಮಾಡುತ್ತೀರಿ ?

ಶ್ರೀ ವೈ. ರಾಮಕೃಷ್ಣ. —ರೀ ಆರ್ಗನೈಸೇಷನ್ ಬಗ್ಗೆ ಆಗಲೇ ತಮ್ಮ ಮುಂದೆಯೇ ನಾನು ಒಂದು ಸ್ಟೇಟ್‌ಮೆಂಟನ್ನು ಓದಿ ಹೇಳಿದ್ದೇನೆ. ಅವರಿಗೆ ಕೊಡಬೇಕಾದ ಪ್ರಮೋಷನ್ ಬಡ್ತಿ ಎಲ್ಲಾ ಕೊಟ್ಟಿದ್ದೇವೆ. ಅದರಲ್ಲಿ ಇದೆಲ್ಲಾ ಅಡಕವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ. —ಸ್ವಾಮಿ, ಹೊಳೇನರಸೀಪುರಕ್ಕೆ ಒಂದು ಸಿವಿಲ್ ಜಡ್ಜ್ ಕೋರ್ಟ್ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಹೈಕೋರ್ಟಿನಿಂದ ಒಂದು ವರದಿ ಬಂದಿದೆ ಯೆಂದು ತಾವು ಹೇಳಿದಿರಿ. ಮಾನ್ಯ ಹಾವನೂರ್‌ರವರು ಕಳೆದವರ್ಷ ಹೊಳೇನರಸೀಪುರಕ್ಕೆ ಬಂದಿದ್ದಾಗಿನಿಂದ ಹೇಳಿಕೊಂಡೇ ಬಂದಿದ್ದೇವೆ. ಆದ್ದರಿಂದ ದಯವಿಟ್ಟು ಹೈಕೋರ್ಟ್‌ನವರಿಗೆ ತಾವು ಶಿಫಾರಸ್ಸು ಮಾಡಿ ಈ ವರ್ಷವೇ ಮಂಜೂರಾತಿ ಕೊಟ್ಟು ಅನುಷ್ಠಾನಕ್ಕೆ ತರತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ. —ಹೈಕೋರ್ಟ್‌ನಿಂದ ರೆಕಮೆಂಡೇಷನ್ ಬಂದಿದೆ. ಅದನ್ನು ಪರಿಶೀಲಿಸಿ ಇವತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ನಾನು ಕಳುಹಿಸಿಕೊಟ್ಟಿದ್ದೇನೆ. ಅವರಿಂದ ಕನ್‌ಕರೆನ್ಸ್ ಬಂದಕೂಡಲೇ ಆರ್ಡರ್ಸ್ ಇಷ್ಯೂ ಮಾಡುತ್ತೇನೆ.

ಶ್ರೀ ಷೇರ್‌ಖಾನ್. —ನಮ್ಮ ಗುಲ್ಬರ್ಗಾ ಡಿಸ್ಟ್ರಿಕ್ಟ್‌ನಲ್ಲಿ ಒಕ್ಕಲುತನ ಮತ್ತು ದನಗಳು ಇದೆ. ಆ ದನಗಳು ಬಹಳ ದಿವಸ ಬದುಕಬೇಕು. ನಮ್ಮಲ್ಲಿ ಒಂದು ಪಶುವೈದ್ಯಶಾಲೆ ಇದೆ. ಅಲ್ಲಿ ಕಾಂಪೌಂಡರ್ ಟ್ರೈನಿಂಗ್ ಇನ್‌ಸ್ಟಿಟ್ಯೂಟನ್ನು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಕೊಡಲಿಲ್ಲ. ನೀವು ಇಲ್ಲಿಂದ ಯಾವ ಡಾಕ್ಟರನ್ನು ಪೋಸ್ಟ್ ಮಾಡಿದರೂ ಅವರು ಬರುವುದಿಲ್ಲ. ನಮ್ಮಲ್ಲಿರತಕ್ಕ ಡಾಕ್ಟರುಗಳು ಟ್ರಾನ್ಸ್‌ಫರ್ ಆಗುತ್ತಾರೆ. ಉದಾಹರಣೆಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ಇದೆ. ಅಲ್ಲಿಗೆ ಒಂದು ಡಾಕ್ಟರನ್ನೂ ತಾವು ಪೋಸ್ಟ್ ಮಾಡಲಿಲ್ಲ. ಡಾಕ್ಟರ್ ಇಲ್ಲದಿದ್ದರೆ ಕೊನೇಪಕ್ಷ ಒಬ್ಬ ಕಾಂಪೌಂಡರ್ ಆದರೂ ಇದ್ದರೆ ಆ ಆಸ್ಪತ್ರೆಯನ್ನು ನಡೆಸಬಹುದು. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಇನ್ನು ಎರಡನೆಯದಾಗಿ ಪ್ರತಿ ರೆವಿನ್ಯೂ ಸಬ್ ಡಿವಿಜನ್‌ಗೆ ಒಂದು ಸಿವಿಲ್ ಕೋರ್ಟ್ ಆಗಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ನನ್ನ ಕ್ಷೇತ್ರದಲ್ಲಿ ಸೇಡಂ ಹೆಡ್‌ಕ್ವಾರ್ಟರ್ಸ್ ನಿಮ್ಮ ತೀರ್ಮಾನದ ಪ್ರಕಾರ ಅಲ್ಲಿಗೆ ಒಂದು ಸಿವಿಲ್ ಕೋರ್ಟ್‌ನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ —ಕೆಲಸ ಎಲ್ಲಿ ಹೆಚ್ಚಾಗಿದೆ ಅಲ್ಲಿಗೆ ಒಂದು ಸಿವಿಲ್ ಕೋರ್ಟ್‌ನ್ನು ಕೊಡುತ್ತೇವೆ. ಎಲ್ಲಿ ವರ್ಕ್‌ಲೋಡ್ಸ್ ಜಾಸ್ತಿ ಇರುತ್ತದೆ ಅಲ್ಲಿಗೆ ಹೈ ಕೋರ್ಟ್‌ನವರು ಬಂದು ನೋಡಿ ರೆಕಮೆಂಡ್ ಮಾಡಿ ಕೋರ್ಟ್ ಕೊಡಬೇಕೆಂದು ಹೇಳುವುದಾದರೆ ನಾವು ಕೊಡುವುದಕ್ಕೆ ತಯಾರಿದ್ದೇವೆ.

ಇನ್ನೊಂದು ವಿಚಾರ ಹೇಳುವುದಾದರೆ ಅಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಇದೆ. ಅಲ್ಲಿಗೆ ಒಂದು ದೊಡ್ಡ ಡೈರಿ ಬರುತ್ತದೆ. ಇದರ ಬೆನಿಫಿಟ್ ಪಡೆಯತಕ್ಕ ಜಿಲ್ಲೆಗಳ ಪೈಕಿ ಬಹುಶಃ ತಮ್ಮ ಜಿಲ್ಲೆಯೇ ಮೊದಲನೆಯದು ಎನಿಸುತ್ತದೆ. ಇನ್ನು ತಾವು ಟ್ರೈನಿಂಗ್ ಸೆಂಟರನ್ನು ಕೇಳಿರುವುದನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಎಸ್. ಎಲ್. ಭೈರಿ.—ಷಹಬಾದ್‌ನಲ್ಲಿ ಈಗಾಗಲೇ ಕೋರ್ಟಿಗೆ ಮಂಜೂರಾತಿ ಆಗಿದೆ. ಹಳೆಯ ಪಯಿಗಾ ಅಂತ ಒಂದು ತಾಲೂಕು ಇದೆ. ಅಲ್ಲಿ ಒಂದು ಹಳೇ ಮುನ್ಸೀಫ್ ಕೋರ್ಟ್ ಬಿಲ್ಡಿಂಗ್ ಇದೆ. ಆ ಬಿಲ್ಡಿಂಗ್‌ನ್ನು ಪೋಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ತಾವು ಐ. ಜಿ. ಪಿ. ಯವರಿಗೆ ಬರೆದು ಈ ಬಿಲ್ಡಿಂಗ್‌ನ್ನು ಬಿಡಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈಗ ನಡೆಸುತ್ತಿರುವ ಕೋರ್ಟ್ ಬಿಲ್ಡಿಂಗ್ ರಸ್ತೆಯ ಪಕ್ಕದಲ್ಲೇ ಇದ್ದು ಯಾವಾಗಲೂ ಮೋಟಾರ್ ವೆಹಿಕಲ್ಸ್ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಿರುವುದರಿಂದ ಅಲ್ಲಿ ಕೋರ್ಟ್‌ನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೈ ಕೋರ್ಟ್‌ನವರಿಂದ ಆದೇಶ ಕೊಡಿಸಿ ಆ ಬಿಲ್ಡಿಂಗ್‌ನ್ನು ಖಾಲಿ ಮಾಡಿಸಿಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಈ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ಅಪ್ಪಾಜಿ.—ಕನಕಪುರದಲ್ಲಿ ಒಂದು ಕೋರ್ಟನ್ನು ಓಪನ್ ಮಾಡಬೇಕೆಂದು ಮೊದಲಿನಿಂದಲೂ ಒತ್ತಾಯ ಇದೆ. ಇದರ ಬಗ್ಗೆ ಈ ವರ್ಷ ಅತಿಶೀಘ್ರವಾಗಿ ಕ್ರಮ ತೆಗೆದುಕೊಂಡು ಇದನ್ನು ಮಾಡಿಸಿಕೊಡಬೇಕು. ಟೌನ್ ಮುನಿಸಿಪಲ್‌ನವರು ಕಟ್ಟಡವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು. ತಾವು ಆಗ ಇರಲಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಬೆಳಿಗ್ಗೆಯೇ ವಿವರಿಸಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಅಲ್ಲಿಗೆ ಕೋರ್ಟ್ ಮಂಜೂರು ಮಾಡಿದ್ದೇವೆ. ತಾವು ಯಾವತ್ತು ಎಷ್ಟು ಗಂಟೆಗೆ ಕೋರ್ಟ್ ಓಪನ್ ಮಾಡುತ್ತೀರಿ ಎನ್ನುವ ಬಗ್ಗೆ ಡೇಟ್ ಮತ್ತು ಟೈಂನ್ನು ಫಿಕ್ಸ್ ಮಾಡಿ ನನಗೆ ತಿಳಿಸಿದರೆ ನಾನು ಗೌರ್ನಮೆಂಟ್ ಆರ್ಡರ್ ಇಷ್ಯೂ ಮಾಡಿಸುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಖಾಸಗಿಯವರಿಗೆ ಸ್ಟಾಕ್‌ಮನ್ ಟ್ರೈನಿಂಗ್‌ನ್ನು ಕೊಡುವ ಯೋಜನೆಯ ಪ್ರಕಾರ ನಮ್ಮ ಬಾಗಲಕೋಟೆಗೆ ಒಂದು ಟ್ರೈನಿಂಗ್ ಸೆಂಟರ್‌ನ್ನು ಕೊಡುತ್ತೇವೆ ಎಂದು ತಾವು ಹೇಳಿದ್ದಿರಿ. ಈಗ ಅಲ್ಲಿ ಒಂದು ದೊಡ್ಡ ಕಟ್ಟಡ ಇದೆ. ಅಲ್ಲಿನ ಜನರು ಈ ಬಗ್ಗೆ ನಮ್ಮನ್ನು ಕೇಳುತ್ತಲೇ ಬರುತ್ತಿದ್ದಾರೆ. ನಾನೂ ಕೂಡ ಅಲ್ಲಿಗೆ ಈ ಸೆಂಟರ್‌ನ್ನು ಕೊಡಿಸುತ್ತೇನೆಂದು ಹೇಳುತ್ತಲೇ ಬಂದಿದ್ದೇನೆ. ಈಗ ಅದನ್ನು ಮಂಜೂರು ಮಾಡುತ್ತೀರಾ ? ದನಗಳ ಡಾಕ್ಟರ್‌ಗಳಿಗೆ ಪ್ರೊಮೋಷನ್ ಏನು ಕೊಡುತ್ತೀರಿ, ಅದೇರೀತಿ ಹಾಲಿನ ಡಾಕ್ಟರ್‌ಗಳಿಗೂ ಪ್ರೊಮೋಷನ್ ಕೊಡುತ್ತೀರಾ ? ತಾವು ಕೆಲವರಿಗೆ ಪ್ರೋಮೋಷನ್ ಕೊಡುತ್ತೀರಿ, ಕೆಲವರಿಗೆ ಬಿಡುತ್ತೀರಿ. ಈ ನಿಲುವನ್ನು ಬಿಟ್ಟು ಇವರಿಗೂ ಪ್ರೊಮೋಷನ್ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಪದೇಪದೇ ತಾವು ಕೇಳುತ್ತಿದ್ದೀರಿ, ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನವರಿಗೆ ಸ್ಟಾಕ್‌ಮನ್ ಟ್ರೈನಿಂಗ್ ಕೊಡುವ ಪ್ರಶ್ನೆ ಸರ್ಕಾರದ ಮುಂದಿದೆ. ಏಕೆಂದರೆ ಬಹಳ ಹುದ್ದೆಗಳು ಖಾಲಿ ಇವೆ ಮತ್ತು ಅದಕ್ಕೆ ತಕ್ಕಂತೆ ಅಭ್ಯರ್ಥಿಗಳೂ ಕೂಡ ಜಾಸ್ತಿ ಸಂಖ್ಯೆಯಲ್ಲಿ ಇದ್ದಾರೆ. ಬಹುಶಃ ಟ್ರೈನಿಂಗ್ ಸೆಂಟರ್‌ನ್ನು ಅಲ್ಲಿ ತೆರೆದರೆ ಅನುಕೂಲವಾಗಬಹುದೆಂದು ತಾವು ಕೇಳುತ್ತಿದ್ದೀರಿ. ನಾನು ಈ ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಸೂಕ್ತವೆಂದು ಕಂಡು ಬಂದರೆ ಮಾಡುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಸ್ವಾಮಿ, ಬಹಳ ದಿವಸಗಳಾಯಿತು. ಇದು ನಮಗೆ ಕಾಗದದಲ್ಲಿ ಬರಲಿ

ಶ್ರೀ ವೈ. ರಾಮಕೃಷ್ಣ.—ಒಪ್ಪಿಕೊಂಡೆ

ಶ್ರೀ ಎಂ. ಗಂಗಣ್ಣ.—ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದರೆ, ಕುರಿ ಉತ್ಪನ್ನ ಮಂಡಲಿಗೆ ೫ ವರ್ಷವಾದರೂ ೫ ಲಕ್ಷ ರೂ.ಗಳನ್ನೂ ಕೂಡ ಖರ್ಚುಮಾಡಿಲ್ಲ. ಕಳೆದಸಾರಿ ಕುರಿಗಳು ದೊಡ್ಡರೋಗಕ್ಕೆ ತುತ್ತಾಗಿ ಸಾವಿರಾರು ಕುರಿಗಳು ಸತ್ತುವು. ಅಷ್ಟೊಂದು ಕುರಿಗಳು ಸತ್ತಿದ್ದರೂ ಭಿಕ್ಷಕರಿಗೆ ದಾನ ಕೊಡುವ ರೀತಿಯಲ್ಲಿ ಕೇವಲ ೫ ಲಕ್ಷ ರೂ.ಗಳನ್ನು ಕೊಟ್ಟಿದ್ದೀರಿ. ಕಳೆದವರ್ಷ ಜುಲೈ ೩೧ನೇ ತಾರೀಖು ಉತ್ತರ ನೀಡುತ್ತಾ ವರದಿ ಬಂದಕೂಡಲೇ ಆದಷ್ಟು ತೀವ್ರವಾಗಿ ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಿರಿ. ಒಂದು ವರ್ಷವಾದರೂ ಕೂಡ ಇನ್ನೂ ವರದಿ ಬಂದಿಲ್ಲವೆಂದು ಹೇಳುತ್ತಿದ್ದೀರಿ. ಹಾಗಾದರೆ ಸರ್ಕಾರ ಏನು ಮಾಡುತ್ತಿದೆ ? ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂಬುದನ್ನು ಹೇಳಬೇಕು.

ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಚಾರ ಎಂದರೆ ನಮ್ಮ ರಾಷ್ಟ್ರ ಕುರಿ ಉತ್ಪಾದನೆಯಲ್ಲಿ ೬ನೇ ಸ್ಥಾನದಲ್ಲಿದೆ. ನಮ್ಮ ಕರ್ನಾಟಕ ಸರ್ಕಾರದವರು "ಷೀಪ್ ಹಸ್ಬೆಂಡರಿ ಮತ್ತು ವೂಲ್ ಇಂಡಸ್ಟ್ರೀಸ್" ಅಂತ ಮಾಡಿದ್ದಾರೆ. ಸರ್ಕಾರದವರು ವಿಶ್ವಬ್ಯಾಂಕ್‌ನ ನೆರವನ್ನು ಕೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ನಿಮ್ಮ ರಾಜ್ಯ ಸರ್ಕಾರದವರು ಮುಂದೆ ಬಂದು ನಮ್ಮನ್ನು ಕೇಳಿಲ್ಲವೆಂದು ಹೇಳುತ್ತಿದ್ದಾರೆ, ಅವರು ಕೇಳಿದರೆ ನಾವು ಕೊಡುವುದಕ್ಕೆ ತಯಾರಿದ್ದೇವೆಂದು ಹೇಳುತ್ತಿದ್ದಾರೆ. ಈ ಯೋಜನೆ ಎಲ್ಲಿಗೆ ಬಂತು ಎಂಬುದನ್ನು ತಿಳಿಸುತ್ತೀರಾ ? ಕುರಿಗಾರರನ್ನು ಆಸ್ಟ್ರೇಲಿಯಾ, ಡೆನ್ಮಾರ್ಕ್ ಮುಂತಾದ ಕಡೆಗಳಿಗೆ ಕಳುಹಿಸಬೇಕೆಂದು ನಾನು ಕಳೆದಸಾರಿ ಇದೇ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುತ್ತಾ ಹೇಳಿದ್ದೆ. ಇತ್ತೀಚೆಗೆ ಮಾನ್ಯ ಸದಸ್ಯರಾದ ಪರಪ್ಪ ಕಳ್ಳಿಗುಡ್ಡರವರು ಜಪಾನ್ ಮುಂತಾದ ಕಡೆಗಳಿಗೆ ಹೋಗಿ ಬಂದರು. ಆದರೆ ನೀವು ಈ ಕುರಿಗಾರರನ್ನು ಏತಕ್ಕೆ ವಿದೇಶಗಳಿಗೆ ಕಳುಹಿಸುತ್ತಿಲ್ಲ ? ಈ ಬಗ್ಗೆ ಕೂಡ ಸರ್ಕಾರ ಏನು ಯೋಚನೆ ಮಾಡುತ್ತಿದೆ ಎಂಬುದನ್ನು ತಿಳಿಸಬೇಕು ?

ಶ್ರೀ ವೈ. ರಾಮಕೃಷ್ಣ —ಕಳೆದಸಾರಿ ಸರ್ಕಾರಕ್ಕೆ ಬಂದ ಅಂಕಿಅಂಶಗಳ ಪ್ರಕಾರ ಸುಮಾರು ೨೯೦೦ ರಿಂದ ೩೦೦೦ ದವರೆಗೆ ಕುರಿಗಳು ಸತ್ತಿವೆ. ನಾನು ಆ ಏರಿಯಾವನ್ನೆಲ್ಲಾ ಸುತ್ತಿ ಆ ಜನರ ಜೊತೆ ಮಾತುಕತೆ ನಡೆಸಿದಾಗ ನನಗೆ ಅವರು ಕೊಟ್ಟಂಥ ಪಟ್ಟಿಯಲ್ಲಿ ೮೦೦೦ ಅಂತ ಬಂತು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ೮ ಸಾವಿರಕ್ಕೆ ಪರಿಹಾರವನ್ನು ಕೊಟ್ಟೆ ಆದರೆ ಈಗ ಪರಿಹಾರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ೮೦ ಸಾವಿರದಿಂದ ೧ ಲಕ್ಷದವರೆಗೂ ಕುರಿಗಳು ಸತ್ತಿವೆ, ಅವುಗಳಿಗೆಲ್ಲಾ ಪರಿಹಾರವನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಇದನ್ನು ನಿರ್ಣಯಿಸಲು ಆಯಾಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವೆಟರಿನರಿ ಆಫೀಸರ್ ಮತ್ತು ಕುರಿ ಪೋಷಕ ಸಂಘದಿಂದ ಒಬ್ಬರು ಸದಸ್ಯರನ್ನು ನೇಮಕ ಮಾಡಿ ಹಿಂದೆ ನಮಗೆ ಬಂದಿದ್ದ ಅರ್ಜಿಗಳನ್ನೆಲ್ಲಾ ಮುಂದಿಟ್ಟುಕೊಂಡು ಕೂಲಂಕಷವಾಗಿ ಪರಿಶೀಲಿಸಿ ಎಷ್ಟು ಪರಿಹಾರ ಕೊಡಬೇಕೆಂದು ಕಳುಹಿಸಿಕೊಡುವುದಾದರೆ ಅಷ್ಟು ಹಣವನ್ನು ಕೊಡುತ್ತೇವೆಂದು ನಾನು ಹೇಳಿದ್ದೇನೆ ಈಗ ಸಧ್ಯಕ್ಕೆ ೫ ಲಕ್ಷ ರೂ.ಗಳನ್ನು ಮುಂಗಡವಾಗಿ ಕೊಟ್ಟಿದ್ದೇವೆ, ಬೇಕೆಂದರೆ ಇನ್ನೂ ಕೊಡುತ್ತೇವೆ. ನಾನು ಹೇಳಿದಂತೆ ಈ ೩ ಜನರೂ ಸೇರಿ ಕರಾರುವಾಕ್ಕಾಗಿ ವರದಿಯನ್ನು ಕೊಡಲಿ.

ಇನ್ನು ಎರಡನೆಯದಾಗಿ ವಿಶ್ವಬ್ಯಾಂಕ್‌ನಿಂದ ಷೀಪ್ ಹಸ್ಬೆಂಡರಿ ಮತ್ತು ವೂಲ್ ಇಂಡಸ್ಟ್ರಿ ಕೆಲಸವನ್ನು ಈ ವರ್ಷ ಕರಾರುವಾಕ್ಕಾಗಿ ಮಾಡಿಸುತ್ತೇವೆ. ಈಗಾಗಲೇ ಷೀಪ್ ಅಂಡ್ ಷೀಪ್ ಡೆವಲಪ್‌ಮೆಂಟ್ ನಿಗಮದ ಆಶ್ರಯದಲ್ಲಿ ರಾಣಿಬೆನ್ನೂರಿನಲ್ಲಿ ಒಂದು ಕೋ ಆಪರೇಟಿವ್ ಸೊಸೈಟಿಯನ್ನು ತೆರೆದು ಖಾದಿ ಬಟ್ಟೆಗೆ ರಿಯಾಯಿತಿ ಕೊಡುವಂತೆ ಇದಕ್ಕೂ ಕೊಡುತ್ತಿದ್ದೇವೆ. ಇದರಲ್ಲಿ ಒಂದು ಸಂತೋಷದ ಸಂಗತಿ ಎಂದರೆ, ಕೇವಲ ೨ ತಿಂಗಳಲ್ಲಿ ಸುಮಾರು ೩ ಲಕ್ಷ ರೂ.ಗಳಷ್ಟು ವಸ್ತುಗಳ ಮಾರಾಟವಾಗಿದೆ. ನಮ್ಮ ರಾಜ್ಯದಲ್ಲಿ ಇಂಥ ೪ ಸೊಸೈಟಿಗಳನ್ನು ತೆರೆಯಬೇಕೆಂದು ಈಗಾಗಲೇ ಸ್ಥಳವನ್ನೂ ಆಯ್ಕೆ ಮಾಡಿದ್ದೇವೆ. ಅದನ್ನು ಇನ್ನು ೨-೩ ತಿಂಗಳಲ್ಲಿ ತೆರೆಯುವವರಿದ್ದೇವೆ.

ಶ್ರೀ ಜಿ. ರಾಜೂಗೌಡ —ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಮ್ಮ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಪ್ರವಾಸ ಬಂದಿದ್ದಾಗ ಅಲ್ಲಿರತಕ್ಕ ಮುಖಂಡರು ಮತ್ತು ವಕೀಲರು ಇವರನ್ನು ಭೇಟಿ ಮಾಡಿ ಅಲ್ಲಿ ಒಂದು ಸಿವಿಲ್ ಜಡ್ಜ್ ಕೋರ್ಟ್‌ನ್ನು ಕೊಡಬೇಕೆಂದು ಕೇಳಿದ್ದರು, ಕಾಡಾದ್ದನ್ನೂ ಕೂಡ ತಾವು ನೋಡಿ ಅದು ಚೆನ್ನಾಗಿದೆಯೆಂದು ಒಪ್ಪಿಕೊಂಡಿದ್ದಿರಿ. ಹೈಕೋರ್ಟ್ ಜಡ್ಜನ್ನು ಕರೆಸಿ ಅದನ್ನು ಪರಿಶೀಲಿಸಿ ಕೊಡುತ್ತೇವೆಂದು ಹೇಳಿದ್ದಿರಿ. ಆದರೆ ಇದುವರೆಗೂ ಈ ಕೆಲಸ ಪ್ರಾರಂಭವಾಗಿಲ್ಲ. ಇದನ್ನು ದಯವಿಟ್ಟು ಮಾಡಿಸಿಕೊಡುತ್ತೀರಾ?

ಶ್ರೀ ವೈ ರಾಮಕೃಷ್ಣ.—ಯಾವ ಯಾವ ತಾಲ್ಲೂಕಿನಲ್ಲಿ ಮುನ್ಸಿಫ್ ಕೋರ್ಟ್ ಇಲ್ಲ, ಅಂಥ ಕಡೆ ಮೊದಲು ಕೊಟ್ಟು ಅನಂತರ ೨ನೇ ಹಂತದಲ್ಲಿ ಸಿವಿಲ್ ಕೋರ್ಟ್ ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಆದ್ದರಿಂದ ಮುನ್ಸೀಫ್ ಕೋರ್ಟ್‌ನ್ನು ಮೊದಲು ಕೊಡುವುದಾದರೆ ಆಗಬಹುದೆಂದು ಹೇಳುತ್ತೇವೆ. ಸಿವಿಲ್ ಕೋರ್ಟ್ ಕೇಳುವುದಾದರೆ ಅದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕಾಗುತ್ತದೆ. ಹೈಕೋರ್ಟ್‌ನಿಂದ ಇನ್ನೂ ಶಿಫಾರಸು ಬಂದಿಲ್ಲ. ಅದು ಬಂದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಒಪ್ಪಿದ ಮೇಲೆ ಇದಕ್ಕೆ ಆರ್ಡರ್ ಇಷ್ಯೂ ಮಾಡಿಸುತ್ತೇನೆ.

MR. SPEAKER.—I shall now put th demands to the vote of the House. The question is.

"That the respective sums not exceeding the amounts mentioned in the list of demands inclusive of the sums granted on account be granted to Government to defray the charges which will come in course of payment during the financial year ending 31st March 1983 in respect of Demand Nos. 4, 35 and 36."

The Motion was adopted and the sums were granted

As ordered by the Chair, the motion of demands for grants are reproduced below.

Demand No. 4-Animal Husbandry and Dairy Development

"That a sum not exceeding Rs. 22,15,70,000 on Revenue Account and Rs. 1,50,0 ,000 on Capital Account inclusive of the sum granted on account' be granted to the Government to defray the charges which will come in course o payment during the financial year ending 31st day of March 1983 in respect of "Animal Husbandry and Dairy Development."

Demand No. 35-State Legislature

"That a sum not exdeeding Rs. 2,05,65,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "State Legislature"

Demand No. 36-Administration of Justice

"That a sum not exceeding Rs. 10,46,14,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Administration of Justice"

MR. SPEAKER.—We will take up the next demand.

Demand No. 61–Social Security and Welfare (Excluding Women and Children's Welfare)

SRI P. VENKATARAMANA (Minister for Social Welfare and Backward Classes).—Sir, on the recommendation of the Governor, I beg to move.—

> "That a sum not exceeding Rs. 29,43,43,000 on Revenue Account and Rs. 1,11,00,000 on Capital Account inclusive of the sum granted on account' be granted to the Government to defray the charges which will come in course of payment during the financial year ending 31st day of March 1983 in respect of "Social Security and Welfare (Excluding Women and Children's Welfare".

The question was proposed

Demand No. 62–Women and Children's Welfare

SMT. MANORAMA MADHWARAJ (Minister of State for Women and Children's Welfare).—Sir, on the recommandation of the Governor, I beg to move.

> "That a sum not exceeding Rs. 13,85,47,000 on Revenue Account inclusive of the sum granted 'on account' be granted to the Government to deray the charges which will come in course of payment during the financial year ending 31st day of March 1983 in respect of "Women and Children's Welfare".

The question was proposed.

MR. SPEAKER.—Both the Demends are before the House for discussion.

† ಶ್ರೀ ಪಿ.ಪಿ. ಹೆಗರೆ (ಚಿಕ್ಕೋಡಿ).—ಸನ್ಮಾನ್ಯ ಸಭಾಧ್ಯಕ್ಷರೇ, ಸಮಾಜ ಕಲ್ಯಾಣ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿರತಕ್ಕಂಥ ಡಿಮ್ಯಾಂಡ್ ೬೧ರ ಬಗ್ಗೆ ನಾನು ಕೆಲವು ಸಲಹೆಗಳನ್ನು ಮಾಡ ಬಯಸುತ್ತೇನೆ. ಮುಖ್ಯವಾಗಿ ಸಮಾಜದ ಉನ್ನತಿಗಾಗಿ ಬಡ್ಜೆಟ್‌ನಲ್ಲಿ ಏನು ಹಣವನ್ನು ಪ್ರಾವಿಷನ್ ಮಾಡಿದ್ದಾರೆ, ಅದು ಯಾವ ರೀತಿಯಲ್ಲೂ ಸಾಲುವುದಿಲ್ಲವೆಂದು ನಾನು ಇದಕ್ಕೆ ವಿರೋಧವನ್ನು ವ್ಯಕ್ತ ಪಡಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಹರಿಜನ ಗಿರಿಜನರ ಉದ್ಧಾರ ಮಾಡುತ್ತೇವೆಂದು ಹೇಳಿ ಅವರಿಂದ ಹಣ ವೆಚ್ಚವಾಗಿದೆಯೇ ಹೊರತು ಉಳಿದ ಸಮಾಜದ ಜೊತೆಯಲ್ಲಿ ಹೊಂದಾಣಿಕೆ ಮಾಡತಕ್ಕಂಥ ಪ್ರಯತ್ನ ಮಾತ್ರ ನಡೆಯಲಿಲ್ಲ. ಇದರ ಬಗ್ಗೆ ಜಾಹಿರಾತು, ಘೋಷಣೆಯನ್ನೂ ಕೂಡ ಮಾಡಿದ್ದಾರೆ ಜಗತ್ತಿನಲ್ಲಿ ಸಮಾಜದ ಪರಿಸ್ಥಿತಿ ಭಿನ್ನವಾಗಿದೆ, ಜಗತ್ತಿನಲ್ಲಿ ಶ್ರೀಮಂತರು ಇರುವುದರಿಂದ, ರಾಜಕೀಯ ಇರುವುದರಿಂದ ಬರೇ ವಿಕ್ಷಮತೆ ಇರುತ್ತದೆ. ಆದರೆ ನಮ್ಮ ದೇಶದಲ್ಲಿ ಎಲ್ಲೆಲ್ಲೂ ಅಸಮಾನತೆ, ಸಾಮಾಜಿಕ ಅಸಮಾನತೆ, ಆರ್ಥಿಕ

† Indicates that remarks or speeches have not been revised by member concerned.

ಅಸಮಾನತೆ ರಾಜಕೀಯ ಅಸಮಾನತೆ ಇವೆಲ್ಲವನ್ನು ತೊಡೆದು ಹಾಕಬೇಕಾದರೆ ಒಂದು ರೀತಿಯಾದ ಕ್ರಾಂತಿಕಾರಕ ಬದಲಾವಣೆಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಸಾಮಾನ್ಯ ಕಾರ್ಯಕ್ರಮದಿಂದ ಈ ಜನರು ಉಳಿಯುವ ಹಾಗೆಯೇ ಇಲ್ಲ. ಸಮಾಜದಲ್ಲಿ ಇದನ್ನು ಹೀಗೆಯೇ ಮುಂದುವರಿಸಿಕೊಂಡು ಹೋದರೆ ನೂರು ವರ್ಷಗಳಾದರೂ ಪರಿಸ್ಥಿತಿ ಹೀಗೆಯೇ ಇರುತ್ತದೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಮ್ಮ ಮುಂದೆ ಈಗ ಏನು ರಿಪೋರ್ಟ್‌ನಲ್ಲಿ ಹಣ ಇಟ್ಟಿದ್ದಾರೆ, ಇದು ಯಾವ ಮಟ್ಟಿಗೂ ಸಾಲುವುದಿಲ್ಲ. ಒಂದು ವಿಷಯವನ್ನು ಪ್ರಾರಂಭದಲ್ಲಿಯೇ ಹೇಳಬಯಸುತ್ತೇನೆ. ಸಮಾಜದಲ್ಲಿ ಹರಿಜನ–ಗಿರಿಜನರ ಸುಧಾರಣೆಯನ್ನು ಮಾಡತಕ್ಕಂಥದ್ದು ಒಂದು ಮಹತ್ವದ ಸಂಗತಿಯಾಗಿರುತ್ತದೆ. ಅದಕ್ಕೆ ಎಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಸರ್ಕಾರ ಕೊಡಲಿಲ್ಲ. ಆದರೂ ಶಿಕ್ಷಣಕ್ಕಾಗಿ ಹೆಚ್ಚು ಹೆಚ್ಚು ಹಣವನ್ನು ಇಟ್ಟಿರುವುದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಸಮಾಜದ ಉನ್ನತಿಗಾಗಿ ಅದರ ಬಗ್ಗೆ ಮಾತನಾಡುವ ಕಾಲಕ್ಕೆ ನಾನು ಕೆಲವು ಇತಿಹಾಸಗಳನ್ನು ಹೇಳಬೇಕಾಗುತ್ತದೆ. ಯಾವುದೇ ರಾಷ್ಟ್ರದಲ್ಲಿ ಯಾವುದೇ ಸಮಾಜದಲ್ಲಿ ಪರಿಸ್ಥಿತಿ ಕೆಟ್ಟಾಗ ಒಂದು ಕ್ರಾಂತಿಕಾರಕವಾದ ಬದಲಾವಣೆಗಳು ನಡೆದಿರುತ್ತವೆ. ನಮ್ಮ ಭಾರತದಲ್ಲಿರುವ ಸಮಾಜದೊಳಗೆ ಜಾತಿ ನಿರ್ಮೂಲನ ಮಾಡುವ ಸಲುವಾಗಿ ಸಮಾಜ ಸುಧಾರಣೆಯನ್ನು ಮಾಡುವ ಸಲುವಾಗಿ ಗೌತಮ ಬುದ್ಧರಂಥ ಜನರು ಶ್ರಮಿಸಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಕ್ರಿಶ್ಚಿಯನ್ ಧರ್ಮ ಸುಧಾರಣೆಯ ಸಲುವಾಗಿ ಮಾರ್ಟಿನ್ ಲೂಥರ್ ಕಿಂಗ್ ಅಂಥ ಜನರು ಶ್ರಮಿಸಿದರು. ಸಂಪ್ರದಾಯದ ವಿರುದ್ಧವಾಗಿ ಹೋರಾಡಿದರು. ಆ ಸಂಬಂಧದಲ್ಲಿ ಅವರೆಲ್ಲರೂ ಕಷ್ಟಕ್ಕೆ ಗುರಿಯಾದರು. ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರರು ನಮ್ಮ ದೇಶದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಮೇಲು ಕೀಳು ಎಂಬುದನ್ನೆಲ್ಲಾ ನಿರ್ಮೂಲ ಮಾಡಬೇಕೆಂದು, ಇದನ್ನು ಕಿತ್ತೊಗೆಯಬೇಕೆಂದು ಹೋರಾಟ ಮಾಡಿದರು. ಅವರಿಗೆ ಕೊನೆಗೆ ಆದ ಗತಿ ಎಂದರೆ ಅವನೂ ಕೂಡ ಕಷ್ಟಕ್ಕೆ ಈಡಾದರು. ಮುಂದೆ ನಮ್ಮ ಮಹಾತ್ಮಾಗಾಂಧೀಜಿಯವರು ಪ್ರಾರಂಭ ಮಾಡಿದರು. ಮಹಾತ್ಮಾಗಾಂಧೀಜಿಯವರು ಸ್ವಾತಂತ್ರ್ಯದ ಸಲುವಾಗಿ ಹೋರಾಟ ಮಾಡಿದರು. ಅಸ್ಪೃಶ್ಯತೆ ನಿರ್ಮೂಲನೆಯ ಸಲುವಾಗಿ ಹೋರಾಟ ಮಾಡಿದರು. ಅವರಿಗೆ ಇದರಿಂದ ಯಶಸ್ಸು ದೊರೆಯಲಿಲ್ಲ. ಇದಕ್ಕೆ ಒಂದು ಕಾರಣವಾಯಿತು. ಇದನ್ನು ನಾನು ಸ್ಪಷ್ಟವಾಗಿ ಮಾತನಾಡಬಯಸುತ್ತೇನೆ. ಯಾರೂ ಇದನ್ನು ಕೆಟ್ಟದಾಗಿ ತಿಳಿದುಕೊಳ್ಳಬಾರದು. ಮಹಾತ್ಮಾಗಾಂಧೀಜಿಯವರು ಈ ಕ್ರಮವನ್ನು ಯಾವ ರೀತಿ ತೆಗೆದುಕೊಂಡರು ಎಂದರೆ ಇದು ನಮ್ಮ ದೇಶದಲ್ಲಿ ಅಸಾಧ್ಯವಾದ ಮಾತಾಗುತ್ತಿರಲಿಲ್ಲ, ಧರ್ಮದ ಮೂಲವಾದ ಈ ದೇಶದಲ್ಲಿ ಧರ್ಮದ ನೀತಿ ನಿಯಮಗಳಲ್ಲಿ ದೋಷ ತುಂಬಿದ್ದರಿಂದ ಆ ದೋಷವನ್ನು ನಿರ್ಮೂಲ ಮಾಡಲು ಮೂಲಕ್ಕೇ ಕೈಹಾಕಬೇಕಾಗಿತ್ತು. ಮಹಾತ್ಮಾಗಾಂಧೀಜಿಯವರಿಗೆ ಅಷ್ಟಕ್ಕೆ ಸಾಧ್ಯವಾಗದ ಕಾರಣ ಮಹಾತ್ಮಾಗಾಂಧೀಜಿಯವರು ಅಸ್ಪೃಶ್ಯತೆ ಹೋಗಲಿ ಎಂದರೆ ಹೊರತು ಜಾತಿ ಹೋಗಬೇಕೆಂದು ಎಲ್ಲೂ ಹೇಳಲಿಲ್ಲ. ನಮಗೆ ತಿಳಿದಮಟ್ಟಿಗೆ ಮಹಾತ್ಮಾಗಾಂಧೀಜಿಯವರು ಜಾತಿಯನ್ನು ನಿರ್ಮೂಲ ಮಾಡಬೇಕು ಎನ್ನುವ ಪ್ರಶ್ನೆ ಅವರ ಮುಂದೆ ಇರಲಿಲ್ಲ. ಅಸ್ಪೃಶ್ಯತೆ ನಿವಾರಣೆಯಾಗಬೇಕು ಎಂದರೆ ಅಷ್ಟೇ ಮುಂದೆ ಹೋಗಿ "If untouchability remains. Hindusm goes" ಎಂದು ಹೇಳಿದ್ದಾರೆ. ಅಸ್ಪೃಶ್ಯತೆ ಹೋಗದೆ ಹಿಂದೂ ಧರ್ಮ ಉಳಿಯಲು ಸಾಧ್ಯವಿಲ್ಲವೆಂದು ಹೇಳಿದರು. ಚತುರ್ವರ್ಣ ಇರಬೇಕು, ಅಸ್ಪೃಶ್ಯತೆ ಹೋಗಬೇಕು ಎಂದರು, ನನಗೆ ತಿಳಿದ ಮಟ್ಟಿಗೆ ಜಾತಿಗಳು ಇನ್ನೂ ಉಳಿದಿವೆ. ಎಲ್ಲಿಯವರೆಗೆ ಈ ಜಾತಿಗಳು ಉಳಿದಿವೆಯೋ ಅಲ್ಲಿಯವರೆಗೆ ಅಸ್ಪೃಶ್ಯತೆ ಉಳಿದೇ ಇರುತ್ತದೆ. ಇದೆಲ್ಲ ಹೋಗಬೇಕಾದರೆ ಜಾತಿಗಳ ವರ್ಗಾವಣೆಗೆ ಕೈ ಹಾಕಬೇಕಾಗುತ್ತದೆ. ಇದಕ್ಕೆ ಕೊಡಲಿಪೆಟ್ಟು ಹಾಕಬೇಕಾಗುತ್ತದೆ. ದುರ್ದೈವ ದೇಶದ ದೌರ್ಭಾಗ್ಯ, ಹರಿಜನ–ಗಿರಿಜನರ ದೌರ್ಭಾಗ್ಯ ಮಹಾತ್ಮಾಗಾಂಧಿಜಿಯವರು ಇದಕ್ಕೆ ತಯಾರಾಗಲಿಲ್ಲ. ಆದ್ದರಿಂದ ಜಾತೀಯತೆಯ ಕಾಯಿದೆಗೆ ಅಸ್ಪೃಶ್ಯತೆ ಹೋಗಬೇಕು ಎನ್ನುವ ಮಾತಿಗೆ ಈ ದೇಶದಲ್ಲಿ ಫಲ ಸಿಗಲಿಲ್ಲ. ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೋರಾಡಿದರು. ಅವರು ಜಾತೀಯತೆ ಹೋಗಬೇಕೆಂದು ಬಡತನ ಹೋಗಬೇಕೆಂದು ಬೇಕಾದಷ್ಟು ಹೋರಾಟ ಮಾಡಿದರು. ಅವರು ತಮ್ಮ ಕೊನೆಯ ಉಸಿರು ಇರುವವರೆಗೂ ಜಾತೀಯತೆ ಹೋಗಬೇಕೆಂದು ಬಹಳವಾಗಿ ಶ್ರಮಿಸಿದರು. ತಮಗೆಲ್ಲಾ ತಿಳಿದ ಪ್ರಕಾರ ಸ್ವಾತಂತ್ರ್ಯ ಪೂರ್ವದಲ್ಲಿ ಬಹುಕಾಲ ಪೂರ್ವದಲ್ಲಿ ಅವರು ಧರ್ಮದ ವಿಷಯವನ್ನು ಓದಿ ಓದಿ ನಮ್ಮ ರಾಷ್ಟ್ರದ ಪ್ರಮುಖರಿಗೆ ಹೇಳಿ ಹೇಳಿ ಬೇಸತ್ತು ೧೯೩೫ರ ಹೊತ್ತಿಗೆ ಘೋಷಣೆಯನ್ನು ಮಾಡಿದರು. ಘೋಷಣೆ ಮಾಡಿದ ನಂತರ ನಮ್ಮ ದೇಶ ಕಣ್ಣು ತೆರೆಯಬೇಕಾಯಿತು. ಆ ಕೆಲಸವನ್ನು ಯಾರೂ ಮಾಡಲಿಲ್ಲ. ಕಡೆಗೆ ಕಾಯ್ದು, ಕಾಯ್ದು ೨೦ ವರ್ಷಗಳ ತನಕ ಕಾದರು. ದೇಶದಲ್ಲಿ

ಪರಿಣಾಮವಾಗುತ್ತದೆ, ಸುಧಾರಣೆಯ ಫಲ ದೊರಕುತ್ತದೆ ಎಂದು ೨೦ ವರ್ಷಗಳ ಕಾಲ ಕಾದರು. ಸ್ವಾತಂತ್ರ್ಯ ಸಿಕ್ಕಿತು, ಸ್ವಾತಂತ್ರ್ಯ ಸಿಕ್ಕಿದ ನಂತರವೂ ಏನು ಪರಿಣಾಮವಾಗಲಿಲ್ಲ. ನಮ್ಮ ರಾಷ್ಟ್ರದ ಎಲ್ಲ ಮುಖಂಡರೂ ಘೋಷಣೆ ಮಾಡಿಕೊಂಡೇ ಬಂದಿದ್ದಾರೆ ಜಾತೀಯತೆಯ ವಿರುದ್ಧ, ಬಡತನದ ವಿರುದ್ಧ ಘೋಷಣೆಗಳನ್ನು ಮಾಡಿಕೊಂಡೇ ಬಂದಿರುತ್ತಾರೆ. ಆದರೆ ಇದನ್ನು ನಮ್ಮ ರಾಷ್ಟ್ರದಲ್ಲಿ ಅಳಿಸಲಿಕ್ಕೆ ಆಗಲೇ ಇಲ್ಲ. ತಮಗೆ ಗೊತ್ತಿರುವ ಹಾಗೆ ಬಾಬಾ ಸಾಹೇಬ್ ಅಂಬೆಡ್‌ಕರ್‌ರವರು ೧೯೨೭ನೇ ಇಸವಿಯಲ್ಲಿ ಮಹಡ್ ನಗರದಲ್ಲಿ ಸತ್ಯಾಗ್ರಹ ಮಾಡಿದರು. ಮಾನವೀಯ ಹಕ್ಕುಗಳಿಗಾಗಿ ಸತ್ಯಾಗ್ರಹವನ್ನು ಮಾಡಿದರು, ಕೆರೆಯ ನೀರನ್ನು ಕುಡಿಯಲಿಕ್ಕೆ ಹಕ್ಕು ಇದೆ ಎಂದು ಹೇಳಿ ಸತ್ಯಾಗ್ರಹ ಮಾಡಿದರು. ಆದರೆ ಕೆರೆಯ ಮುಂದೆ ಹೋದಾಗ ಸಗಣಿ, ಹಾಲು ಇದನ್ನೆಲ್ಲ ಹಾಕಿ ಶುದ್ಧ ಮಾಡಿದರು ಎಂದು ಕಥೆ ಇದೆ.

ಡಾ॥ ಅಂಬೇಡ್ಕರ್‌ರವರು ನಾಸಿಕ್‌ನಲ್ಲಿ ಒಂದು ರಾಮಮಂದಿರ ಪ್ರವೇಶ ಮಾಡಲಿಕ್ಕೆ ಒಂದು ದೊಡ್ಡ ಸಭೆಯನ್ನು ಕೂಡಿಸಿ ಪ್ರವೇಶ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಆಗ ಅಲ್ಲಿನ ಪೂಜಾರಿಗಳು ದೇವರ ಭಕ್ತರುಗಳು ಏನು ಮಾಡಿದರೂ ಅಂದರೆ, ರಾಮಮಂದಿರದ ಬಾಗಿಲಿಗೆ ಬೀಗ ಹಾಕಿದರು. ಒಂದು ವರ್ಷವಾದರೂ ಬೀಗ ತೆಗೆಯಲಿಲ್ಲ. ಇಂತಹ ಪ್ರಸಂಗಗಳಲ್ಲಿ ಸತ್ಯಾಗ್ರಹ ಮಾಡಿ ಹಿಂದೂ ಸಮಾಜದ ಜನರ ಮೇಲೆ ದಾಳಿ ಮಾಡಿದಾಗ ಅವರು ಬಂದ ಜನರನ್ನು ಹೊಡೆದರು. ಇಷ್ಟೆಲ್ಲಾ ಡಾ॥ ಅಂಬೇಡ್ಕರ್‌ರವರು ಮಾಡಿ ನೋಡಿ ಪರೀಕ್ಷೆ ಮಾಡಿ ಹಿಂದೂ ಜನರನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ತಿಳಿದು, ಅವರು ಧರ್ಮಾಂತರ ಘೋಷಣೆ ಮಾಡಿದರು, ಅದರಂತೆ ಧರ್ಮಾಂತರ ಮಾಡಿದರು. ಆದರೆ ಸುದೈವದಿಂದ ಪಂಡಿತ ಜವಹರಲಾಲ್ ನೆಹರೂರವರು ಅಂಬೇಡ್ಕರ್‌ರವರನ್ನು ರಾಜ್ಯಾಂಗ ರಚನೆಯ ಚೇರ್ಮನ್ ಆಗಿ ಮಾಡಿದರು. ಅದನ್ನು ಅವರು ಉಪಯೋಗ ಮಾಡಿಕೊಂಡು ನಮ್ಮ ಸಂವಿಧಾನದೊಳಗೆ ಈ ಸಮಾಜಕ್ಕೆ ಕೆಲವು ಸವಲತ್ತುಗಳನ್ನು ಕೊಡಬೇಕೆಂದು ಹೇಳಿ ದೊಡ್ಡ ಉಪಕಾರ ಮಾಡಿದ್ದಾರೆ. ಅವರ ಕಲ್ಪನೆ ಏನಿತ್ತು ನಮ್ಮ ಮುಖಂಡರ ಕಲ್ಪನೆ ಏನಿತ್ತು, ಅದನ್ನೆಲ್ಲಾ ಸಂವಿಧಾನದೊಳಗೆ ಅಳವಡಿಸಿದರು. ಈ ಜನರು ಉದ್ಧಾರವಾಗಬೇಕು, ಉಳಿದ ಸಮಾಜದ ಜನರ ಜೊತೆ ಇವರು ಹೋಗಬೇಕೆಂದು ಪ್ರಯತ್ನ ಮಾಡಿದರು, ಆದರೆ ನಮ್ಮ ದುರ್ದೈವ, ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈ ಬಗ್ಗೆ ಏನೂ ಮಾಡಿಲ್ಲ. ಆ ಸವಲತ್ತುಗಳು ಸಂವಿಧಾನದಲ್ಲೇ ಉಳಿದಿವೆ. ಅವುಗಳನ್ನು ಜನರ ಮುಂದೆ ಹೇಳುತ್ತಿದ್ದೇವೆ. ಘೋಷಣೆ ಮಾತ್ರ ಕೂಗಿದರು. ನನಗೆ ಈ ಸಂದರ್ಭದಲ್ಲಿ ಮಾನ್ಯ ದೇವರಾಜ ಅರಸ್‌ರವರ ನೆನಪಾಗುತ್ತದೆ. ಅವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಬಂದಾಗ ಡಾ॥ ಅಂಬೇಡ್ಕರ್‌ರವರು ಏನು ಅಪೇಕ್ಷೆ ಮಾಡಿದ್ದರೋ, ಸಂವಿಧಾನದಲ್ಲಿ ಯಾವ್ಯಾವ ಸವಲತ್ತುಗಳನ್ನು ಈ ಜನರಿಗೆ ಕೊಡಮಾಡಿದ್ದರೋ ಅವುಗಳನ್ನೆಲ್ಲಾ ಕಾರ್ಯಗತ ಮಾಡುವ ನಿರ್ಧಾರದಿಂದ ಅರಸ್‌ರವರು ಆ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಂಡರು. ಅವರು ಮುಖ್ಯಮಂತ್ರಿಗಳಾಗಿ ಬಂದಾಗ ಬಡ ಜನರು ಎಲ್ಲಿದ್ದಾರೆ, ಮನೆ ಇಲ್ಲದ ಜನರು ಎಲ್ಲಿದ್ದಾರೆ ಅವರಿಗೆ ಏನಾದರೊಂದು ಸಹಾಯ ಮಾಡಬೇಕೆಂದು ಅವರ ಕಲ್ಪನೆಗೆ ಬಂತು. ಅದರಂತೆ ಅಂತಹ ಜನರಗೆ ಜಾಗ ಕೊಟ್ಟರು, ಮನೆ ಕಟ್ಟಿಸಿ ಕೊಟ್ಟರು, ಇನ್ನೂ ಕೆಲವು ಕಾರ್ಯಗಳನ್ನು ಮಾಡಿಕೊಡಲು ಪ್ರಯತ್ನ ಮಾಡಿದರು. ಸಾಹುಕಾರರ ಧಾಳಿಯಲ್ಲಿ ಸಿಕ್ಕಿ ಸಾಯುತ್ತಿದ್ದ ಜನರನ್ನು ಸಾಹುಕಾರರಿಂದ ಬಿಡಿಸಿ ಅವರನ್ನು ಮುಕ್ತರನ್ನಾಗಿ ಮಾಡಿದರು. ವೃದ್ಧಾಪ್ಯ ವೇತನಗಳನ್ನು ಕೊಡಲಿಕ್ಕೆ ಶುರುಮಾಡಿದರು. ಭೂಸುಧಾರಣಾ ಕಾನೂನು ಮಾಡಿ ಭೂಮಿ ಇಲ್ಲದ ರೈತರಿಗೆ ಭೂಮಿ ಕೊಟ್ಟು ನಮ್ಮ ದೇಶದಲ್ಲಿ ಒಂದು ಪ್ರಮುಖವಾದಂಥ ಕಾನೂನನ್ನು ಮಾಡಿದರು. ಹರಿಜನ–ಗಿರಿಜನರಿಗೆ ರಿಸರ್ವೇಷನ್ ಕೂಡ ಮಾಡಿದರು. ಸಂವಿಧಾನದಲ್ಲಿ ಏನೇನು ಸವಲತ್ತುಗಳನ್ನು ಕೊಡಮಾಡಿದ್ದರೋ ಅವುಗಳನ್ನು ಕೊಡಲು ಬಿಗಿಯಾದ ಕಾರ್ಯಕ್ರಮ ತೆಗೆದುಕೊಂಡು ಅವುಗಳನ್ನು ಜಾರಿಗೆ ತರಬೇಕೆಂದು ಆದೇಶ ಮಾಡಿದರು. ನಮ್ಮ ಜನರಿಗೆ ಯಾರಿಗೂ ಈ ರಿಸರ್ವೇಷನ್ ಗೊತ್ತೇ ಇರಲಿಲ್ಲ. ಸರ್ಕಾರಿ ಆರ್ಡರ್ ಬರುವವರೆಗೂ ಸಂವಿಧಾನದಲ್ಲಿರತಕ್ಕ ಅನುಕೂಲಗಳನ್ನು ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಉಳಿದ ಕ್ಷೇತ್ರಗಳಲ್ಲಿ ಶೇಕಡ ೧೮ರಷ್ಟು ಅನುಕೂಲವನ್ನು ಕಟ್ಟುನಿಟ್ಟಾಗಿ ಇಲ್ಲಿಯವರೆಗೆ ಯಾರೂ ಪಾಲನೆ ಮಾಡಿರಲಿಲ್ಲ. ಅದನ್ನು ಮಾನ್ಯ ದೇವರಾಜ ಅರಸ್‌ರವರು ಮಾಡಿದರು. ಆಮೇಲೆ ಪಂಚಾಯಿತಿ, ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ ಇವುಗಳಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ ಗಿರಿಜನರಿಗಾಗಿ ಖರ್ಚು ಮಾಡತಕ್ಕ ಒಂದು ಆರ್ಡರನ್ನು ತಂದರು. ಈ ರೀತಿಯ [illegible] ಕೆಲಸವನ್ನು ನಮ್ಮ ದೇಶದಲ್ಲಿ ಯಾವ ಮುಖ್ಯಮಂತ್ರಿಗಳೂ ಯಾವ ರಾಜಕೀಯ

ಮುಖಂಡರುಗಳು ಮಾಡಿರಲಿಲ್ಲ. ಅಂತಹ ಕೆಲಸವನ್ನು ಮಾನ್ಯ ಅರಸ್‌ರವರು ಮಾಡಿದ್ದಾರೆ. ನಾನು ಇವತ್ತು ಅವರನ್ನು ಸ್ಮರಣೆ ಮಾಡುತ್ತೇನೆ. ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವರು ಇವತ್ತು ದಿವಂಗತರಾಗಿದ್ದರೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಈ ಪ್ರಸಂಗದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ಗುಂಡೂರಾಯರಿಗೆ ಈ ದಿಶೆಯಲ್ಲಿ ಕೆಳಗಿನ ಜನರನ್ನು ಮೇಲಕ್ಕೆಬ್ಬಿಸುವುದಕ್ಕೆ ಅವಕಾಶ ಸಿಕ್ಕಿತ್ತು. ಅರಸ್‌ರವರು ಮಾರ್ಗ ಹಾಕಿ ಕೊಟ್ಟಿದ್ದರು. ಈ ಸಮಾಜದಲ್ಲಿ ಧೈರ್ಯದಿಂದ ದಾರಿ ಮಾಡಿಕೊಟ್ಟಿದ್ದರು. ಇದಕ್ಕಾಗಿ ನನ್ನ ಕೃತಜ್ಞತೆಯನ್ನು ಮಾನ್ಯ ಅರಸ್‌ರವರಿಗೆ ಅಷ್ಟೆ ಅಲ್ಲದೆ ಅವರ ಮಂತ್ರಿಮಂಡಲದಲ್ಲಿ ಎಲ್ಲಾ ಸದಸ್ಯರಿಗೂ ಹಾಗೂ ಆ ಕಾಲದಲ್ಲಿದ್ದ ಶಾಸಕರೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇಂತಹ ಕಾರ್ಯ ಮಾಡುವ ಕಾರ್ಯಕ್ಕೆ ಅವರಿಗೆ ಯಾರಿಂದಲೂ ವಿರೋಧ ಬರಲಿಲ್ಲ. ಯಾರು ವಿರೋಧ ಮಾಡಲಿಲ್ಲ. ಮಂತ್ರಿ ಮಂಡಲದ ಸದಸ್ಯರೆಲ್ಲಾ ಕೂಡಿ ಮುಂದೆಹೋಗಿ ಈ ಕೆಲಸಗಳನ್ನು ಮಾಡಲು ಸಮ್ಮತಿ ಕೊಟ್ಟರು. ಶಾಸಕರು ಸಮ್ಮತಿ ಕೊಟ್ಟರು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಮಾನ್ಯ ಗುಂಡೂರಾಯರಿಗೆ ಅರಸ್‌ರವರು ಒಂದು ಸುಸಂದಿಯನ್ನು ಹಾಕಿಕೊಟ್ಟರು. ಆ ಮಾರ್ಗದಿಂದ ತಾವೂ ಸಹ ಹೋಗಬೇಕು. ಇವತ್ತು ಮಾಡುವ ಕೆಲಸಕ್ಕಿಂತ ನಾಳೆ ಹೆಚ್ಚು ಮಾಡಬೇಕು. ನಾಳೆ ಮಾಡುವ ಕೆಲಸಕ್ಕಿಂತ ನಾಡಿದ್ದು ಹೆಚ್ಚು ಕೆಲಸ ಮಾಡಬೇಕು. ಇಂತಹ ಇನ್ನೂ ಹಲವಾರು ಯೋಜನೆಗಳನ್ನು ಮಾನ್ಯ ಅರಸ್‌ರವರು ತಮ್ಮಲ್ಲಿ ಇಟ್ಟುಕೊಂಡಿದ್ದರು. ಆದರೆ ನಮ್ಮ ದೇಶಕ್ಕೆ ಅವರು ಮುಖ್ಯಮಂತ್ರಿಗಳಾಗಿರುವುದು ಬೇಡವಾಯಿತು, ಇದು ದುರ್ದೈವದ ಸಂಗತಿ. ಅವರು ಮಾಡದಿದ್ದರೂ ಅವರು ಹಾಕಿಕೊಟ್ಟಿರುವ ಚೌಕಟ್ಟಿನೊಳಗೆ ಸಮಾಜವನ್ನು ಮುಂದೆ ತರುವುದಕ್ಕೆ ಈಗಿನವರು ಪ್ರಯತ್ನಪಟ್ಟಿದ್ದರೆ ಅವರಿಗೆ ಬಹಳ ಭೂಷಣವಾಗುತ್ತಿತ್ತು. ಅದನ್ನು ಮಾಡಲಿಕ್ಕೆ ಈಗಿನ ಮುಖ್ಯಮಂತ್ರಿಗಳಿಗೆ ಸಾಧ್ಯವಾಗುತ್ತಿತ್ತು. ಏಕೆಂದರೆ ಅದನ್ನು ಮಾಡಲಿಕ್ಕೆ ಪ್ರಚಂಡ ಬಹುಮತವಿತ್ತು. ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಯಾರಿಂದಲೂ ವಿರೋಧವಿರಲಿಲ್ಲ. ವಿರೋಧಪಕ್ಷದವರಾದ ನಾವು ಕೂಡ ಸ್ವಾಗತ ಮಾಡುತ್ತಿದ್ದೆವು. ಇದರಿಂದ ಬಡಜನರಿಗೆ ಅನುಕೂಲವಾಗುತ್ತಿತ್ತು. ಅಂತಹ ಸಮಯ ಇದ್ದರೂ ಸಂಗಿ ದ್ದರೂ ಅದನ್ನು ಬಳಸಿಕೊಂಡಿಲ್ಲವೆಂದು ಬಹಳ ದುಃಖದಿಂದ ಹೇಳ ಬಯಸುತ್ತೇನೆ. ಸಮಾಜದ ಏಳಿಗೆ ಆಗಬೇಕಾದರೆ ಮಾನ್ಯ ಸಮಾಜ ಕಲ್ಯಾಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಸಮಾಜ ಯಾವರೀತಿ ಇದೆ ಎಂಬುದನ್ನು ವ್ಯವಸ್ಥಿತವಾಗಿ ಮೊದಲು ಅಭ್ಯಾಸ ಮಾಡಬೇಕು. ಬಡತನ ನಮ್ಮ ದೇಶದಲ್ಲಿದೆ, ಎಲ್ಲಾ ಜಾತಿಗಳಲ್ಲೂ ಇದೆ. ನಮ್ಮ ಪ್ರಧಾನಮಂತ್ರಿಗಳು ಹೇಳಿದಹಾಗೆ ಬಡತನ ಜಗತ್ತಿನ ತುಂಬಾ ಇದೆ. ಆದರೆ ಸಮಾಜದ ಗತಿ ಏನು? ಈ ಬಡತನದ ಜೊತೆಗೆ ಎಲ್ಲಾ ತರದಲ್ಲೂ ಹಿಂದುಳಿದವರಾಗಿದ್ದಾರೆ. ಅದಕ್ಕೆ ಕಾರಣ ಅಸ್ಪೃಶ್ಯತೆ. ಇವರೂ ಕೂಡ ಸಮಾಜದಲ್ಲಿ ಮನುಷ್ಯರಾಗಿ ಬಾಳಲು ಮೇಲಕ್ಕೇಳಲು ಸಾಧನ ಇದೆ. ಇವರಿಗೆ ಸಹಾಯ ಬೇಕಾದಷ್ಟು ಇದೆ. ಆದರೆ ಈ ಜನರಿಗೆ ಎಲ್ಲಾ ಕಡೆಗಳಲ್ಲೂ ಅಸ್ಪೃಶ್ಯತೆಯ ಬೇಲಿ ಮಧ್ಯೆ ಇದೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಂಡರು ಅಸ್ಪೃಶ್ಯತೆ ಹೋಗುವುದಿಲ್ಲ. "ಲಗ್ನ ಆಗುವವರೆಗೂ ಹುಚ್ಚು ಹೋಗುವುದಿಲ್ಲ ಹುಚ್ಚು ಬಿಡುವವರೆಗೂ ಮದುವೆಯಾಗುವುದಿಲ್ಲ" ಎನ್ನುವ ಹಾಗೆ ಅಸ್ಪೃಶ್ಯತೆ ಹೋಗುವವರೆಗೂ ಈ ಜನಸ ಉದ್ಧಾರವಾಗುವುದಿಲ್ಲ. ಈ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ, ಇವರಿಗೆ ರಾಜಕೀಯ ಪ್ರಜ್ಞೆಯಿಲ್ಲ. ಇಂತಹವರಿಗೆ ೫-೧೦ ಕೋಟಿ ರೂಪಾಯಿಗಳನ್ನು ಹಣವನ್ನು ಕೊಟ್ಟರೆ ಅದು ಯಾವುದಕ್ಕೂ ಸಾಲುವುದಿಲ್ಲ. ಇದರಲ್ಲಿ ರಾಷ್ಟ್ರದ ಜವಾಬ್ದಾರಿ ಇದೆ ಸರ್ಕಾರದ ಜವಾಬ್ದಾರಿ ಇದೆ. ಈ ಜನರಿಗೆ ಏನೇನು ಬೇಕು ಅದನ್ನು ಕೊಡಬೇಕು. ಉಳಿದ ಸಮಾಜದ ಜನರ ಜೊತೆ ಹೊಂದಿಕೊಂಡು ಹೋಗುವಂತೆ ಮಾಡುವ ಉದ್ದೇಶ ನಮ್ಮಲ್ಲಿರಬೇಕು. ಅದಿಲ್ಲದಿದ್ದರೆ ನಾವು ಕೊಡುತ್ತೇವೆ ಅವರು ಸುಮ್ಮನೆ ಇರುತ್ತಾರೆ. ಈ ದೇಶದಲ್ಲಿ ಕ್ರಾಂತಿಯಾಗಬೇಕು. ಫ್ರಾನ್ಸ್ ದೇಶದಲ್ಲಿ ಶ್ರೀಮಂತರ ಆಳ್ವಿಕೆಯ ವಿರುದ್ಧ ಕ್ರಾಂತಿಯಾಯಿತು.

ಅಲ್ಲಿ ಧರ್ಮ ಹಾಗೂ ಜಾತಿಯ ಸಮಸ್ಯೆಗಳಿರಲಿಲ್ಲ. ಆದರೆ ಅಲ್ಲಿ ರಾಜಕೀಯ ಮತ್ತು ಆರ್ಥಿಕ ಸಮಸ್ಯೆ ಬಂದ ಕಾರಣದಿಂದ ಕ್ರಾಂತಿಯಾಯಿತು. ನಮ್ಮಲ್ಲಿ ಜಾತಿವಾದ ಬಹಳ ಹೆಚ್ಚು ಇದೆ. ಮುಖ್ಯವಾಗಿ ಈ ಅಸ್ಪೃಶ್ಯತೆ ಸಮಸ್ಯೆ ಏನಿದೆ, ಇದನ್ನು ದೂರ ಮಾಡಬೇಕಾದರೆ ನಮ್ಮಲ್ಲಿ ಪ್ರಚಂಡ ಮಹಾ ಕ್ರಾಂತಿಯಾಗಬೇಕಾಗಿದೆ. ೧೨ನೇ ಶತಮಾನದಲ್ಲಿಯೇ ಬಸವಣ್ಣನವರು ಈ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕೆಂದು ಮತ್ತು ಉಚ್ಚ ಮತ್ತು ನೀಚ ಎಂಬುದು ಹೋಗಬೇಕೆಂದು ಹೋರಾಟ

ಮಾಡಿದರು. ಇದರಿಂದ ಮುಂದೆ ಅವರ ಗತಿ ಏನಾಯಿತು ? ಅವರು ತಮ್ಮ ಹುದ್ದೆಯನ್ನೇ ಬಿಟ್ಟು ಕೊಡಬೇಕಾಗಿ ಬಂತು ಇವರ ನಂತರ ಇವರ ಶಿಷ್ಯರು ಏನು ಮಾಡಿದರು ?

ಅಧ್ಯಕ್ಷರು.—ಆ ಚರಿತ್ರೆಯನ್ನೆಲ್ಲಾ ಹೇಳುವುದಕ್ಕೆ ಈಗ ಸಮಯವಿಲ್ಲ. ನಾವು ಈಗಿನ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಹೇಳಿ.

ಶ್ರೀ ಪಿ. ಪಿ. ಹೆಗರೆ.—ನಾನು ಬೇರೆ ಇಲಾಖೆಗಳ ಬೇಡಿಕೆಗಳು ಬಂದಾಗ ಮಾತನಾಡಲಿಲ್ಲ. ಆದ ಕಾರಣ ನನಗೆ ತಾವು ಸ್ವಲ್ಪ ಹೆಚ್ಚು ಸಮಯ ಕೊಡಬೇಕು. ನಾನು ಮುಖ್ಯವಾಗಿ ಹೇಳುವುದೇನೆಂದರೆ, ಈ ಜನರ ಏಳಿಗೆಗೆ ಸರ್ಕಾರದವರು ಸಣ್ಣಪುಟ್ಟ ಕೆಲಸಗಳನ್ನು ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದಕಾರಣ ಸರ್ಕಾರದವರು ಕ್ರಾಂತಿಕಾರಕವಾದಂಥ ಬದಲಾವಣೆಗಳನ್ನು ಮಾಡಬೇಕಾಗಿದೆ ಇಲ್ಲದಿದ್ದರೆ ನಾನು ಮೊದಲೇ ಹೇಳಿದಂತೆ ಒಂದಲ್ಲ ಒಂದು ದಿವಸ ಇಲ್ಲಿಯೂ ಕ್ರಾಂತಿಯಾಗುತ್ತದೆ. ನಮ್ಮ ಡಾಕ್ಟರ್ ಅಂಬೇಡ್ಕರ್ ಅವರು ಒಂದು ಮಾತನ್ನು ಹೇಳಿದರು. ಏನೆಂದರೆ, Tell the slave that he is slave and he will revolt ಎಂದು. ನಮ್ಮ ಜನರಲ್ಲಿ ಸ್ಲೇವರಿ ಎಂಬುದು ಇದ್ದರೆ ಅದನ್ನು ಹೋಗಲಾಡಿಸಿ ಅವರಲ್ಲಿ ಜಾಗೃತಿ ಉಂಟುಮಾಡಬೇಕು. ಈ ಒಂದು ಕೆಲಸ ಸಮಾಜ ಕಲ್ಯಾಣ ಇಲಾಖೆಯವರ ಮೇಲಿದೆ. ಮಹಾತ್ಮಾ ಗಾಂಧೀಜಿ ಅವರ ಸಹ ಇದೇ ಮಾತನ್ನು ಹೇಳಿದರು ಆದಕಾರಣ ತಾವು ಕೇವಲ ಹಣ ಖರ್ಚು ಮಾಡಿದರೆ ತಮ್ಮ ಕೆಲಸ ಮುಗಿಯಲಿಲ್ಲ. ಈ ಜನರದಲ್ಲಿ ಒಂದು ರೀತಿಯ ಜಾಗೃತಿ ಉಂಟಾಗುವಂತಹ ರೀತಿಯಲ್ಲಿ ತಾವು ಕೆಲಸ ಮಾಡಬೇಕಾಗಿದೆ. ತಾವು ಮಾಡದಿದ್ದರೆ ಬೇರೆ ಯಾರಿಂದಲೂ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಸಮಾಜದ ಉನ್ನತಿಯಾಗದಿದ್ದರೆ ಒಂದ ದಿವಸ ಕ್ರಾಂತಿಯಾಗುವುದು ಖಂಡಿತ ಇದೇ ಸಂದರ್ಭದಲ್ಲಿ ನಮ್ಮ ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಸಲುವಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕಾನ್ಸ್ಟಿಟ್ಯೂಯಂಟ್ ಅಸೆಂಬ್ಲಿಯಲ್ಲಿ ಹೇಳಿದಂಥ ಒಂದು ಮಾತನ್ನು ಈಗ ಹೇಳಬಯಸುತ್ತೇನೆ.—

> "On Jan 26 1950, we are going to enter into life of contradictions. In politics, we will have equality and in social, economic life, we will have inequality We must remove this contradiction at the earliest possible moment or else. those who suffer from inequality will prove the structure of political democracy, which is Assembly, laboriously built up."

ಇವರು ೧೯೪೯ರಲ್ಲಿ ಡ್ರಾಫ್ಟಿಂಗ್ ಕಮಿಟಿಯ ಆಕ್ಟಿಂಗ್ ಚೇರ್‌ಮನ್ ಆಗಿದ್ದಾಗಲೇ ಈ ಮಾತನ್ನು ಹೇಳಿದ್ದು. ಈ ಮಾತನ್ನು ಅವರು ಹೇಳಿ ಇಲ್ಲಿಗೆ ೨೩-೨೪ ವರ್ಷಗಳ ಮೇಲಾಯಿತು. ಆದರೆ ಇದನ್ನು ಯಾರೂ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ ಯಾವ ಸರ್ಕಾರವೂ ಇದರ ಬಗ್ಗೆ ಯೋಜನೆ ಮಾಡಲಿಲ್ಲ. ಅವರೇನೂ ಹುಚ್ಚರಾಗಿ ಈ ರೀತಿ ಹೇಳಲಿಲ್ಲ. ಬಹಳ ವಿಚಾರವಂತರಾಗಿಯೇ ಈ ರೀತಿ ಹೇಳಿದ್ದಾರೆ. ಈ ಕಾರಣದಿಂದ ನಮ್ಮ ಸಮಾಜ ಕಲ್ಯಾಣ ಇಲಾಖೆ ಬೇರೆ ಇಲಾಖೆಗಳ ರೀತಿಯಲ್ಲಿ ಕೆಲಸ ಮಾಡಿದರೆ ಈ ಜನರ ಏಳಿಗೆಯಾಗುವುದಿಲ್ಲ. ಹೆಚ್ಚಿನ ಒಂದು ಶ್ರದ್ಧೆಯಿಂದ ಕೆಲಸ ಮಾಡಬೇಕಾಗಿದೆ. ಸುದೈವದ ಸಂಗತಿ ಎಂದರೆ, ಈ ಇಲಾಖೆಗೆ ಹರಿಜನ ಕೋಮಿಗೆ ಸೇರಿದವರೇ ಮಂತ್ರಿಯಾಗಿರುವುದು. ಹರಿಜನರ ಕಷ್ಟಸುಖಗಳೇನೆಂಬುದು ಇವರಿಗೆ ಚೆನ್ನಾಗಿ ಗೊತ್ತಿರುತ್ತದೆಂಬ ಕಾರಣದಿಂದ ಈ ಕೋಮಿಗೆ ಸೇರಿದವರನ್ನೇ ಮಂತ್ರಿಗಳನ್ನಾಗಿ ನೇಮಕ ಮಾಡುತ್ತಿರುವುದರಿಂದ ಈ ಒಂದು ಸಮಾಜದ ಏಳಿಗೆ ಬಗ್ಗೆ ಇವರು ಕೆಲಸ ಮಾಡದಿದ್ದರೆ ಇನ್ನು ಯಾರು ಮಾಡಬೇಕು ? ಪಂಚಾಯಿತಿಗಳು, ಮುನಿಸಿಪಾಲಿಟಿಗಳು ಮತ್ತು ತಾಲ್ಲೂಕ್ ಬೋರ್ಡುಗಳು ತಮಗೆ ಬರುವ ವರಮಾನದಲ್ಲಿ ೧೮ ಪರ್ಸೆಂಟ್ ಹಣವನ್ನು ಈ ಜನರ ಸಲುವಾಗಿ ಖರ್ಚು ಮಾಡಬೇಕೆಂದು ತಾವು ಸೂಚನೆ ಕೊಟ್ಟಿದ್ದರೂ ಸಹ ಅದನ್ನು ಯಾರೂ ಜಾರಿಗೆ ತರುತ್ತಿಲ್ಲ. ನನಗೆ ತಿಳಿದಂತೆ ಯಾವ ಪಂಚಾಯಿತಿಯವರೂ ಸಹ ೧೮ ಪರ್ಸೆಂಟ್ ಹಣ ಖರ್ಚು ಮಾಡುತ್ತಿಲ್ಲ. ಇಂತಹ ಪಂಚಾಯಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ನಾನೇ ಒಂದು ಸಲ ಪಂಚಾಯಿತಿಯವರನ್ನು ಕೇಳಿದಾಗ, ಅವರು ನಮಗೇ ದುಡ್ಡು ಇಲ್ಲ, ಇವರಿಗೆ ಎಲ್ಲಿಂದ ದುಡ್ಡು ತರುವುದು ಎಂದು ನನಗೆ ಹೇಳಿದರು. ಅಂದರೆ ಇವರನ್ನು ಹೇಳುವವರು ಕೇಳುವವರು ಯಾರೂ ಇಲ್ಲವೇ ? ಪ್ರತಿ ಪಂಚಾಯಿತಿ ಮಟ್ಟದಲ್ಲಿಯೂ ೧೮ ಪರ್ಸೆಂಟ್ ಹಣವನ್ನು ಖರ್ಚು ಮಾಡದಿದ್ದರೆ ಈ

ಜನರ ಗತಿ ಏನಾಗಬೇಕು ? ತಾಲ್ಲೂಕ್ ಮಟ್ಟದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕಾಣುತ್ತದೆ. ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳ ವಿವರ ನನ್ನ ಹತ್ತಿರ ಇದೆ. ಇದರ ಪ್ರಕಾರ ಬೆಳಗಾಂ ಜಿಲ್ಲೆಯ ಗ್ರಾಮ ಪಂಚಾಯಿತಿಗಳು ೧೮ ಪರ್ಸೆಂಟ್ ಹಣವನ್ನು ಅಂದರೆ ಒಟ್ಟು ೩೨,೨೪,೩೯ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಆದರೆ ೪ ಲಕ್ಷ ಚಿಲ್ಲರೆ ಹಣ ಮಾತ್ರ ಖರ್ಚು ಮಾಡಿ ಇನ್ನೂ ೨೭ ಲಕ್ಷ ಚಿಲ್ಲರೆ ಹಣವನ್ನು ಉಳಿಸಿದ್ದಾರೆ. ಅದೇ ರೀತಿ ಟೌನ್–ಮುನಿಸಿಪಾಲಿಟಿಗಳು ೨೩ ಲಕ್ಷ ಚಿಲ್ಲರೆ ಹಣವನ್ನು ಖರ್ಚು ಮಾಡಬೇಕಾಗಿತ್ತು. ಆದರೆ ಖರ್ಚು ಮಾಡಿರುವುದು ೩ ಲಕ್ಷ ಚಿಲ್ಲರೆ ಮಾತ್ರ. ಇನ್ನೂ ೧೯ ಲಕ್ಷ ಚಿಲರೆ ಹಣವನ್ನು ಉಳಿಸಿದ್ದಾರೆ. ಕೆಲವು ಗ್ರಾಮ ಪಂಚಾಯಿತಿಗಳು ಚರಂಡಿ ಮತ್ತು ರಸ್ತೆಗೆ ಖರ್ಚು ಮಾಡಿದ ಹಣವನ್ನು ಸಹ ಈ ೧೮ ಪರ್ಸೆಂಟ್ ಹಣಕ್ಕೆ ಖರ್ಚು ಹಾಕುತ್ತಾರೆ. ಆದರೆ ಹೇಳುವವರು ಕೇಳುವವರು ಯಾರೂ ಇಲ್ಲವೇ ? ತಾವು ಇಷ್ಟು ಹಣ ಖರ್ಚು ಮಾಡಲಾಗಿದೆ ಎಂದು ಅಂಕಿ ಅಂಶಗಳನ್ನು ನಮಗೆ ಕೊಡುತ್ತೀರಿ. ಆದರೆ ಈ ಸಮಾಜದ ಏಳಿಗೆಗಾಗಿ ಆ ಹಣ ಖರ್ಚಾಗಿರುವುದಿಲ್ಲ. ಈ ೧೮ ಪರ್ಸೆಂಟ್ ಹಣ ಸರಿಯಾಗಿ ಖರ್ಚಾಗುತ್ತಿದೆಯೋ ಅಥವಾ ಇಲ್ಲವೇ ಎಂಬುದನ್ನು ನೋಡುವವರು ಯಾರು ? ತಾಲ್ಲೂಕ್ ಮಟ್ಟದಲ್ಲಿ ತಾವು ಇದನ್ನು ನೋಡಿಕೊಳ್ಳಲು ಇನ್ಸ್‌ಪೆಕ್ಟರ್ ಒಬ್ಬರನ್ನು ನೇಮಕ ಮಾಡಿದ್ದೀರಿ. ಆದರೆ ಅವರು ಬಿ.ಡಿ.ಒ. ಹೇಳಿದ ಕೆಲಸ ಮಾಡುತ್ತಾರೆ. ಈ ಬಿ.ಡಿ.ಒ. ಅವರಿಗೂ ಈ ೧೮ ಪರ್ಸೆಂಟ್ ಹಣಕ್ಕೂ ಏನು ಸಂಬಂಧ ಇದೆ ? ಸಾಯುವವರು ಸಾಯುತ್ತಾರೆ, ಬದುಕುವವರು ಬದುಕುತ್ತಾರೆಂದುಕೊಂಡು ಇವರು ಕಣ್ಣು ಮುಚ್ಚಿಕೊಂಡು ಸುಮ್ಮನಿರುತ್ತಾರೆ. ಇಂತಹ ಅನ್ಯಾಯವನ್ನು ತಡೆಗಟ್ಟುವವರು ಯಾರು ? ಸದಲಗ ಮುನಿಸಿಪಾಲಿಟಿಯವರು ಇದುವರೆಗೆ ಒಂದು ಕಾಸನ್ನೂ ಖರ್ಚು ಮಾಡಿಲ್ಲ. ಹಿಂದೆ ನಾನು ಟೌನ್ ಪಂಚಾಯಿತಿ ಚೇರ್‌ಮನ್ ಆಗಿದ್ದಾಗ ಮಾಡಿದಂಥ ಕೆಲಸ ಬಿಟ್ಟರೆ. ಅನಂತರ ಅಲ್ಲಿನ ಹರಿಜನ ಕೇರಿಯಲ್ಲಿ ಯಾವ ಕೆಲಸವೂ ಆಗಿಲ್ಲ. ಇಂಥಾದ್ದನ್ನು ಚೆಕ್ ಮಾಡುವವರು ಯಾರು ? ಬಹಳ ಕೆಲಸಗಳಾಗಿವೆ ಎಂದು ತಾವು ಕಾಗದದ ಮೇಲೆ ಅಂಕಿ ಅಂಶಗಳನ್ನು ಕೊಟ್ಟು ನಮಗೆ ಸಮಾಧಾನ ಮಾಡಲು ನೋಡುತ್ತೀರಿ. ಆದರೆ ಇನ್ನು ಮುಂದೆ ಈ ರೀತಿ ಹೇಳುವುದರಿಂದ ನಮಗೆ ಸಮಾಧಾನವಾಗುವುದಿಲ್ಲ. ನಮ್ಮ ಹಕ್ಕು ನಮಗೆ ಬೇಕು. ಆದ್ದರಿಂದ ತಾವು ಜಾಗ್ರತೆಯಿಂದ ಕೆಲಸ ಮಾಡಬೇಕಾಗುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ೧೮ ಪರ್ಸೆಂಟ್ ಹಣ ಸರಿಯಾಗಿ ಖರ್ಚಾಗುತ್ತಿದೆಯೋ ಅಥವಾ ಇಲ್ಲವೇ ಎಂಬುದನ್ನು ತಾವು ಸರಿಯಾಗಿ ಚೆಕ್ ಮಾಡಬೇಕು. ತಮ್ಮ ವರದಿಯಲ್ಲಿ ಎಜುಕೇಷನ್ ಸಲುವಾಗಿ, ಹೌಸಿಂಗ್ ಸಲುವಾಗಿ ಹೀಗೆ ನಾನಾ ಯೋಜನೆಗಳಿಗೆಂದು ಹಣ ಇಟ್ಟಿದ್ದೀರಿ. ಎಜುಕೇಷನ್ ಸಲುವಾಗಿ ತಾವು ಹಣ ಖರ್ಚು ಮಾಡುವುದನ್ನು ನಾನು ಒಪ್ಪುತ್ತೇನೆ. ಏಕೆಂದರೆ, ನಮ್ಮ ಜನರಿಗೆ ಎಲ್ಲಕ್ಕಿಂತ ಮುಖ್ಯವಾಗಿ ಎಜುಕೇಷನ್ ಬೇಕಾಗಿದೆ.

ನಾನು ಮುಖ್ಯವಾಗಿ ಹೇಳುತ್ತಾ ಇರುವುದೇನೆಂದರೆ ನಮ್ಮ ಕರ್ನಾಟಕದಲ್ಲೇ ಅಷ್ಟೇ ಇಡೀ ಹಿಂದೂಸ್ತಾನದಲ್ಲಿ ಸಾವಿರಾರು ಜಾತಿಗಳು ಇವೆ. ಯಾರು ಯಾವ ಜಾತಿ ಎನ್ನುವುದು ಗೊತ್ತಾಗುವುದಿಲ್ಲ. ಕೆಲವು ಮುಖಂಡರು ಇದ್ದಾರೆ, ಬಹಳ ಬುದ್ಧಿವಂತರು, ಬಹಳ ವಿದ್ಯಾವಂತರು ಅವರು ಏನು ಹೇಳುತ್ತಾರೆ ಎಂದರೆ. ಯೂನಿಟಿ ಇನ್ ಡೈವರ್ಸಿಟಿ ಎಂದು ಹೇಳುತ್ತಾರೆ ; ಭಿನ್ನತೆಯೋ ಐಕ್ಯತೆ ಎಂದು ಏನು ಹೇಳುತ್ತಾರೆ ಇದು ನಮ್ಮ ಭಾರತದ ಸಂಸ್ಕೃತಿಯಲ್ಲಿ ಮಾತ್ರ ಇರುವುದು. ನಮ್ಮ ಭಾರತದಲ್ಲಿ ಸಾವಿರಾರು ಜಾತಿಗಳು ಏನು ಇವೆ, ನಾನು ಮೇಲು ನೀನು ಕೀಳು ಎನ್ನುವುದು ಏನು ಇದೆ, ಇವನ್ನು ನೋಡಿದರೆ ನಮಗೆ ಬಹಳ ದುಃಖವಾಗುತ್ತದೆ. ಅಲ್ಲದೆ ಇದು ಪರದೇಶಕ್ಕೆ ಮೋಸಮಾಡಿದಂತಾಗುತ್ತದೆ. ಹಳೇ ಮೈಸೂರಿನಲ್ಲೂ ಸಹ ಸಾವಿರಾರು ಜಾತಿಗಳು ಇವೆ. ಹಿಂದಿನ ಮಹಾರಾಜರು ಹರಿಜನ ಗಿರಿಜನರಿಗೆ ಏನೇನು ಸವಲತ್ತುಗಳನ್ನು ಕೊಟ್ಟಿದ್ದರೋ ಅದನ್ನು ಮುಂದುವರೆಸಿಕೊಂಡು ಹೋಗುತ್ತಿರುವುದರಿಂದ ನಾನು ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಉತ್ತರ ಕರ್ನಾಟಕದಲ್ಲಿ ಅಂದರೆ ಮೊದಲಿನ ಮುಂಬೈ ಭಾಗ ಏನು ಇದೆಯೋ ಅದು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಆರ್ಥಿಕವಾಗಿ ಇನ್ನೂ ಹಿಂದುಳಿದಿದೆ. ಆ ಭಾಗಕ್ಕೆ ತಾವು ಹೆಚ್ಚು ಹೆಚ್ಚು ಖರ್ಚು ಮಾಡಿ ಮುಂದಕ್ಕೆ ತರಬೇಕು. ನೀವು ಏನಿದ್ದರೂ ವಿಮೆನ್ ವೆಲ್‌ಫೇರ್ ಸೆಂಟರ್ಸ್‌ನ್ನು, ಹಾಸ್ಟೆಲ್ಸ್‌ನ್ನು, ಬಾಲವಾಡಿಗಳನ್ನು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಹಳೇ ಮೈಸೂರಿಗೇ ಹೆಚ್ಚು ಹೆಚ್ಚು ಖರ್ಚು ಮಾಡುತ್ತಿದ್ದೀರಿ. ನಮ್ಮ ಕಡೆ ಉತ್ತರ ಭಾಗದಲ್ಲಿ ಏನೂ ಹಣ ಕೊಟ್ಟಿಲ್ಲಾ ; ನಮ್ಮ ಭಾಗಕ್ಕೆ ತಾವು ಹೆಚ್ಚು ಹಣ ಕೊಟ್ಟು ಹಿಂದುಳಿದ ಭಾಗವನ್ನು ಮುಂದೆ ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗಕ್ಕೆ ಶಿಕ್ಷಣಕ್ಕೆ

ಕೊಟ್ಟಿರುವ ಹಣ ಬಹಳ ಕಡಿಮೆ. ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಎಲ್ಲೆಲ್ಲಿ ಹೈಸ್ಕೂಲ್ಸ್ ಇದೆಯೋ ಅಲ್ಲಲ್ಲಿ ಹರಿಜನ–ಗಿರಿಜನರಿಗೆ ಒಂದು ಬೋರ್ಡಿಗ್ ಮಾಡಬೇಕು. ಪ್ರತಿ ಜಿಲ್ಲೆಯಲ್ಲಿ ಕಾಲೇಜು ಹುಡುಗರು ೨೦೦ ಜನ ಇದ್ದರೆ ಅಲ್ಲಿ ಒಂದು ಹಾಸ್ಟಲ್ ಮಾಡಬೇಕು ಮತ್ತು ಇದರ ಜೊತೆಗೆ ಪ್ರತಿ ಗ್ರಾಮಕ್ಕೂ ಒಂದೊಂದು ಬಾಲವಾಡಿಗಳನ್ನು ಮಾಡಬೇಕು ಎಂದು ಹೇಳುತ್ತೇನೆ. ಈಗ ಎಜುಕೇಷನ್ ಡಿಪಾರ್ಟ್‌ಮೆಂಟಿನವರು ೩೦೦ ಮನೆಗಳು ಇದ್ದ ಕಡೆಯಲ್ಲಿ ಒಂದೊಂದು ಶಾಲೆಯನ್ನು ತೆರೆಯುವ ಹಾಗೆ ಮತ್ತು ನಾನು ಮೇಲೆ ಹೇಳಿದನೆಲ್ಲಾ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ. ಈಗ ತಾವೇನೋ ಅಲ್ಲೊಂದು ಇಲ್ಲೊಂದು ಬಾಲವಾಡಿಗಳನ್ನು ಕೊಟ್ಟಿದ್ದೀರಿ. ಶಿಕ್ಷಣ ಕ್ಷೇತ್ರ ಮುಂದುವರೆಯಬೇಕಾದರೆ ಪ್ರತಿಯೊಂದು ಹಳ್ಳಿಗೂ ಒಂದೊಂದು ಬಾಲವಾಡಿಯನು ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಹರಿಜನ ಗಿರಿಜನರಲ್ಲಿ ಸಾವಿರಾರು ಜನರು ಈವೊತ್ತಿನ ದಿವಸ ಮೆಟ್ರಿಕ್ಯುಲೇಟ್ ಪಾಸ್ ಮಾಡಿಕೊಂಡಿವರು ಇದ್ದಾರೆ, ಗ್ರಾಜುಯೇಟ್ಸ್ ಆಗಿದ್ದಾರೆ. ಪೋಸ್ಟ್ ಗ್ರಾಜುಯೇಟ್ಸ್ ಆಗಿದ್ದಾರೆ. ಇವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ಸರ್ಕಾರಿ ಉದ್ಯಮಗಳಲ್ಲಿ ಸ್ವಲ್ಪ ಚೌಕಾಸಿ ಮಾಡುತ್ತಾರೆ. ಅವರು ಏನು ಹೇಳುತ್ತಾರೆ ಎಂದರೆ, ದಿ ಕ್ಯಾಂಡಿಡೇಟ್ಸ್ ಆರ್ ನಾಟ್ ಅವೈಲಬಲ್ ಎಂದು ಹೇಳುತ್ತಾರೆ. ಹೀಗೆ ಹೇಳಿ ಯಾರನ್ನೂ ತೆಗೆದುಕೊಂಡಿಲ್ಲಾ. ಈವೊತ್ತಿನ ದಿವಸ ಹರಿಜನ ಗಿರಿಜನರಲ್ಲಿ ಬೇಕಾದಷ್ಟು ಜನ ವಿದ್ಯಾವಂತರು ಇದ್ದರೂ ಕೂಡ ಕೆಲಸ ಸಿಕ್ಕಿಲ್ಲಾ. ಇದರ ಬಗ್ಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಲಿಸ್ಟನ್ನು ಇಟ್ಟುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹೇಳುತ್ತೇನೆ, ಇದರ ಬಗ್ಗೆ ತಮ್ಮಲ್ಲಿ ಒಂದು ರಿಪೋರ್ಟ್‌ನ್ನು ಇಡಬೇಕು. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಇದರ ಬಗ್ಗೆ ಯಾರ ಹೆಸರುಗಳು ದಾಖಲಾತಿಯಾಗಿವೆ ಅದರ ಒಂದು ಲಿಸ್ಟನ್ನು ತಾವು ತರಿಸಿಟ್ಟುಕೊಂಡು, ಯಾರಾದರೂ ಕೂಡ ಈ ರೀತಿಯಾಗಿ ಜನ ಸಿಕ್ಕುವುದಿಲ್ಲ ಅಂತ ಹೇಳಿದರೆ ತಾವು ಕರೆದು ಅಪಾಯಿಂಟ್ ಕೊಡುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು. ನಾನು ಈ ಹಿಂದೆ ೧೯೭೪ ರಲ್ಲಿ ಸಮಾಜ ಕಲ್ಯಾಣ ಮಂತ್ರಿಗಳಲ್ಲಿ ಈ ರಿಸರ್ವೇಷನ್ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದೇನೆಂದರೆ ಸರ್ಕಾರಿ ಕ್ಷೇತ್ರದಲ್ಲಿ ಮಾತ್ರ ಈ ಜನರಿಗೆ ಒಂದು ರಿಸರ್ವೇಷನ್ ಲಾಭ ಇದೆ, ಆದರೆ ಖಾಸಗಿ ಎಜುಕೇಷನ್ ಸಂಸ್ಥೆಗಳಿಗೆ ಅವರು ೧೦೦ ಕ್ಕೆ ೯೦ ಪರ್ಸೆಂಟ್ ಏನು ಗ್ರಾಂಟ್ ಪಡೆಯುತ್ತಾರೋ ಅಲ್ಲಿ ಅವರಿಗೆ ರಿಸರ್ವೇಷನ್ ಇಲ್ಲ. ಸರ್ಕಾರದವರು ಅವರನ್ನು ಏತಕ್ಕೆ ಕೇಳುವುದಿಲ್ಲ ಅನ್ನುವ ಪ್ರಶ್ನೆಯನ್ನು ೧೯೭೪ರಲ್ಲಿ ಆಗಿನ ಮಾನ್ಯ ಮಂತ್ರಿಗಳನ್ನು ಕೇಳಿದಾಗ ಅವರು ಏನು ಉತ್ತರ ಕೊಟ್ಟಿದ್ದಾರೆ ಎಂದರೆ, ಇದರ ಬಗ್ಗೆ ಇರತಕ್ಕಂಥಾ ಗ್ರಾಂಟ್ ಇನ್ ಕೋಡ್‌ನಲ್ಲಿ ಆ ಪ್ರಾವಿಷನ್ ಇಲ್ಲ ಎಂದು ; ಏತಕ್ಕೆ ಆ ಒಂದು ಪ್ರಾವಿಷನ್ ಮಾಡಬಾರದು, ಇದರಲ್ಲಿ ಏನು ತೊಂದರೆಯಾಗುತ್ತದೆ ? ಒಂದು ವೇಳೆ ಪ್ರಾವಿಷನ್ ಇಲ್ಲದೇ ಹೋದರೆ ಈಗಲಾದರೂ ಪ್ರಾವಿಷನ್ ಮಾಡಿ ; ಇಲ್ಲದೇ ಹೋದರೆ ಅದನ್ನೆಲ್ಲಾ ರಾಷ್ಟ್ರೀಕರಣ ಮಾಡಿ ನಿಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಿರಿ ? ಹಾಗೇಕೆ ಮಾಡಬಾರದು ? ಅವರಿಗೆ ಯಾವ ಹೈಸ್ಕೂಲ್ ಆಗಲಿ, ಯಾವ ಕಾಲೇಜ್ ಆಗಲಿ ರಿಸರ್ವೇಷನ್ ಕೊಡದೇ ಹೋದರೆ ಅವರಿಗೆ ಏನೂ ಕೊಡಬೇಡಿರಿ. ಒಂದು ಕಡೆ ನೀವು ಡೀಸೆಂಟ್ರಲೈಸ್ ಬಗ್ಗೆ ಮಾತನಾಡುತ್ತೀರಿ, ಅದನ್ನು ನಾನು ಒಪ್ಪುತ್ತೇನೆ. ರಾಷ್ಟ್ರೀಯ ವಿಕೇಂದ್ರೀಕರಣ ಆಗಬೇಕು ಎಂದು ಹೇಳುವುದರಲ್ಲಿ ನಾನೂ ಒಬ್ಬ. ಆದರೆ ಈ ಎಸ್.ಸಿ. ಮತ್ತು ಎಸ್.ಟಿ. ಸಮಾಜದವರ ಗತಿ ಏನು ? ಪ್ರೈವೇಟ್ ಪೀಪಲ್ ಈ ಜನಾಂಗಕ್ಕೆ ೧೮ ಪರ್ಸೆಂಟ್ ಏನು ಕೊಡಬೇಕು ಅದನ್ನು ಕೊಡದೇ ಹೋದರೆ ಅದನ್ನೆಲ್ಲಾ ರಾಷ್ಟ್ರೀಕರಣ ಮಾಡಿರಿ. ಇದು ಏತಕ್ಕೆ ಆಗುವುದಿಲ್ಲ ? ನಮ್ಮ ದೇಶ ನೋಡಿದರೆ ಒಂದು ವಿಚಿತ್ರದೇಶ. ನಮ್ಮ ದೇಶದಲ್ಲಿ ಸಂಪ್ರದಾಯವಾದಿಗಳು ಹೆಚ್ಚು ಇದ್ದಾರೆ. ಇಂತಹ ಕಾರ್ಯಗಳನ್ನು ಮಾಡುವಾಗ ಆ ಸಂಪ್ರದಾಯವಾದಿಗಳು ಬಂದು ಬಂದು ಜಗ್ಗಿಸಿ ಜಗ್ಗಿಸಿ ಇಂತಹ ಕಾರ್ಯವನ್ನು ಮಾಡುವುದಕ್ಕೆ ಬಿಡುವುದಿಲ್ಲ. ಹಾಗೆ ಹೇಳುವುದನ್ನು ನಾನು ಒಪ್ಪುತ್ತೇನೆ. ಅದಕ್ಕೋಸ್ಕರವೇ ನಾನು ಹೇಳುವುದು ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಅಂತ. ಈ ಸಮಾಜದವರಿಗೆ ಅವರು ಅಪಾಯಿಂಟ್‌ಮೆಂಟ್‌ನಲ್ಲಿ ಎಷ್ಟು ಪರ್ಸೆಂಟೇಜ್ ಕೊಡಬೇಕು ಅಷ್ಟನ್ನು ಏತಕ್ಕೆ ಕೊಟ್ಟಿಲ್ಲ ಅನ್ನುವುದನ್ನು ವಿಚಾರ ಮಾಡಿದ್ದೀರಾ ? ಯೂನಿವರ್ಸಿಟಿಯವರನ್ನು ಭೇಟಿ ಮಾಡಿದಾಗ ಈ ಎಸ್.ಸಿ. ಮತ್ತು ಎಸ್.ಟಿ. ಯವರಿಗೆ ಎಷ್ಟು ಜನರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ ಅನ್ನುವುದರ ಬಗ್ಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಮೈಸೂರು ಯೂನಿವರ್ಸಿಟಿಯ ಒಂದು ಉದಾಹರಣೆಯನ್ನು ತಮ್ಮ ಮುಂದೆ

ಹೇಳಬಯಸುತ್ತೇನೆ. ಮೈಸೂರು ಯೂನಿವರ್ಸಿಟಿಯಲ್ಲಿ ಒಬ್ಬ ಪ್ರೊಫೆಸರ್ ಇದ್ದಾರೆ. ೧೯೬೭ರ ವರೆಗೆ ಅವರು ಕೊಟ್ಟಿರುವುದನ್ನು ನಾನು ಹೇಳುತ್ತೇನೆ. ೮೪ ರೀಡರ್ಸ್ ಬಗ್ಗೆ ಪರ್ಸೆಂಟೇಜ್ ತೆಗೆದುಕೊಂಡರೆ ೪.೪೫ ಪರ್ಸೆಂಟ್ ಆಗುತ್ತದೆ. ಲೆಕ್ಚರರ್ಸ್ ೪ ಜನರನ್ನು ತೆಗೆದುಕೊಂಡರೆ ಅದರಲ್ಲಿ ಪರ್ಸೆಂಟೇಜ್ ೧.೪ ಪರ್ಸೆಂಟ್ ಆಗುತ್ತದೆ. ಟ್ಯೂಟರ್ಸ್ ೬೭ರಲ್ಲಿ ಅವರ ಪರ್ಸೆಂಟೇಜ್ ೧.೨೭ ಪರ್ಸೆಂಟ್ ಆಗುತ್ತದೆ. ಟೆಕ್ನಿಕಲ್‌ನಲ್ಲಿ ತೆಗೆದುಕೊಂಡರೆ ೪೪೬ ಜನರಲ್ಲಿ ೧೩ ಎಸ್.ಸಿ. ಅದರಲ್ಲಿ ಪರ್ಸೆಂಟೇಜ್ ೧.೩೩ ಎಸ್.ಟಿ. ೨೬. ಇದರ ಪರ್ಸೆಂಟೇಜ್ ೧.೦೬ ಪರ್ಸೆಂಟ್ ಆಗುತ್ತದೆ. ಇನ್ನು ಮಿನಿಸ್ಟೀರಿಯಲ್ ಲೆವೆಲ್‌ನಲ್ಲಿ ತೆಗೆದುಕೊಂಡರೆ ೯೨೫ಕ್ಕೆ ಎಸ್.ಸಿ ೨೬ ಎಸ್.ಟಿ. ೮ ಅದರಲ್ಲಿ ಪರ್ಸೆಂಟೇಜ್ ೫.೬ ಪರ್ಸೆಂಟ್ ಮತ್ತು ೧.೮ ಪರ್ಸೆಂಟ್. ಇನ್ನು ಮೀನಿಯಲ್ ತೆಗೆದುಕೊಂಡರೆ ೪೫೭ರಲ್ಲಿ ಪರ್ಸೆಂಟೇಜ್ ೮.೯ ಪರ್ಸೆಂಟ್ ಆಗುತ್ತದೆ ಅದರಲ್ಲೂ ಕೂಡ ೧೮ ಪರ್ಸೆಂಟ್ ಇಲ್ಲ. ನನ್ನಲ್ಲಿ ಕರ್ನಾಟಕ ಯೂನಿವರ್ಸಿಟಿ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಬಗ್ಗೆಯೂ ಕೆಲವು ಉದಾಹರಣೆಗಳು ಇವೆ. ಅಲ್ಲೆಲ್ಲಾ ತಾವೇಕೆ ಸರಿಯಾಗಿ ಇಂಪ್ಲಿಮೆಂಟ್ ಮಾಡುವುದಿಲ್ಲ ಎಂದು ಕೇಳುತ್ತೇನೆ ? ಇದಕ್ಕೆ ಜವಾಬ್ದಾರರು ಯಾರು ? ನಾವು ಈವೊತ್ತಿನ ದಿವಸ ಈ ಯೂನಿವರ್ಸಿಟಿಗಳನ್ನು ಜ್ಞಾನ ಮಂದಿರ ಏನು ಕರೆಯುತ್ತೇವೆ ಆ ಜ್ಞಾನಮಂದಿರದಲ್ಲೇ ಹೊಲಸು, ರಾಡಿ ತುಂಬಿ ಆ ಹರಿಜನರನ್ನು ದೂರ ಇಟ್ಟಿದ್ದಾರಲ್ಲಾ, ಇದರ ಬಗ್ಗೆ ತಾವೇಕೆ ಒಂದು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳಬಾರದು ? ಅಂಥಾದ್ದಕ್ಕೆಲ್ಲಾ ತಾವು ಗ್ರಾಂಟ್ ಕೊಡಬಾರದು. ಕಾಲೇಜು ಆಗಲಿ ಹೈಸ್ಕೂಲ್ ಆಗಲಿ ಪ್ರೈವೇಟ್ ಇನ್ಸ್ಟಿಟ್ಯೂಷನ್ಸ್‌ನ್ನು ಹೆಚ್ಚು ಹೆಚ್ಚಾಗಿ ಖಾಸಗಿಯವರೇ ನಡೆಸುತ್ತಿದ್ದಾರೆ ; ಸರ್ಕಾರದ್ದು ಅಷ್ಟು ಹೆಚ್ಚಿಗೆ ಇಲ್ಲ. ಖಾಸಗೀ ರಂಗದಲ್ಲಿರುವ ಈ ಎಜುಕೇಷನ್ ಇನ್ಸ್ಟಿಟ್ಯೂಷನ್ಸ್‌ಗೆ ಶೇಕಡಾ ೯೦ ಪರ್ಸೆಂಟ್ ಗ್ರಾಂಟ್ ಕೊಡುತ್ತಾ ಇದ್ದರೂ ಕೂಡ ಈ ಎಸ್.ಸಿ. ಮತ್ತು ಎಸ್.ಟಿ. ಸಮಾಜಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಈ ಸಮಾಜಕ್ಕೆ ರಾಜ್ಯಾಂಗಬದ್ಧವಾಗಿ ಕೊಡತಕ್ಕಂಥಾದ್ದನ್ನು ಕೊಡದೇ ಹೋದರೆ ಆ ರೂಲ್ ಅನ್ನು ಅವರು ಸರಿಯಾಗಿ ಬಳಸದೇ ಹೋದರೆ ಇವರ ಗತಿ ಏನು ? ಗ್ರಾಂಟ್ ಇನ್ ಏಡ್–ಕೋಡ್‌ನಲ್ಲಿ ಇದರ ಬಗ್ಗೆ ಪ್ರಾವಿಷನ್ ಇಲ್ಲದೇ ಹೋದರೆ ಅದನ್ನು ಬದಲಾವಣೆ ಮಾಡುವುದಕ್ಕಾದರೂ ನಿಮಗೆ ಇರುವ ತೊಂದರೆ ಏನು ? ಇದಕ್ಕೆ ಇರತಕ್ಕಂಥಾ ರಚನಾತ್ಮಕವಾದ ಅಡಚಣೆ ಏನು ? ಅಥವಾ ಸರ್ಕಾರಕ್ಕೆ ಇಚ್ಛೆ ಇಲ್ಲವೋ ? ಅಥವಾ ನೀವೇ ಬಯಸುವುದಿಲ್ಲವೋ ? ದಯವಿಟ್ಟು ತಾವು ಇದನ್ನು ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿರುವ ರಿಸರ್ವೇಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಇರತಕ್ಕ ಜನ ಹೇಳಬೇಕಾದರೆ ಕ್ಲಾಸ್ ೧ ರಲ್ಲಿ ೧೪೦ ಜನರಲ್ಲಿ ಎಸ್.ಸಿ. ೧, ಎಸ್.ಟಿ. ೧ ಪರ್ಸೆಂಟೇಜ್ ತೆಗೆದುಕೊಂಡರೆ, ೫.೭ ಪರ್ಸೆಂಟ್ ಮತ್ತು ೦.೭ ಪರ್ಸೆಂಟ್ ಕ್ಲಾಸ್ ೨ ರಲ್ಲಿ ತೆಗೆದುಕೊಂಡರೆ, ೧೮೧ ಪೋಸ್ಟ್ಸ್‌ನಲ್ಲಿ ಎಸ್.ಸಿ. ೧೨, ಎಸ್.ಟಿ. ೨ ಪರ್ಸೆಂಟೇಜ್ ನೋಡಿದರೆ ಎಸ್.ಸಿ. ೬.೬. ಎಸ್.ಟಿ. ೧.೧ ಪರ್ಸೆಂಟ್, ಕ್ಲಾಸ್ ೩ ರಲ್ಲಿ ೨೫೭೭ ಜನಕ್ಕೆ ಎಸ್.ಸಿ. ೧೫೧೦ ಜನ. ಎಸ್.ಟಿ. ೩೦೫ ಜನ, ಪರ್ಸೆಂಟೇಜ್ ತೆಗೆದುಕೊಂಡರೆ ೫.೮ ಮತ್ತು ೧.೧ ಪರ್ಸೆಂಟ್, ಕ್ಲಾಸ್ ೪ರಲ್ಲಿ ತೆಗೆದುಕೊಂಡರೆ ಒಟ್ಟು ಜನರಲ್ಲಿ ಎಸ್.ಸಿ. ೮೧೨, ಎಸ್.ಟಿ. ೧೨೧ ಪರ್ಸೆಂಟೇಜ್ ತೆಗೆದುಕೊಂಡರೆ ೧೪.೩ ಎಸ್.ಸಿ, ಎಸ್.ಟಿ. ೨.೧ ಪರ್ಸೆಂಟ್ ಇದೆ.

ಈ ರೀತಿಯಾಗಿ ತಮ್ಮ ಸರ್ಕಾರಿ ಕ್ಷೇತ್ರದಲ್ಲಿಯೂ ಇದೆ. ಖಾಸಗಿಯವರ ಕ್ಷೇತ್ರದಲ್ಲಿ ಮೀಸಲಾತಿಯ ಬಗ್ಗೆ ನನ್ನಲ್ಲಿ ರಿಕಾರ್ಡ್ ಇದೆ. ಆದರೆ ಈಗ ವೇಳೆಯಿಲ್ಲದಿರುವುದರಿಂದ ಅದನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ ಕೇವಲ ೫ ರಿಂದ ಆರು ಪರ್ಸೆಂಟ್‌ಕೂಡ ಯಾವ ಕ್ಷೇತ್ರದಲ್ಲಿ ನೋಡಿದರೂ ಕಾಣುತ್ತಿಲ್ಲ. ವಿದ್ಯಾ ಸಂಸ್ಥೆಗಳೊಳಗೆ ಇಲ್ಲ. ನಮ್ಮ ಸರ್ಕಾರಿ ಕಾಲೇಜುಗಳಲ್ಲಿಲ್ಲ, ಸರ್ಕಾರಿ ಹೈಸ್ಕೂಲುಗಳಲ್ಲಿ ಇಲ್ಲ, ಈರೀತಿಯಾಗಿ ರಿಸರ್ವೇಷನ್‌ನಲ್ಲಿ ಪೋಸ್ಟ್ಸ್ ಕಳೆದುಕೊಂಡವರು ಇನ್ನು ಬೇರೆ ಎಲ್ಲಿ ಸರ್ವೆ ಮಾಡಬೇಕು ? ಇದನ್ನು ತಾವು ತುಲನ ಮಾಡಿ ನೋಡಬೇಕು. ಬಾಕಿ ಸಮಾಜದವರಿಗೆ ಕಾರ್ಖಾನೆಗಳು ಇರುತ್ತವೆ. ಆದರೆ ಇವರನ್ನು ಬೇರೆಯವರು ಯಾರೂ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಸರ್ಕಾರದವರು ಖಾಸಗೀ ರಂಗದವರಿಗೂ ಸಹ ಮೀಸಲಾತಿಯನ್ನು ಕೊಡಬೇಕು ಎಂದು ಒತ್ತಾಯಮಾಡಬೇಕು ಎಂದು ನಾನು ಹೇಳುತ್ತೇನೆ. ಸರ್ಕಾರಿ ಕ್ಷೇತ್ರದಲ್ಲಿ ನೀವು ೧೮ ಪರ್ಸೆಂಟ್ ಕೊಡದಿದ್ದರೆ ಬಾಕಿ ಜನರೆಲ್ಲರೂ ಎಲ್ಲಿಗೆ ಹೋಗಬೇಕು ? ಉಳಿದ ಜನರಿಗೆ ಇರುವಂಥ ಸವಲತ್ತು ನಮಗೆ ಇಲ್ಲ. ಇದರ ಬಗ್ಗೆ ತಾವೇನಾದರೂ ಯೋಚನೆ ಮಾಡಬೇಕು. ಕೇಂದ್ರ ಸರ್ಕಾರದವರು ಈ ಬ್ಯಾಕಲಾಗ್‌ನ್ನು

ತುಂಬವ ಸಲುವಾಗಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಪರ್ಸೆಂಟೇಜನ್ನು ಹೆಚ್ಚು ಮಾಡಿದ್ದಾರೆ. ಬಿಹಾರದಲ್ಲಿ ೨೪ ಪರ್ಸೆಂಟು ಮೀಸಲಾತಿ ಇದ್ದು ಈಗ ಅವರು ೪೦–೫೦ ಪರ್ಸೆಂಟ್ ಮಾಡಿದ್ದಾರೆ. ಈರೀತಿಯಾಗಿ ಬ್ಯಾಕ್‌ಲಾಗ್ ಪ್ರತಿಯೊಂದು ಕಡೆಯಲ್ಲಿಯೂ ಬೇಕಾದಷ್ಟು ಇವೆ. ಇದನ್ನು ತುಂಬಬೇಕಾದರೆ ಈ ೧೮ ಪರ್ಸೆಂಟ್ ಏನು ಇದೆ, ಇದನ್ನು ಇನ್ನೂ ಹೆಚ್ಚು ಮಾಡಬೇಕು, ಇದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ಈ ವಿಷಮತೆ ಹಾಗೆಯೇ ಉಳಿಯುತದೆ. ವಿಷಮತೆಯೊಳಗೆ ಸಮಾನತೆ ಎಂದು ನಾವು ಹೇಳುತ್ತಿದ್ದೇವೆ, ಆದರೆ ವಿಷಮತೆಯು ಕಹಿ ಹಾಗೆಯೆ ಉಳಿದರೆ ಮುಂದಿನ ಗತಿ ಏನು ? ದಯಮಾಡಿ ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕು. ನಮಗೆ ಇದರ ಬಗ್ಗೆ ಅಧಿಕಾರ ಇಲ್ಲ, ಇದನ್ನು ಮಾಡಲಿಕ್ಕೆ ಬರುವುದಿಲ್ಲ ಎನ್ನುವ ಸ್ಥಿತಿಯನ್ನು ಹೇಳುತ್ತಿದ್ದರೆ ದೇಶದ ಪರಿಸ್ಥಿತಿ ಏನಾದೀತು ? ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ನಾನು ಹಿಂದೆ ಒಂದು ಸೂಚನೆಯನ್ನು ಮಾಡಿದ್ದೆನು. ಈ ಸಮಾಜ ಕಲ್ಯಾಣ ಇಲಾಖೆ ಏನುಇದೆ ಇದನ್ನು ರೀಆರ್ಗನೈಸ್ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯ ಕೆಲಸಕಾರ್ಯಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಕೈ ಕೆಳಗೆ ನಡೆಯುತ್ತವೆ, ತಾಲ್ಲೂಕು ಮಟ್ಟದಲ್ಲಿ ಬಿ. ಡಿ. ಒ ಕೈಕೆಳಗೆ ನಡೆಯುತ್ತವೆ, ಆದರೆ ಈ ಇಲಾಖೆಯ ಅಧಿಕಾರಿಗಳಿಗೆ ಸ್ವತಂತ್ರವಾದ ಅಧಿಕಾರವೇಇಲ್ಲವಾಗಿದೆ. ಯಾವ ತರಹದ ಯೋಜನೆಗಳೂ ಇವರ ಕೈಯೊಳಗೆ ಇರುವುದಿಲ್ಲ, ಇವರನ್ನು ಹೇಳುವವರು ಕೇಳುವವರೂ ಯಾರೂಇಲ್ಲ. ಇದನ್ನು ಸರ್ಕಾರದವರು ನಿರ್ಮೂಲ ಮಾಡಿ ಎಲ್ಲೆಲ್ಲಿ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಬೇಕು ಎಂದು ನೋಡಿ ಅಂಥ ಕಡೆ ಕೈಗೊಳ್ಳಲು ಸರಿಯಾದ ಅಧಿಕಾರವನ್ನು ಈ ಇಲಾಖೆಯ ಅಧಿಕಾರಿಗಳಿಗೆ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ತಾವು ಮಂತ್ರಿಯಾಗಿದ್ದೀರಿ, ತಾವು ಎಲ್ಲಾ ಖಾತೆಯೊಳಗೆ ಈ ಪರಿಸ್ಥಿತಿಯ ಬಗ್ಗೆ ಚೆಕ್ ಮಾಡುವಂಥ ಅಧಿಕಾರವನ್ನು ಹೊಂದಬೇಕು, ಇದೇ ರೀತಿಯಲ್ಲಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಏನೇನು ಅನಾಹುತಗಳಾಗುತ್ತಿವೆ, ಹತ್ಯಾಚಾರಗಳಾಗುತ್ತಿವೆ, ಅನಾಚಾರಗಳು ಆಗುತ್ತಿವೆ, ಎಲ್ಲೆಲ್ಲಿ ಪರ್ಸೆಂಟೇಜ್ ಕೊಡುವುದಿಲ್ಲ ಅಲ್ಲಿ ಒತ್ತಾಯ ಮಾಡುವ ಂಥ ಅಧಿಕಾರವನ್ನು ತಾವು ಇಟ್ಟುಕೊಳ್ಳಬೇಕು. ಈಗ ಏನಾಗಿದೆ ಎಂದರೆ, ಎಲ್ಲಾ ಅಧಿಕಾರಗಳೂ ಸಹ ಜಿಲ್ಲಾಧಿಕಾರಿಗಳ ಕೈಯಲ್ಲಿರುವುದರಿಂದ, ತಮಗೆ ಗೊತ್ತಿರುವ ಹಾಗೆ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಕೆಲಸಕಾರ್ಯಗಳಿದ್ದು ಅವರು ಹರಿಜನ ಗಿರಿಜನರ ಕೆಲಸ ಕಾರ್ಯಗಳಲ್ಲಿ ಕೆಲಸಮಾಡುವುದು, ಮನಸ್ಸುಮಾಡುವುದು ಸಾಧ್ಯವಿಲ್ಲವಾಗಿದೆ. ಆದ್ದರಿಂದ ಈ ಇಲಾಖೆಯನ್ನು ರೀಆರ್ಗನೈಸ್ ಮಾಡಬೇಕು ಎಂದು ನಾನು ಕಳೆದ ೭–೮ ವರ್ಷಗಳಿಂದ ಕೇಳುತ್ತಿದ್ದೇನೆ. ಈ ಇಲಾಖೆಯಿಂದ ನಿರೀಕ್ಷಿಸಿದಷ್ಟು ಉಪಯೋಗ ಸಿಕ್ಕುತ್ತಿಲ್ಲ, ಆದ್ದರಿಂದ ಇದನ್ನು ರೀಆರ್ಗನೈಸ್ ಮಾಡಿ ಕೆಲವೊಂದು ಪವರ್ಸ್‌ನ್ನು ಇವರಿಗೆ ಕೊಟ್ಟರೆ, ತಮ್ಮ ತಮ್ಮ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡುವಂಥಾದ್ದಕ್ಕೂ, ಮತ್ತು ಹೆಚ್ಚಿನ ಕೆಲಸಗಳನ್ನು ಮಾಡುವುದಕ್ಕೂ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ. ಸರ್ಕಾರದವರು ಇದಕ್ಕೆ ಏನೂ ಕಿವಿಗೊಟ್ಟಂತೆ ಕಾಣಲಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ ಎಲ್ಲಿಯವರೆಗೆ ಇದು ಹೀಗೆ ನಡೆಯುತ್ತದೆಯೋ ಅಲ್ಲಿಯವರೆಗೆ ಈ ಜನರ ಕಲ್ಯಾಣ ಆಗುವುದಿಲ್ಲ, ಆಗುವುದರಲ್ಲಿ ನನಗೆ ವಿಶ್ವಾಸವೂ ಇಲ್ಲ.

ಮತ್ತೊಂದು ಸಂಗತಿ, ನಮ್ಮ ಸಮಾಜದ ಮೇಲೆ ಒಂದು ಆರೋಪ ಇದೆ, ಅದು ಕೆಲವು ಮಟ್ಟಿಗೆ ಸತ್ಯ ಇದೆ. ಹರಿಜನರ ಪ್ರಮುಖರು ಸರ್ಕಾರದ ಎಲ್ಲಾ ಸವಲತ್ತುಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವ ಆರೋಪ ಇದೆ. ಇದು ಆಗದಂತೆ ತಾವು ನೋಡಿಕೊಳ್ಳಬೇಕು. ಈಗ ಹಳ್ಳಿಗಳಲ್ಲಿ ಯಾರಿಗೆ ಈ ಸಹಾಯ ದೊರಕಬೇಕೋ, ಅಂದರೆ ಲೋಯಸ್ಟ್ ಮ್ಯಾನ್, ಅಲ್ಲಿಯವರಿಗೂ ಸಹಾ ಸರ್ಕಾರದ ಸಹಾಯ ತಲುಪಬೇಕು. ಆದರೆ ನನಗೆ ತಿಳಿದಮಟ್ಟಿಗೆ ಇದು ಆಗುತ್ತಿಲ್ಲ, ಯಾರೋ ಬಂದು ಯಾವ ಮುಖಂಡನಾದರೂ ಬಂದು ಸವಲತ್ತನ್ನು ಕ್ಯಾಪ್ಚರ್ ಮಾಡಿಕೊಂಡು ಹೋಗುವುದು ನಿಲ್ಲಬೇಕು, ಇದಕ್ಕೆ ನಾನೊಂದು ಉದಾಹರಣೆಯನ್ನು ಹೇಳಬೇಕಾಗಿದೆ, ಸರ್ಕಾರದವರು ಸ್ಪೆಷಲ್ ಕಾಂಪೆನೆಂಟ್ ಸ್ಕೀಂ ಎಂದು ಮಾಡಿದ್ದಾರೆ. ಇದರೊಳಗೆ ಇರಿಗೇಷನ್ ಸಲುವಾಗಿ ಹಣವನ್ನು ತೆಗೆದಿಟ್ಟಿದ್ದಾರೆ. ಇದು ಸಮಾಜಕ್ಕೆ ಉಪಯೋಗವಾಗುವಂಥ ಸ್ಕೀಂ. ಇದರಲ್ಲಿ ೧೦–೨೦ ಹರಿಜನರು ಸೇರಿಕೊಂಡು ಒಂದು ಬಾವಿಯನ್ನು ತೋಡಬೇಕು, ಅದರ ಮುಖಾಂತರ ತಮ್ಮ ಜಮೀನುಗಳನ್ನು ನೀರಾವರಿ ಮಾಡಿಕೊಂಡು ಹೋಗಬೇಕು ಎನ್ನುವುದು ಇದರ ಉದ್ದೇಶ. ಹಳೆಯಮೈಸೂರು ಭಾಗದಲ್ಲಿ ಇದು ಯಾವ ರೀತಿಯಲ್ಲಿ ಇದೆಯೋ ನನಗೆ ಗೊತ್ತಿಲ್ಲ. ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಎಕರೆಗಿಂತ ಹೆಚ್ಚಿನ

ಭೂಮಿಯನ್ನು ಯಾವ ಹರಿಜನರೂ ಹೊಂದಿಲ್ಲ. ಅಧ್ಯಕ್ಷರೆ, ಒಂದು ಎಕರೆ, ಹತ್ತು ಕುಂಟೆ ಈ ರೀತಿಯ ಬಡವರೇ ಹೆಚ್ಚು. ಇಲ್ಲಿ ಈ ಸ್ಕೀಂನಲ್ಲಿ ಏನು ಮಾಡಿದ್ದಾರೆಂದರೆ, ಇದನ್ನು ಸಮಾಜಕ್ಕೆ ಕೊಡದೆ, ಇಂಡಿವಿಜುಯಲ್ಸ್‌ಗೆ ಕೊಟ್ಟಿದ್ದಾರೆ, ೧೦-೨೦ ಎಕರೆ ಇರುವಂಥ ಹರಿಜನರೊಬ್ಬರಿಗೆ ಇಂಥ ಸ್ಕೀಂನ್ನು ಕೊಟ್ಟಿದ್ದಾರೆ. ನಾನು ಕೇಳುತ್ತೇನೆ. ತಾವು ಈ ಸ್ಕೀಂನ್ನು ತಂದಂಥ ಉದ್ದೇಶವಾದರೂ ಏನು ? ಇದು ಸಮಾಜಕ್ಕೆ ಉಪಯೋಗವಾಗಬೇಕೋ ಅಥವಾ ಹರಿಜನ ಭೂಮಾಲೀಕರೊಬ್ಬರಿಗೆ ಉಪಯೋಗವಾಗಬೇಕೋ ? ಬೆಳಗಾಂನಲ್ಲಿ ಸುಮಾರು ೫೩ ಯೋಜನೆಗಳನ್ನು ತಗೆದುಕೊಂಡಿದ್ದಾರೆ, ಅಲ್ಲಿ ಎಲ್ಲಾ ಖಾಸಗಿಯವರಿಗೆ ಕೊಟ್ಟಿದ್ದಾರೆ. ಸಮಾಜಕ್ಕೆ ಯಾವ ಯೋಜನೆಗಳನ್ನು ಕೊಟ್ಟಿಲ್ಲ. ಇಂಡಿವಿಜುಯಲ್ ಇರಿಗೇಷನ್ ಸ್ಕೀಮನ್ನು ಧಾರವಾಡದಲ್ಲಿ ಕೊಟ್ಟಿದ್ದಾರೆ, ಎಲ್ಲಾ ಕಡೆಯಲ್ಲಿಯೂ ಈ ರೀತಿಯಾಗಿದೆ. ಇದರ ಉದ್ದೇಶ ಏನು ಹರಿಜನರ ಮುಖಂಡರನ್ನು ರಾಜಕೀಯವಾಗಿ ಕ್ಯಾಪ್ಚರ್ ಮಾಡಬೇಕು ಎನ್ನುವ ಉದ್ದೇಶವೆ ? ಬಡವರು ಹಾಗೆ ಬಡವರಾಗಿಯೇ ಉಳಿಯಬೇಕೇ ಏನು ನಿಮ್ಮ ಉದ್ದೇಶ. ? ನಾನು ಒಂದು ಸಾರಿ ಧಾರವಾಡ ಜಿಲ್ಲಾಧಿಕಾರಿಗಳನ್ನು ಭೇಟಿಯಾದಾಗ ಒಂದು ಮಾತನ್ನು ಕೇಳಿದೆ, ಸ್ಪೆಷಲ್ ಕಾಂಪೆನೆಂಟ್ ಸ್ಕೀಂ ಬಡವರಿಗೆ ಕೊಡಬೇಕೋ ಅಥವಾ ಭೂಮಾಲೀಕರಿಗೆ ಕೊಡಬೇಕೋ ಎಂದು. ಅವರು ಹೇಳಿದರು ಇದು ನಮ್ಮ ಪ್ಲಾನ್ ಅಲ್ಲ, ನಿಮ್ಮ ಸರ್ಕಾರದ ಪ್ಲಾನ್ ಎಂದು. ನಾನು ತಮ್ಮನ್ನು ಕೇಳುತ್ತೇನೆ. ಈ ಸ್ಕೀಂನ್ನು ಯಾವ ಜನರ ಸಲುವಾಗಿ ತೆಗೆದಿದ್ದೀರಿ ? ಹರಿಜನ ಸಮಾಜದ ಬಡವರಿಗೆ ಉಪಯೋಗವಾಗಲೆಂದೇ ಅಥವಾ ಸಮಾಜದೊಳಗಿನ ಪ್ರಮುಖ ಭೂಮಾಲೀಕರಿಗೆ ಉಪಯೋಗವಾಗಲೆಂದು ನೀವು ಮಾಡಿದ್ದೀರಾ ? ಒಂದು ಸಾರಿ ಡಿ. ಸಿ. ಯವರು ಇದರಲ್ಲಿ ನಮ್ಮದೇನೂ ಇಲ್ಲ, ಸರ್ಕಾರದವರು ಇಷ್ಟು ಅಂತ ಹೇಳಿ ಹಣ ಕೊಟ್ಟು, ಈ ರೀತಿ ಖರ್ಚು ಮಾಡಿರಿ ಎಂದು ಹೇಳಿದರೆ ಅದನ್ನು ನಾವು ಮಾಡುತ್ತೇವೆ ಎಂದು ಹೇಳಿದರು. ತಮ್ಮ ಆರ್ಡರ್ ಪ್ರಕಾರ ಅದು ಆ ರೀತಿ ಇದೆಯೋ ಅಥವಾ ಇಲ್ಲವೊ. ಅಥವಾ ಎಲ್ಲಿ ತಪ್ಪಾಗಿದೆಯೋ ಗೊತ್ತಿಲ್ಲ. ಉತ್ತರ ಕೊಡುವಾಗ ತಾವು ಇದನ್ನು ದಯವಿಟ್ಟು ತಿಳಿಸಬೇಕು ಎಂದು ಹೇಳುತ್ತೇನೆ. ಮತ್ತೊಂದು ವಿಚಾರ ಏನಿದೆ ಎಂದರೆ, ನಾನು ಈಗ ತಾನೇ ತಮಗೆ ಹೇಳಿದಪ್ರಕಾರ ಯಾವ ಪಂಚಾಯತಿಯಾಗಲೀ, ಯಾವ ತಾಲ್ಲೂಕು ಅಭಿವೃದ್ಧಿ ಮಂಡಲಿಯಾಗಲೀ, ಯಾವ ಮುನಿಸಿಪಾಲಿಟಿಯಾಗಲೀ ಆ ಹರಿಜನಗಿರಿಜನರಿಗಾಗಿ ೧೮ ಪರ್ಸೆಂಟ್ ನಷ್ಟು ಪೂರಾ ಹಣವನ್ನು ಖರ್ಚು ಮಾಡುತ್ತಾ ಇಲ್ಲ. ನಾವು ನೋಡಿದ ಪ್ರಕಾರ ಬೆಳಗಾಂ ಮತ್ತು ಧಾರವಾಡ ಮುನಿಸಿಪಾಲಿಟಿಗಳಲ್ಲಿ ತಾವು ಕೊಟ್ಟಿರತಕ್ಕಂಥ ಹಣ ಹಾಗೇಯೇ ಉಳಿದಿದೆ. ಅದರಲ್ಲಿ ಸ್ವಲ್ಪವೂ ಖರ್ಚಾಗಿಲ್ಲ. ಬೆಳಗಾಂನಲ್ಲಿ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಹಾಸ್ಟಲ್‌ಗಳಿಗೆ ಕೊಟ್ಟಿರತಕ್ಕಂಥ ಹಣ ಸ್ವಲ್ಪ ಖರ್ಚಾಗಿದೆ. ಇದು ಸಮಾಧಾನಕರವಾದ ವಿಷಯ. ಆದರೆ ಉಳಿದ ಕಡೆಗಳಲ್ಲಿ ಹಾಗೆ ಆಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಎಲ್ಲೂ ಪೂರಾ ಹಣ ಖರ್ಚು ಮಾಡುತ್ತಾ ಇಲ್ಲ. ಒಂದು ಉದಾಹರಣೆ ಹೇಳಬೇಕೆಂದರೆ ನಮ್ಮ ಕಡೆ ೧೦-೨೦ ಜನ ಕಾಲೇಜು ಹುಡುಗರಿಗೆ ಸ್ಕಾಲರ್‌ಷಿಪ್ ಸಿಕ್ಕಿರಲಿಲ್ಲ. ನಾನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಹೋಗಿ 'ಸ್ಕಾಲರ್‌ಷಿಪ್ ಈ ಹುಡುಗರಿಗೆ ಏತಕ್ಕೆ ಸಿಕ್ಕಿಲ್ಲ' ಎಂದು ಕೇಳಿದೆ. ಅವರು ನನ್ನ ಹತ್ತಿರ ಸರಿಯಾಗಿ ವರ್ತನೆ ಮಾಡಲಿಲ್ಲ ಮತ್ತು ಸರಿಯಾದ ಉತ್ತರವನ್ನು ಹೇಳಲಿಲ್ಲ. ಏನೇನೋ ಸಬೂಬು ಹೇಳಿದರು. ಆ ಮೇಲೆ ನಾನು ಯಾರ್ಯಾರಿಗೆ ಕೊಟ್ಟಿದ್ದೀರಿ ಆ ಬಗ್ಗೆ ಲಿಸ್ಟ್ ಕೊಡಿರಿ ಎಂದು ಕೇಳಿದೆ. ಅದನ್ನು ಅವರು ಕೊಡಲಿಲ್ಲ. ನಾನು ಆ ಹುಡುಗರೆಲ್ಲರಿಗೂ ಸ್ಕಾಲರ್‌ಷಿಪ್ ಕೊಡುವುದಕ್ಕೆ ವ್ಯವಸ್ಥೆ ಮಾಡಿರಿ ಎಂದು ಹೇಳಿ ಬಂದೆ. ಅದರಲ್ಲಿ ೪-೫ ಹುಡುಗರಿಗೆ ಸ್ಕಾಲರ್‌ಷಿಪ್ ಸಿಕ್ಕಿತು. ಇನ್ನು ಕೆಲವು ಹುಡುಗರಿಗೆ ಸಿಕ್ಕಲಿಲ್ಲವೆಂದು ಗೊತ್ತಾಯಿತು. ನಾನು ಮತ್ತೆ ಸೋಷಿಯಲ್ ವೆಲ್‌ಫೇರ್ ಆಫೀಸ್‌ಗೆ ಹೋಗಿ ವಿಚಾರಿಸಿದೆ. ಆ ೪-೫ ಹುಡುಗರಿಗೂ ಸ್ಕಾಲರ್‌ಷಿಪ್ ಹಣ ಹೋಗಿಲ್ಲ. ಅವರನ್ನು ಕೇಳಿದ್ದಕ್ಕೆ ,ಅವರ ಅಪ್ಲಿಕೇಷನ್‌ನಲ್ಲಿ ಕೆಲವು ಇನ್‌ಫರ್‌ಮೇಷನ್ಸ್ ತಪ್ಪು ಇದ್ದವು, ಅದರ ಸಲುವಾಗಿ ಅವರಿಗೆ ಗ್ರಾಂಡ್ ಮಾಡಲಿಲ್ಲ. ಎಂದು ಹೇಳಿದರು, ಅಪ್ಲಿಕೇಷನ್‌ನಲ್ಲಿ ಇನ್‌ಫರ್‌ಮೇಷನ್ ತಪ್ಪು ಇದ್ದರೆ ಮತ್ತೊಂದು ಅಪ್ಲಿಕೇಷನ್ ಕಳಿಸಿ ಅದನ್ನು ಸರಿಪಡಿಸಿಕೊಳ್ಳಬಹುದಾಗಿತ್ತು, ಆ ಬಡ ಹುಡುಗರಿಗೆ ಸ್ಕಾಲರ್‌ಷಿಪ್ ಕೊಡದಿದ್ದರೆ ಅವರ ವಿದ್ಯಾಭ್ಯಾಸದ ಗತಿ ಏನು ಎಂದು ಕೇಳಿದೆ. 'ನಮಗೆ ಆ ಬಗ್ಗೆ ಮೇಲಿನವರಿಂದ ಇನ್‌ಫರ್‌ಮೇಷನ್ ಇಲ್ಲ' ಎಂದು ಸಂಬಂಧಪಟ್ಟವರು ಹೇಳಿದರು. ನಾನು ಮಾನ್ಯ ಮಂತ್ರಿಯವರಿಗೆ ಸೂಚನೆ ಮಾಡುತ್ತಿದ್ದೇನೆ, ಈ ರೀತಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ನಡೆಯುತ್ತಾ ಇದ್ದರೆ ಆ ಹರಿಜನಗಿರಿಜನರ ಮಕ್ಕಳ ಪುರೋಭಿವೃದ್ಧಿ ಆಗುವುದಿಲ್ಲ. ಸಮಾಜದ ಕಲ್ಯಾಣವೂ ಆಗುವುದಿಲ್ಲ, ಆ ಹುಡುಗರಿಗೆ ಏತಕ್ಕೆ ಸ್ಕಾಲರ್‌ಷಿಪ್ ಸಿಕ್ಕಲಿಲ್ಲ ಎನ್ನುವ ಬಗ್ಗೆ ಎನ್‌ಕ್ವೈರಿ ಮಾಡಬೇಕು ಎಂದು

ಹೇಳುತ್ತೇನೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ಸ್ಕಾಲರ್‌ಷಿಪ್ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ನಾನು ಹೇಳಿದ್ದನ್ನು ದಕ್ಷ್ಯದಲ್ಲಿಟುಕೊಂಡು ಮಾಡಬೇಕು ಎಂದು ಹೇಳುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಶಿಶುವಿಹಾರಗಳನ್ನು ತೆರೆಯಬೇಕು. ಅಲ್ಲಿ ಶಿಶುವಿಹಾರಗಳು ಇಲ್ಲದಿದ್ದರ ಅಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ, ಅದಕ್ಕೆ ವ್ಯವಸ್ಥೆ ಮಾಡಬೇಕು. ಆ ಮೇಲೆ ಪ್ರತಿಯೊಂದು ಜಿಲ್ಲೆಗೂ ವಿದ್ಯಾಭ್ಯಾಸ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ೨೦೦ ಪೋಸ್ಟ್‌ಮೆಟ್ರಿಕ್ ಹಾಸ್ಟಲ್‌ಗಳನ್ನು ಸ್ಥಾಪನೆ ಮಾಡಬೇಕು. ತಾವು ಇಲ್ಲಿ ವರದಿಯಲ್ಲಿ ಬೆಳಗಾಂನಲ್ಲಿ ೭೭ ಪೋಸ್ಟ್‌ಮೆಟ್ರಿಕ್ ಹಾಸ್ಟಲ್‌ಗಳನ್ನು ಷುರು ಮಾಡಿದ್ದೇವೆಂದು ಹೇಳಿದ್ದೀರಿ. ಅದನ್ನು ಎಲ್ಲೆಲ್ಲಿ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಆ ಮೇಲೆ ೨೪ ಡಿಪ್ರೆಸ್ ಕ್ಲಾಸ್ ಹಾಸ್ಟಲ್ ಇದೆ ಎಂದು ಹೇಳಿದ್ದೀರಿ. ಅದು ಎಲ್ಲೆಲ್ಲಿದೆ ಎಂಬುದನ್ನು ಹೇಳಬೇಕು. ಇವೆಲ್ಲಾ ಖಾಸಗೀ ಹಾಸ್ಟಲ್‌ಗಳೇ ಅಥವಾ ಸರ್ಕಾರಿ ಹಾಸ್ಟಲ್‌ಗಳೇ ಎಂಬುದನ್ನು ತಿಳಿಸಬೇಕು. ಹಿಂದೆ ನಮ್ಮ ಎಸ್.ಸಿ. ಮತ್ತು ಎಸ್. ಟಿ. ಕಮಿಟಿಯವರು ಈ ಎಸ್.ಸಿ. ಮತ್ತು ಎಸ್.ಟಿ ಹಾಸ್ಟಲ್‌ಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ, ಖಾಸಗೀ ಜನರು ನಡೆಸುವಂತಹ ಎಸ್. ಸಿ. ಮತ್ತು ಎಸ್.ಟಿ. ಹಾಸ್ಟಲ್‌ಗಳು ಸರಿಯಾಗಿ ನಡೆಯುತ್ತಿಲ್ಲ, ಹುಡುಗರಿಗೆ ತಿನ್ನುವುದಕ್ಕೆ ಸರಿಯಾಗಿ ತಿಂಡಿತಿನಿಸುಗಳಿಲ್ಲ, ಎಲ್ಲವನ್ನೂ ಈ ಹಾಸ್ಟಲ್‌ಗಳನ್ನು ನಡೆಸುವಂತಹ ಜನರು ತಿನ್ನುತ್ತಿದ್ದಾರೆ. ಎನ್ನುವ ಒಂದು ವರದಿಯನ್ನು ಕೊಟ್ಟಿದ್ದಾರೆ. ನಾನು ನೋಡಿದ ಪ್ರಕಾರ ಅಂತಹ ಒಂದು ಪರಿಸ್ಥಿತಿ ಇದ್ದೇ ಇದೆ. ಖಾಸಗೀ ಜನರು ಆ ಹಾಸ್ಟಲ್‌ಗಳನ್ನು ಸರಿಯಾಗಿ ನಡೆಸುತ್ತಾ ಇಲ್ಲ. ಸರ್ಕಾರಿ ಹಾಸ್ಟಲ್‌ಗಳಲ್ಲಿ ವ್ಯಾಸಂಗ ಮಾಡತಕ್ಕಂಥ ಒಬ್ಬ ಹುಡುಗನಿಗೆ ೭೫ ರೂಪಾಯಿಗಳನ್ನು ಕೊಡುತ್ತೀರಿ, ಅದೇ ರೀತಿಯಲ್ಲಿ ಖಾಸಗೀ ಜನರು ನಡೆಸತಕ್ಕಂಥ ಹಾಸ್ಟಲ್‌ಗಳ ಹುಡುಗರಿಗೂ ೭೫ ರೂಗಳಂತೆ ಹಣವನ್ನು ಕೊಡುತ್ತೀರಿ. ಅವರಿಗೆ ಏತಕ್ಕೆ ಕೊಡುತ್ತೀರಿ ಎಂದು ಕೇಳುತ್ತೇನೆ, ೪ ವರ್ಷಗಳ ಹಿಂದೆಯೇ ಈ ಎಸ್.ಸಿ. ಮತ್ತು ಎಸ್. ಟಿ ಕಮಿಟಿಯವರು 'ಈ ಖಾಸಗೀ ಜನರು ಈ ಹಾಸ್ಟಲ್‌ಗಳನ್ನು ನಡೆಸತಕ್ಕಂಥವರು ಸರಿಯಾಗಿ ನಡೆಸುತ್ತಾ ಇಲ್ಲ, ಆದ್ದರಿಂದ ಆ ಎಸ್. ಸಿ. ಮತ್ತು ಎಸ್. ಟಿ. ಹಾಸ್ಟಲ್‌ಗಳನ್ನೆಲ್ಲಾ ಸರ್ಕಾರದವರೇ ತೆಗೆದುಕೊಂಡು ನಡೆಸಬೇಕು ಎಂದು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅದರಂತೆ ನಾನು ಕೂಡ ಹೇಳುವುದೇನೆಂದರೆ, ಈ ಖಾಸಗೀ ಜನರು ನಡೆಸತಕ್ಕಂಥ ಈ ಎಸ್. ಸಿ. ಮತ್ತು ಎಸ್.ಟಿ. ಹಾಸ್ಟಲ್‌ಗಳು ಏನಿವೆ ಅವೆಲ್ಲವನ್ನೂ ಸರ್ಕಾರಿ ಹಾಸ್ಟಲ್‌ಗಳನ್ನಾಗಿ ಮಾಡಬೇಕು ಮತ್ತು ಅದೆಲ್ಲವನ್ನೂ ಸರ್ಕಾರದವರೇ ತೆಗೆದುಕೊಂಡು ಅವೆಲ್ಲಾ ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಮಾನ್ಯ ಮಂತ್ರಿಯವರು ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಈ ಅಸ್ಪೃಶ್ಯತೆ ವಿಚಾರಣೆಯ ಬಗ್ಗೆ ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಮ್ಮ ಸಮಾಜದಲ್ಲಿ ಎಲ್ಲಿಯವರೆಗೆ ಈ ಅಸ್ಪೃಶ್ಯತೆಯ ಆಚರಣೆಯು ನಡೆಯುತ್ತದೆಯೋ ಅಲ್ಲಿಯವರೆಗೆ ಅಸ್ಪೃಶ್ಯರು ಅವರ ಮೇಲೆ ಅತ್ಯಾಚಾರ, ಅನ್ಯಾಯಗಳನ್ನು ಮಾಡುತ್ತಾ ಇರುತ್ತಾರೆ. ನಾವು ಎಲ್ಲಿಯವರೆಗೆ ಅದನ್ನು ಹೋಗಲಾಡಿಸುವುದಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಅದು ನಡೆಯುತ್ತಾ ಇರುತ್ತದೆ. ಅಸ್ಪೃಶ್ಯತೆಯ ಆಚರಣೆ ನಡೆಯದಂತೆ ಸರ್ಕಾರದವರು ನೋಡಿಕೊಳ್ಳಬೇಕು ಮತ್ತು ಅಸ್ಪೃಶ್ಯರ ಮೇಲೆ ಏನೋ ಅತ್ಯಾಚಾರ ಅನಾಚಾರಗಳು ನಡೆಯುತ್ತಿವೆ ಅದನ್ನು ಹೇಗೆ ಬಂದ್ ಮಾಡಬೇಕೋ ಆ ರೀತಿಯಲ್ಲಿ ಬಂದ್ ಮಾಡಬೇಕು. ಈ ವರದಿಯಲ್ಲಿ ಇನ್ನೊಂದು ವಿಚಾರವನ್ನು ಹೇಳಿದ್ದಾರೆ. ಈ ಹರಿಜನ ಗಿರಿಜನರಿಗೆ ಫ್ರೀ ಲೀಗಲ್ ಏಡ್ ಕೊಡುವುದಕ್ಕಾಗಿ ಒಂದು ಗೌರ್ನಮೆಂಟ್ ಸೆಲ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಮ್ಮ ಬೆಳಗಾಂ ಜಿಲೆಯಲ್ಲಿ ಆ ಜನರ ಮೇಲೆ ಅನೇಕ ಅನ್ಯಾಯಗಳು ನಡೆದಿವೆ. ವಕೀಲರು ಆ ಜನರಿಂದ 'ಸಾಮಾನ್ಯವಾಗಿ ಏನು ಫೀತೆಗೆದುಕೊಳ್ಳಬೇಕೋ ಅದಕ್ಕಿಂತ ಹೆಚ್ಚು ಫೀ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಚೆಕಿಂಗ್ ಮಾಡವಂತಹ ವ್ಯವಸ್ಥೆಯನ್ನು ಏನಾದರೂ ಸರ್ಕಾರದವರು ಇಟ್ಟಿದ್ದಾರೆಯೇ ಎಂದು ಹೇಳುತ್ತೇನೆ. ? ಈ ಬಗ್ಗೆ ನನಗೆ ತಿಳಿದ ಮಟ್ಟಿಗೆ ಯಾವುದೇ ಒಂದು ಚೆಕಿಂಗ ಇಲ್ಲ, ಈ ಬಗ್ಗೆ ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಸಮಾಜಕಲ್ಯಾಣ ಇಲಾಖೆಯವರು ಬರೀ ಆಫೀಸಿನಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಾರೆ ಅಷ್ಟೆ. ಇಂತಹ ವಿಚಾರಗಳನ್ನು ಅವರು ಖುದ್ದಾಗಿ ಪರಿಶೀಲನೆ ಮಾಡುವುದಿಲ್ಲ. ಈ ಬಗ್ಗೆ ಮಂತ್ರಿಗಳಾಗಲೀ, ಅಧಿಕಾರಿಗಳಾಗಲೀ ಆಫೀಸಿನಲ್ಲಿ ಕುಳಿತುಕೊಂಡು ಕೆಲಸಮಾಡಿದರೆ ಆದ್ದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಮಂತ್ರಿಯವರು ಈ ವಿಚಾರದಲ್ಲಿ ಆ ಜನರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಆ ಅಧಿಕಾರಿಗಳಿಗೆ ಸೂಕ್ತರೀತಿ ಯಲ್ಲಿ ಡೈರೆಕ್ಷನ್ ಕೊಡಬೇಕು ಎಂದು ಹೇಳಬಯಸು

ತ್ತೇನೆ. ನಾನು ಇದುವರೆವಿಗೂ ಏನೇನು ಸಲಹೆ ಗಳನ್ನು ಕೊಟ್ಟಿದ್ದೇನೋ, ಆ ಸಲಹೆಗಳನ್ನೆಲ್ಲಾ ಮಾನ್ಯ ಮಂತ್ರಿಗಳು ಅರ್ಥಮಾಡಿಕೊಂಡು ಕೆಲಸ ಮಾಡುವಂತಹ ಖಾತರಿಯನ್ನು ವಹಿಸಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಚೌಡಯ್ಯ (ಭದ್ರಸಾಗರ). – ಸನ್ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಹಾಗೂ ಹೆಣ್ಣು ಮಕ್ಕಳ ಮತ್ತು ಮಕ್ಕಳ ಖಾತೆಗೆ ಸಂಬಂಧಪಟ್ಟಂತಹ ಬೇಡಿಕೆಗಳನ್ನು ಈ ಸದನದ ಮುಂದೆ ಮಾನ್ಯ ಮಂತ್ರಿಗಳು ಏನು ಮಂಡಿಸಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ತಾನೆ ಮಾತನಾಡಿದಂತಹ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಹೆಗಡೆ ಯವರು ಜಾತಿಗಳ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿ ಈ ಸದನದ ಗಮನವನ್ನು ಸೆಳೆದಿದ್ದಾರೆ, ಆದರೆ ನಾನಾದರೂ ಕೂಡ ಈ ಜಾತಿಗಳ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದಕ್ಕೆ ಕಾರಣ ಏನೆಂದರೆ, ನಮ್ಮ ಸಮಾಜದಲ್ಲಿ ಸೈದ್ಧಾಂತಿಕ ದೃಷ್ಟಿಯಿಂದ ಜಾತಿ ಯಾವುದೂ ಇಲ್ಲ. ಜಾತಿ ಗಳನ್ನು ಸಾಮಾನ್ಯವಾಗಿ ಯಾವ ಧರ್ಮದವರು ಸಹ ಒಪ್ಪಿಕೊಂಡಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮನುಷ್ಯರಲ್ಲಿ ನಾನಾ ವಿಧವಾದಂತಹ ಗುಂಪುಗಳು, ನಾನಾ ವಿಧ ವಾದಂತಹ ಪಂಗಡಗಳು, ನಾನಾ ವಿಧವಾದಂತಹ ಬುಡಕಟ್ಟುಗಳು ಉಂಟಾದ್ದರಿಂದ ಅವರವರ ಕಸಬು ಗಳಿಗೆ ಅನುಸಾರವಾಗಿ ಜಾತಿಗಳನ್ನು ಮಾಡಿಕೊಂಡಿದ್ದಾರೆ ಮಾನವನಲ್ಲಿ ಇರತಕ್ಕಂತಹ ಜಾತಿ ಕೇವಲ ಒಂದೇ ಒಂದು. ಅದು ಯಾವುದೆಂದರೆ ಮಾನವ ಜಾತಿ. ಮಾನವೀಯತೆಯಿಂದ ಕೂಡಿದ ಧರ್ಮವು ಸಹ ಆಗಿದೆ. ಈ ಮಾನವ ಧರ್ಮ ಅವರವರ ಧರ್ಮಗಳ ಆಧಾರದ ಮೇಲೆ ಇಸ್ಲಾಂ, ಕ್ರೈಸ್ತ ಮುಂತಾದ ಧರ್ಮಗಳು ಹುಟ್ಟಿಕೊಂಡಿವೆ. ಆದ್ದರಿಂದ ಎಲ್ಲಾ ಧರ್ಮಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆ. ಮೇಲ್ ವರ್ಗ ಎಂದು ಕರೆಯಲ್ಪಡುವವರು ಹಿಂದುಳಿದ ವರ್ಗಗಳನ್ನು ಹರಿಜನ ಮತ್ತು ಗಿರಿಜರನ್ನು ಹಾಗೂ ಹೆಣ್ಣು ಮಕ್ಕಳನ್ನು ಶೋಷಣೆ ಮಾಡುತ್ತಿದ್ದಾರೆ. ಈ ಹಿಂದುಳಿದ ಜನರ ಹಾಗೂ ಹರಿಜನ ಮತ್ತು ಗಿರಿಜನರ ಶೋಷಣೆಯನ್ನು ತಪ್ಪಿಸಲು ಸರ್ಕಾರದವರು ಹಿಂದಿನಿಂದಲೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆದರೂ ಸಹ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ, ಅದು ಏನೆಂದರೆ ಯಾವ ಒಬ್ಬ ವ್ಯಕ್ತಿಯೇ ಆಗಲಿ ಆತನು ಸಮಾಜದಲ್ಲಿ ಉನ್ನತ ಮಟ್ಟದಲ್ಲಿ ಬಾಳಬೇಕಾದರೆ ಆತನಿಗೆ ಶಿಕ್ಷಣ ಎಂಬುದು ಬಹಳ ಅವಶ್ಯಕವಾಗಿ ಬೇಕಾಗಿದೆ. ಈ ಶಿಕ್ಷಣವನ್ನು ಅವನಿಗೆ ಕೊಟ್ಟರೆ ಖಂಡಿತವಾಗಿ ಆತನು ಸಮಾಜದಲ್ಲಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯ ವಾಗುತ್ತದೆ. ಮತ್ತು ಆತನು ಶೋಷಣೆಗೆ ಒಳಗಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ, ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಹರಿಜನ ಮತ್ತು ಗಿರಿಜನರ ಹಾಗೂ ಹಿಂದುಳಿದ ವರ್ಗಗಳ ಶೋಷಣೆಯನ್ನು ತಪ್ಪಿಸಬೇಕಾದರೆ ಶಿಕ್ಷಣ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕು. ನಮ್ಮ ಸರ್ಕಾರದವರು ಮೆಚ್ಚತಕ್ಕಂತಹ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ಅವುಗಳನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರದವರು ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳನ್ನು ಸುಮಾರು ೬೬೮ರ ವರೆಗೆ ತೆರೆದಿದ್ದಾರೆ. ಇದರಲ್ಲಿ ನಾನ್‌ಪ್ಲಾನ್ ಸೆಂಟರ್ಸ್ ೧೧೩ ಮತ್ತು ಇತರೆ ಸೆಂಟರ್ಸ್ ೫೫೫ ಒಟ್ಟು ೬೬೮ ಸೆಂಟರ್ಸ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಈ ೬೬೮ ಕೇಂದ್ರಗಳಿಗೆ ಸರ್ಕಾರದವರು ಏನು ಸಹಾಯ ಧನವನ್ನು ಕೊಡುತ್ತಿದ್ದಾರೆ ಅದರಲ್ಲಿ ಒಂದು ಮಗುವಿಗೆ ಕೇವಲ ೮ ಅಣೆ ಸಹ ಬರುವುದಿಲ್ಲ. ಇದರಲ್ಲಿ ಆ ಮಕ್ಕಳ ಊಟ, ತಿಂಡಿ, ಉಪಹಾರ ಎಣ್ಣೆ, ಬಟ್ಟೆ ಒಗೆಯುವುದಕ್ಕೆ ಸೋಪು ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗು ತ್ತದೆಯೇ ? ಇದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು, ಆದ್ದರಿಂದ ನಾನು ಹೇಳುವು ದೇನೆಂದರೆ, ಈ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂದಿರಗಳಿಗೆ ಹೆಚ್ಚು ಧನ ಸಹಾಯವನ್ನು ಮಾಡ ಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ಹರಿಜನ ಮತ್ತು ಗಿರಿಜನರ ಮನೆ ಗಳಲ್ಲಿ ಕೂಲಿ ಮಾಡುವಂತಹ ಹೆಣ್ಣು ಮಕ್ಕಳು ತಮ್ಮ ತಮ್ಮ ಕೆಲಸಗಳಿಗೆ ಹೋದಾಗ ತಮ್ಮ ಮಕ್ಕಳು ಬೀದಿಯಲ್ಲಿ ರಕ್ಷಣೆ ಪೋಷಣೆ ಇಲ್ಲದೆ ಬಿದ್ದಿರುತ್ತವೆ, ಅಂತಹ ಮಕ್ಕಳ ರಕ್ಷಣೆ ಮಾಡುವುದಕ್ಕೋಸ್ಕರ ಈ ಒಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂದಿರಗಳು ಇರುವುದು. ನಾನೂ ಸಹ ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸುಮಾರು ೫೫ಗಳ ಕಾಲ ಕೆಲಸ ಮಾಡಿ ಅನುಭವವನ್ನು ಪಡೆದುಕೊಂಡು ಈ

ಮಾತನ್ನು ಹೇಳುತ್ತಿದ್ದೇನೆ. ಸುಮಾರು ೨೫ ವರ್ಷಗಳಿಂದಲೂ ಈ ಒಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂದಿರಗಳಿಗೆ ಈ ಹಳೇ ದರದ ಗ್ರ್ಯಾಂಟ್‌ನಲ್ಲಿ ಅವರಿಗೆ ಬೇಕಾದಂತಹ ತಿಂಡಿ ನಸು ಎಲ್ಲಾ ವ್ಯವಸ್ಥಿತ ಮಾಡಬೇಕಾಗಿದೆ. ಆದರೆ ಅದೇ ದರದ ಗ್ರ್ಯಾಂಟ್‌ನ್ನು ತಾವು ಈಗಲೂ ಕೊಟ್ಟರೆ ಅದು ಸಾಕಾಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಆದ್ದರಿಂದ ನಾನು ಹೇಳುವುದೇನೆಂದರೆ ಈ ಪ್ರೀಪ್ರೈಮರಿ (Priprimary) ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಶ್ರೇಷ್ಠ ರೀತಿಯಲ್ಲಿ ಹಾಕಿಕೊಂಡು ಅಭಿವೃದ್ಧಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೪೦ ಸಾವಿರ ಪ್ರೈಮರಿ ಸ್ಕೂಲ್‌ಗಳು ಇವೆ. ಇದರಲ್ಲಿ ಸುಮಾರು ೩೦ ಸಾವಿರ ಪ್ರೈಮರಿ ಸ್ಕೂಲ್‌ಗಳು ಹಳ್ಳಿಗಾಡು ಪ್ರದೇಶಗಳಲ್ಲಿ ಇವೆ, ಈ ಹಳ್ಳಿಗಾಡು ಪ್ರದೇಶಗಳಲ್ಲಿರುವಂತಹ ಹರಿಜನ ಮತ್ತು ಗಿರಿಜನರ ಬಗ್ಗೆ ವಿಚಾರ ಮಾಡುವುದಾದರೆ ಒಂದು ಹಳ್ಳಿಯಲ್ಲಿ ಸುಮಾರು ೪೦-೫೦ ಜನ ಹರಿಜನ ಮತ್ತು ಗಿರಿಜನರನ್ನು ಒಂದು ವರ್ಷದಲ್ಲಿ ತಯಾರು ಮಾಡಿ ಅವರಿಗೆ ಪ್ರೀಪ್ರೈಮರಿ ಶಿಕ್ಷಣವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ರೀತಿ ಮಾಡುವುದಾದರೆ ಆಗ ಸರ್ಕಾರದವರು ಹಾಕಿಕೊಂಡಂತಹ ಯೋಜನೆಗಳು ಕಾರ್ಯಸಾಧನೆ ಮಾಡಿದಂತೆ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಕ್ರೈಸ್ತರು ಮೊದಲು ಪ್ರೀಪ್ರೈಮರಿ ಸ್ಕೂಲ್‌ಗಳಿಂದ ಶಿಕ್ಷಣವನ್ನು ಪ್ರಾರಂಭ ಮಾಡಿ ಕಾಲೇಜುಗಳ ವರೆವಿಗೂ ನಡೆಸಿಕೊಂಡು ಹೋಗುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ, ಒಂದು ರೀತಿಯಲ್ಲಿ ಆಕರ್ಷಣೆಯನ್ನು ಉಂಟು ಮಾಡುತ್ತದೆ. ಮತ್ತು ಮಕ್ಕಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ನಿಪುಣತೆಯನ್ನು ಹೊಂದಿರುತ್ತಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಪ್ರೀಪ್ರೈಮರಿ ಸ್ಕೂಲ್‌ಗಳನ್ನು ಸ್ಥಾಪನೆ ಮಾಡಿದರೆ ಎಲ್ಲಾ ಮಕ್ಕಳಿಗೂ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆಗ ತಾವು ಹಾಕಿಕೊಂಡಿರುವಂತಹ ಯೋಜನೆಗಳನ್ನು ಸಾಧನೆ ಮಾಡಿದಂತೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ೬೦೦ ಜನ ಅಸಿಸ್ಟೆಂಟ್ ಇಂಜಿನೀಯರ್ ಹುದ್ದೆಗಳಿಗೆ ಅರ್ಜಿಗಳನ್ನು ಕರೆಯುತ್ತಾರೆಂದು ತಿಳಿದಿದ್ದೇನೆ. ಆದರೆ ನಮ್ಮ ರಾಜ್ಯದಲ್ಲಿ ಹರಿಜನ ಗಿರಿಜನ ಅಭ್ಯರ್ಥಿಗಳು ಇಷ್ಟೊಂದು ಜನ ಸುಮಾರು ೧೦೦ ಜನ ಬಿ. ಇ. ಆದವರು ಬೇಕಾಗಿದ್ದಾರೆ. ಈ ರೀತಿ ಅಭ್ಯರ್ಥಿಗಳ ಅಭಾವವನ್ನು ತಪ್ಪಿಸಲು ೧೮% ಹುದ್ದೆಗಳು ಟೆಕ್ನಿಕಲ್ ಲೈನ್‌ನಲ್ಲಿ ದೊರೆಯುವಂತೆ ಪೂರ್ವಭಾವಿ ವಿಶೇಷ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆ ರೂಪಿಸಬೇಕಾಗಿತ್ತು. ಅದೇ ರೀತಿಯಲ್ಲಿ ನಮ್ಮ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಅಗ್ರಿಕಲ್ಚರ್ ಸೈನ್ಸ್ ತೆಗೆದುಕೊಳ್ಳುವಂತಹ ಮತ್ತು ಪಶುವೈದ್ಯ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಬಯಸುವವರು ಯಾರು ಇರುತ್ತಾರೋ ಅಂತಹವರಿಗೆ ಈ ಸಮಾಜ ಕಲ್ಯಾಣ ಇಲಾಖೆಯಿಂದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಈ ಕಾಲೇಜುಗಳಿಗೆ ಯಾರನ್ನಾದರೂ ಕಳುಹಿಸಿಕೊಟ್ಟಿದ್ದಾರೆಯೋ ಎಂದು ಕೇಳಿದರೆ ಅದೂ ಇಲ್ಲ.

೪-೩೦ ಪಿ. ಎಂ.

ಈ ರೀತಿಯಾಗಿ ಅದರಲ್ಲಿ ಲ್ಯಾಪ್ಸ್ ಆಗುತ್ತದೆ. inadequate representation ಎಂದು ಕರೆಸಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ಸುಮಾರು ೩೦-೩೫ ವರ್ಷಗಳಿಂದ ಈ ಸಮಾಜ ಕಲ್ಯಾಣ ಇಲಾಖೆ ಬೇರೆ ಬೇರೆ ರೂಪದಲ್ಲಿ ಬೆಳೆಯುತ್ತಿದೆ. ಮೊದಲು ರೂರಲ್ ಡೆವಲಪ್‌ಮೆಂಟ್ ಅಂತ ಇತ್ತು. ಆಮೇಲೆ ಸಮಾಜ ಕಲ್ಯಾಣ ಇಲಾಖೆ ಅಂತ ಆಯಿತು. ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಮತ್ತು ಹೆಣ್ಣು ಮಕ್ಕಳ ಇಲಾಖೆಗೆ ಇಬ್ಬರು ಮಂತ್ರಿಗಳು ಇದ್ದಾರೆ. ಇಂತಹ ಒಂದು ಸನ್ನಿವೇಶದಲ್ಲಿ ಇಂತಹದೊಂದು ಕಾರ್ಯಕ್ರಮವನ್ನು ಹಾಕಿಕೊಂಡು ಹೋಗುವುದಕ್ಕೆ ಈ ಕ್ಷೇತ್ರದಲ್ಲಿ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರನ್ನು ಕೇಳಿಕೊಳುತ್ತೇನೆ. ಹಾಗೆಯೇ ಮಕ್ಕಳ ಮತ್ತು ಹೆಣ್ಣು ಮಕ್ಕಳ ಇಲಾಖೆಯ ಸಚಿವರನ್ನೂ ಕೂಡ ಕೇಳಿಕೊಳ್ಳುತ್ತೇನೆ. ಈಗೇನು ಅಂಗನವಾಡಿಗಳನ್ನು ಪ್ರಾರಂಭ ಮಾಡಿದ್ದಾರೆ, ಅವುಗಳನ್ನು ಎಲ್ಲಾ ಕಡೆಗಳಲ್ಲಿಯೂ ವ್ಯಾಪಕವಾಗಿ ತೆರೆಯುತ್ತಿಲ್ಲ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ ತಾಲ್ಲೂಕಿನಲ್ಲಿ ಮಾತ್ರ ಇದೆ. ಅದು ಬಿಟ್ಟರೆ ಬೇರೆ ಕಡೆಗಳಲ್ಲಿ ಪ್ರಾರಂಭ ಮಾಡಿಲ್ಲ. ಅಲ್ಲೇನು ಹರಿಜನರು ಗಿರಿಜನರು ಇಲ್ಲವೆ ಗ್ರಾಮಾಂತರ ಪ್ರದೇಶಗಳಲ್ಲಿ ಬಡ ಮಕ್ಕಳು, ಹಿಂದುಳಿದ ಮಕ್ಕಳು ಇಲ್ಲವೇ? ಅಲ್ಲಿ ಏಕೆ ಪ್ರಾರಂಭ ಮಾಡುತ್ತಿಲ್ಲ ? ತಾವು ದಯಮಾಡಿ ತಮ್ಮ ಉತ್ತರದಲ್ಲಿ ಪ್ರತಿಯೊಂದು ತಾಲೂಕಿನಲ್ಲಿ

ಇಡೀ ನಮ್ಮ ಕರ್ನಾಟಕದಲ್ಲಿ ಎಷ್ಟೆಷ್ಟು ಅಂಗನವಾಡಿಗಳನ್ನು ತಾವು ಅಧಿಕಾರಕ್ಕೆ ಬಂದ ಮೇಲೆ ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಮಹಿಳಾ ಕಲ್ಯಾಣ ಸಚಿವೆಯವರನ್ನು ನಾನು ಕೇಳಿ ಕೊಳ್ಳುತ್ತೇನೆ. ಇನ್ನು ಈ ರಿಸರ್ವೇಶನ್ ಬಗ್ಗೆ.

"In order to ensure implementation of several orders/circulars of Government, relating to reservation by the Unit Offices, there is an Employment Cell in the Directorate with one Assistant Director and two Inspecting Assistants"

ಎಂದು ಇದೆ. ಇದು ನಿಷ್ಪ್ರಯೋಜಕ ಐದು ವರ್ಷಗಳಿಂದ ಏನೂ ಕೆಲಸ ಮಾಡಿಲ್ಲ. ಸುಮ್ಮನೆ ಸಂಬಳ ಕೊಡುವುದಕ್ಕೋಸ್ಕರವಾಗಿ ಈ ಸೆಲ್‌ಗಳನ್ನು ಮಾಡಿದ್ದಾರೆ. ಎಂದು ಧೈರ್ಯವಾಗಿ ಹೇಳುತ್ತಿದ್ದೇನೆ, ಕೇವಲ ರಿವ್ಯೂ ಮಾಡಿ ಸರ್ಕಾರಕ್ಕೆ ವರದಿ ಒಪ್ಪಿಸುವುದರಿಂದ ಏನೂ ಆಗುವುದಿಲ್ಲ. ಈ ದಿಶೆಯಲ್ಲಿ ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟಿರುವ ಕಮೀಷನರ್ ಫಾರ್ ಎಸ್ ಸಿ ಅಂಡ್ ಎಸ್ ಟಿ ಅವರು ಒಂದು ಉತ್ತಮ ಸಲಹೆಯನ್ನು ಕೊಟ್ಟಿದ್ದಾರೆ. ರಾಜ್ಯ ಸರ್ಕಾರದವರು ಒಂದು ಲೆಜಿಸ್ಲೇಶನ್ ಮಾಡಿ ಅದನ್ನು ಪಾಸ್ ಮಾಡಿ ಆದರ ಮುಖಾಂತರ ಯಾವ ಯಾವ ಯೂನಿಟ್ ಆಫೀಸರುಗಳು ಇದ್ದಾರೆ, ಯಾವ ಯಾವ ಅಪಾಯಿಂಟಿಂಗ್ ಅಥಾರಿಟೀಸ್ ಇದ್ದಾರೆ ರಿಸರ್ವೇಶನ್ ಕೋಟಾ ಪ್ರಕಾರ ರಿಸರ್ವ್ ಮಾಡಿ ಕಾನೂನು ಬದ್ಧವಾಗಿ ಪರ್ಸೆಂಟೇಜ್ ಪ್ರಕಾರ ಏನೇನು ನೇಮಕಾತಿಗಳನ್ನು ಮಾಡಿದ್ದಾರೆ ಅದನ್ನು ಲೆಕ್ಕಕ್ಕೆ ತೆಗೆದುಕೊಂಡು inadequate representation ಆಗದಂತೆ ಜಾಹೀರಾತು ಮಾಡಿ ಒಂದು ಸಲ ಅಲ್ಲ, ಮೂರು ಕಾನ್‌ಸಿಕ್ಯುಯೆಂಟ್ ಇಯರ್ ಅಡ್ವರ್ಟೈಸ್ ಮಾಡಿ ರೋಸ್ಟರ್ ಬೇಸಿಸ್ ಮೇಲೆ ನೇಮಕ ಮಾಡಿಕೊಳ್ಳಬೇಕು. ಕ್ಯಾಂಡೀಡೇಟ್ಸ್ ಸಿಗದೇ ಹೋದಾಗ ಬೇರೆ ಮಾತು. ಇದೀಗ ಅವರನ್ನು ಅಪಾಯಿಂಟ್ ಮಾಡಿಕೊಳ್ಳದೇ ಹೋದರೆ.

There must be a legislation by this Government to penalise the Unit Officers who don't implement the policy so far laid down by the Government, relating to SCs/STs.

ಇದನ್ನು ಮಾಡದೇ ಹೋದರೆ ಖಂಡಿತವಾಗಿಯೂ ಕೂಡ ನಾವು ಸುಮ್ಮನೆ ಸರ್ಕ್ಯುಲರ್, ರೂಲ್ಸ್, ಸೆಲ್ ಅಂತ ಮಾಡಿದರೆ ಸುಮ್ಮನೆ ಈ ಜನರ ಕಣ್ಣು ಒರೆಸಿದಂತೆ ಆಗುತ್ತದೆ. ಫುಲ್ ಇಂಪ್ಲಿಮೆಂಟೇಶನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಕೂಡ ಒಬ್ಬ ಯೂನಿಟ್ ಆಫೀಸರ್ ಆಗಿ ಕೆಲಸ ಮಾಡಿದ್ದೇನೆ. ನಾನು ಒಂದೊಂದು ತಾಲೂಕಿಗೂ ಹೋಗಿ ಪರ್ಸನಲ್ ಆಗಿ ಕಾಂಟೆಕ್ಟ್ ಮಾಡಿ ಎಲ್ಲೆಲ್ಲಿ ಅಡ್ವರ್ಟೈಸ್ ಮಾಡಿದ್ದಾರೆ ಅಲ್ಲಿ ಕ್ಯಾಂಡಿಡೇಟ್‌ಗಳನ್ನು ಒದಗಿಸಿದ ಅನುಭವ ನನಗಿದೆ. ಇದರ ಬಗ್ಗೆ ಪುನಃ ಪ್ರಸ್ತಾವ ಮಾಡಬೇಕೆಂದಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರ ಖಾತೆ ಬಂದಾಗ ಈ ವಿಷಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಇನಿಶಿಯೇಟ್ ಮಾಡಲು ಸಾಧ್ಯತೆ ಇದೆ. ಹೈಪವರ್ ಕಮಿಟಿ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಷಯದಲ್ಲಿ ಬಹಳ ಕಳಕಳಿಯಿದೆಯೆಂದು ನನಗೆ ಮನವರಿಕೆಯಾಗಿದೆ. ಈ ಒಂದು ಲೆಜಿಸ್ಲೇಷನ್ ಪಾಸ್ ಮಾಡುವುದಕ್ಕೆ ತಾವು ನಿಗಾ ಕೊಡಬೇಕು ಮತ್ತು ಇನಿಷಿಯೇಟ್ ಮಾಡಬೇಕೆಂದು ಮಾನ್ಯ ಸಚಿವರನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಇನ್ನು ಆರ್ಥಿಕ ಅಭಿವೃದ್ಧಿ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಹಿಂದೆ ನೂರಾರು ಬಡ ಹರಿಜನರ ಕುಟುಂಬಗಳಿಗೆ ಒಂದೊಂದು ಕಡೆ ಆರುನೂರು, ಏಳುನೂರು ಸಾವಿರ ಎಕರೆ ವರೆಗೆ ಜಮೀನು ಹಂಚಿಕೆ ಮಾಡಿ ಅನೇಕ ಅಗ್ರಿಕಲ್ಚರಲ್ ಕಾಲೋನಿಗಳನ್ನು ಮಾಡಿದ್ದರು, ನಾನು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆನು. ಅನೇಕ ಸಾವಿರಾರು ಎಕರೆ ಜಮೀನನ್ನು ಅವರಿಗೆ ಕೊಟ್ಟಿದ್ದರು. ಎತ್ತು, ಗಾಡಿ ಮೊದಲಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರು ಇಷ್ಟು ಎಲ್ಲಾ ನಿರ್ನಾಮವಾಗಿ ಬಿಟ್ಟಿದೆ ಏಕೆಂದರೆ ನಮ್ಮ ಸಮಾಜದಲ್ಲಿ ಏನಾದರೂ ಒಂದು ಅಟ್ರಾಕ್ಟಿವ್ ಸ್ಕೀಮ್ ಬಂತೂ ಅಂದ್ರೆ ಅದರ ಉಪಯೋಗ ಹರಿಜನ ಗಿರಿಜನರಿಗೆ ಮೀಸಲಾಗಿದೆ ಅವರ ಹೆಚ್ಚು ಭಾಗವನ್ನು ಅನುಭವಿಸುವ ಪಾಲುದಾರರು ಬೇರೆಯವರು ಇರುತ್ತಾರೆ ಇಂಟರ್‌ಮೀಡಿಯೇಟರ್ಸ್ ಅಂತ ಏನು ಹೇಳುತ್ತೇವೆ. ಈ ಮಧ್ಯಸ್ಥಗಾರರು ಬಂದು ಬಿಟ್ಟು ಯಾವುದೋ ಒಂದು ರೀತಿಯಲ್ಲಿ ಸಾಲ

ಶೂಲ ಮಾಡಿ ಅದನ್ನು ಕಬಳಿಸಿ ಪರಭಾರೆಯಾಗತಕ್ಕಂಥ ಅನೇಕ ಸಮಸ್ಯೆಗಳು ಇವೆ. ಇಷ್ಟು ನೂರಾರು ಅಗ್ರಿಕಲ್ಚರಲ್ ಕಾಲೋನಿಗಳನ್ನು ಮಾಡಿದ್ದರೂ ಯಾವುದೂ ಸಮರ್ಪಕವಾಗಿ, ಫಲದಾಯಕವಾಗಿ ಇಲ್ಲದೇ ಇರುವಾಗ, ಜನರ ಜೀವನಕ್ಕೆ ಆಧಾರವಾದ ಈ ಕಾರ್ಯಕ್ರಮದ ಬಗ್ಗೆ ಅಮೂಲಾಗ್ರವಾಗಿ ತನಿಖೆ ಮಾಡಲು ಅದಕ್ಕಾಗಿಯೇ ಒಬ್ಬ ಅಧಿಕಾರಿಯನ್ನು ನೇಮಿಸಿ ಎಲ್ಲೆಲ್ಲಿ ಪರಭಾರೆಯಾಗಿರತಕ್ಕಂಥ ಜಮೀನುಗಳನ್ನು ವಾಪಾಸ್ ಕೊಡಿಸಲಿಕ್ಕೆ ರೆವಿನ್ಯೂ ಇಲಾಖೆಯವರು ಕಾನೂನು ಮಾಡಿದ್ದಾರೆ. ಅದರಲ್ಲೇನಾದರೂ ನ್ಯೂನತೆಗಳಿದ್ದರೆ ಸರಿಪಡಿಸಿ ಹೈಕೋರ್ಟ್‌ಗೆ ಹೋಗದಂತೆ ನಾನ್ ಅಪ್ಲಿಕೇಬಲ್ ಆಗುವ ರೀತಿಯಲ್ಲಿ ಜಮೀನನ್ನು ಮುಂದುವರೆಸಿಕೊಂಡು ಹೋಗಲಿಕ್ಕೆ ಅವಕಾಶ ಮಾಡಿಕೊಡಬೇಕು. ಅದನ್ನು ಮಾರಾಟ ಮಾಡಿದವರಿಗೆ ಮತ್ತು ಕೊಂಡುಕೊಳ್ಳುವವರಿಗೆ ಕೂಡ ಶಿಕ್ಷೆಯಾಗಬೇಕು. ಪುನಃ ಜಮೀನು ಪರಭಾರೆಯಾಗದಂತೆ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇನ್ನು ನೀವೇನು ಸ್ಪೇಷಲ್ ಕಾಂಪೋನೆಂಟ್ ಸ್ಕೀಮ್ ಎಂದು ಹೇಳುತ್ತೀರಿ ಇದು ಬಹಳ ಶ್ರೇಷ್ಟವಾಗಿರತಕ್ಕಂಥ ಸ್ಕೀಮ್ ಅದರಲ್ಲಿ

> "The District Level Implementation Committee is set up in every district to oversee the implementation of Special Component Plan. The Deputy Commissioner is the Chairman and all the District Officers of various Development Departments are its members. The Special Component Plan is being implemented intensively in the selected cluster of villages where there is predominant/substantial Scheduled Caste population. The District Level Committee will select five villages in the reserved constituencies and two more villages in each taluk of a district where Scheduled Caste population is concentrated. In these villages, necessary benefits will be provided to each family so as to enable them to cross the poverty line." ಎಂದು ಹೇಳಿದ್ದಾರೆ.

ಬಹಳ ಚೆನ್ನಾಗಿ ಉಲ್ಲೇಖ ಮಾಡಿದ್ದಾರೆ. ಆದರೆ ಕಾರ್ಯಾಗತವಾಗಿದ್ದನ್ನು ನೋಡಿದರೆ ರಿಸರ್ವ್ಡ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಒಂದೋ ಎರಡೋ ತೆಗೆದುಕೊಂಡಿದ್ದಾರೆ. ಮತ್ತೆ ಮಿಕ್ಕ ಎಲ್ಲಾ ಹಣವನ್ನು ಬೇರೆ ಕಡೆಗೆ ಬಳಸಿದ್ದಾರೆ. ಮಾನ್ಯ ಮಿತ್ರರಾದ ಹೆಗಡೆಯವರು ನಿಜವಾಗಿಯೂ ಇದು ಹರಿಜನರಿಗೆ ಸರಿಯಾಗಿ ದೊರೆಯುತ್ತಿಲ್ಲ ಎಂದು ಹೇಳಿದರು ಇವರು ವಿರೋಧಪಕ್ಷದವರು ಇಲ್ಲವೇ ಆಡಳಿತದವರು ಎಂದು ನಾನು ಹೇಳುತ್ತಿಲ್ಲ. ಎಲ್ಲರಿಗೂ ಬೇಕಾದವರು, ಹರಿಜನರು ಯಾರಿಗೆ ಬೇಡ ? ಅವರ ಓಟು ಯಾರಿಗೆ ಬೇಡ ? ನಾನೂದರೂ ಹೇಳುತ್ತಿದ್ದೇನೆ ಹರಿಜನರಿಗೆ ಈ ಸೌಲಭ್ಯಗಳು ಸರಿಯಾಗಿ ಸಿಗುತ್ತಿಲ್ಲ, ದಯವಿಟ್ಟು ತಾವು ಇದನ್ನು ಗಮನಿಸಿ ಮೀಸಲು ಕ್ಷೇತ್ರಗಳಲ್ಲಿ ಮೇಲೆ ಹೇಳಿದ ಪ್ರಕಾರ ಐದೈದು ಗ್ರಾಮಗಳನ್ನು ಎಲ್ಲೆಲ್ಲಿ ಹರಿಜನರಿಗೆ ಜಮೀನು ಇವೆ, ಅವುಗಳಿಗೆ ನೀರಾವರಿ ಸೌಕರ್ಯಗಳನ್ನು ಕೊಡತಕ್ಕಂತಾದ್ದು. ಸೆರಿಕಲ್ಚರ್, ನೀರಾವರಿ ಬಾವಿಗಳನ್ನು ಒದಗಿಸಿಕೊಡುವುದು ಇವುಗಳ ಬಗ್ಗೆ ಗಮನಹರಿಸಿದರೆ ಖಂಡಿತವಾಗಿಯೂ ಕೂಡ ಬಡತನದ ರೇಖೆಯಲ್ಲಿರತಕ್ಕಂಥ ಹರಿಜನ ಗಿರಿಜನರಿಗೆ ಹಿಂದುಳಿದ ವರ್ಗದವರಿಗೆ ಜೀವನ ಮಟ್ಟ ಹೆಚ್ಚಾಗಿ ಮುಂದುವರಿಯಲು ಅವಕಾಶವಾಗುತ್ತದೆ. ಈ ವರ್ಷವೇ ಇದನ್ನು ಸ್ಪೇಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಇವುಗಳೆಲ್ಲವನ್ನು ಅಳವಡಿಸಿ ಈ ವರ್ಗದ ಜನಗಳಿಗೆ ಅನುಕೂಲ ಮಾಡಿ ಕೊಡಲು ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ಸರಿಯಾಗಿ ತರಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಮರ್ಜನ್ಸಿ ಕಾಲದಲ್ಲಿ ಜೀತ ಪದ್ಧತಿ ವಿಮೋಚನೆ ಮಾಡತಕ್ಕಂಥ ಒಂದು ಆಕ್ಟ್ ಬಂತು. ಜೀತದಾಳುಗಳನ್ನು ವಿಮೋಚನೆ ಮಾಡತಕ್ಕಂಥ ಅತ್ಯಂತ ಚಾರಿತ್ರಿಕವಾದಂಥ ಒಂದು ಕಾನೂನು ಆಗ ಜಾರಿಗೆ ಬಂತು. ಅದು ಜಾರಿಗೆ ಬಂದಾಗ ಜೀತದಾಳುಗಳನ್ನು ವಿಮುಕ್ತ ಮಾಡತಕ್ಕ ದಿಶೆಯಲ್ಲಿ ಇಡೀ ನಮ್ಮ ಭಾರತ ದೇಶದಲ್ಲಿಯೇ ನಮ್ಮ ಕರ್ನಾಟಕದಲ್ಲಿ ೬೪ ಸಾವಿರದ ೪೨ ಜನ ಜೀತದಾಳುಗಳನ್ನು ಐಡೆಂಟಿಫೈ ಮಾಡಿದ್ದಾರೆ. ಬಹಳಷ್ಟು ಜನರನ್ನು ರಿಲೀಸ್ ಮಾಡಿದ್ದಾರೆ. ಪುನರ್ವಸತಿ ಮಾಡುವಾಗ ೭ ಸಾವಿರದ ೮೦೪ ಜನಕ್ಕೆ ಮಾತ್ರ ಮಾಡಿದ್ದಾರೆ. ಇನ್ನೂ ೬ ಸಾವಿರದ ೨೩೮ ಜನಕ್ಕೆ ಪುನರ್ವಸತಿ

ಮಾಡಬೇಕಾಗಿದೆ. ಇದರ ಬಗ್ಗೆ ಅಂಕಿ ಅಂಶಗಳನ್ನು ನಾನು ಸಂಗ್ರಹಿಸಿದ್ದೇನೆ. ಚಿತ್ರದುರ್ಗ ತಾಲ್ಲೂಕ್ ಒಂದರಲ್ಲೇ ಸುಮಾರು ೨೫೮ ಜನರಿಗೆ ಪುನರ್ವಸತಿ ಕಲ್ಪಿಸಬೇಕು ಎಂದು ನಮ್ಮ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಪೋಸಲ್ ಕಳಿಸಿ ನಾಲ್ಕೈದು ವರ್ಷಗಳಾಯಿತು. ಇದುವರೆಗೆ ಅದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದನ್ನು ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನಲ್ಲಿ ಅಳವಡಿಸಿದರೆ ಬಹಳ ಒಳ್ಳೆಯದು. ಇವತ್ತಿನ ದಿವಸ ಅವರೆಲ್ಲಾ ಬೀದಿ ಪಾಲಾಗಿದ್ದಾರೆ. ಅವರಿಗೆ ಕೂಲಿ ಕೆಲಸ ಸಿಕ್ಕುತ್ತಿದಿಲ್ಲ; ಅವರು ಹೇಗೆ ಜೀವನ ಮಾಡಬೇಕು ? ಅವರು ಬಿಕ್ಷಾಟನೆ ಮಾಡಬೇಕಾಗಿದೆ. ಪುನಃ ಅವರು ಸುಳ್ಳು ಹೇಳಿಕೊಂಡು ಜೀತದ ಕೆಲಸವನ್ನೇ ಮಾಡಬೇಕಾಗಿದೆ. ಈ ರೀತಿ ಒಂದು ಕಾರ್ಯಕ್ರಮ ಕೈಗೊಂಡ ಮೇಲೆ ಜೀತಮುಕ್ತಿ ಮಾಡತಕ್ಕ ದಿಶೆಯಲ್ಲಿ ಸಂಪೂರ್ಣವಾಗಿ ಮಾಡದೇ ಇರುವುದರಿಂದ ಕರ್ನಾಟಕ ರಾಜ್ಯದಲ್ಲಿ ೬೨೦೦ ಜೀತದಾಳುಗಳು ಜೀವನೋಪಾಯಕ್ಕೆ ಏನೂ ಮಾರ್ಗವಿಲ್ಲದೇ ಅಲೆದಾಡುತ್ತಿದ್ದಾರೆ. ತಾವು ಹಾಕಿಕೊಂಡಂಥ ಕಾರ್ಯಕ್ರಮ ಸಫಲವಾಗಿಲ್ಲ; ಸಂಪೂರ್ಣವಾಗಿಲ್ಲ ಎನ್ನುವುದನ್ನು ತಾವು ಮನಗಾಣಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕ ಜೀತದಾಳುಗಳ ಅಂಕಿ ಸಂಖ್ಯೆಗಳನ್ನು ಜಿಲ್ಲಾಧಿಕಾರಿಗಳಿಂದ ತರಿಸಿಕೊಂಡು ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಫಾರೆಸ್ಟ್ ಇಲಾಖೆ, ಪಿ.ಡಬ್ಲ್ಯೂ.ಡಿ. ಇಲಾಖೆ, ಸಿರಿಕಲ್ಚರ್ ಇಲಾಖೆಗಳಲ್ಲಿ ಇವರಿಗೆ ಕೆಲಸ ಕೊಡಿ ಎಂದು ಹೇಳಿದ್ದೇನೆ. ಇವರು ೧೫-೨೦ ದಿವಸ ಗಲಸ ಕೊಟ್ಟು ಆಮೇಲೆ ಕೆಲಸ ಇಲ್ಲ ಎಂದು ಹೇಳುತ್ತಾರೆ. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೆಲವು ಕೂಲಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳಲಿಕ್ಕೆ ಹೆಚ್ಚಾಗಿ ಅವಕಾಶವಿರುತ್ತದೆ. ಆದುದರಿಂದ ಪರ್ಮನೆಂಟ್ ಲೇಬರರ್ಸ್, ಗ್ಯಾಂಗ್ ಲೇಬರರ್ಸ್ ಮುಂತಾದ ಕೆಲಸಗಳಿಗೆ ಇವರನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎಲ್ಲೆಲ್ಲಿ ಜಮೀನುಗಳಿವೆ ಅಲ್ಲೆಲ್ಲಾ ಸುಮ್ಮನೆ ಗೋಮಾಳ ಎಂದು ಹೆಸರು ಇರುತ್ತದೆ. ಅಕ್ಕಪಕ್ಕದಲ್ಲಿರತಕ್ಕ ದೊಡ್ಡ ದೊಡ್ಡ ಜಮೀನುದಾರರು ಆ ಜಮೀನನ್ನು ಒತ್ತುವರಿ ಮಾಡಿಕೊಂಡರೆ ಸುಮ್ಮನಿರುತ್ತಾರೆ. ಆದರೆ ಬಡಬಗ್ಗರು ಮುಂದೆ ಬಂದರೆ ಗೋಮಾಳಕ್ಕೆ ಬೇಕು ಎಂದು ಹೇಳುತ್ತಾರೆ. ಎನ್‌ಕ್ರೋಚ್ ಮಾಡಿರುವುದಕ್ಕೆ ಗೋಮಾಳ ಎಂದು ತಾವು ಹೇಳುವುದಿಲ್ಲ. ಆದುದರಿಂದ ಉಳಿದಿರತಕ್ಕ ಗೋಮಾಳಗಳನ್ನು, ಸರ್ಕಾರಿ ಜಮೀನುಗಳನ್ನು ಇವರಿಗೆ ಕೊಡಿಸಿ ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನಲ್ಲಿ ಇವರಿಗೆ ಪುನರ್ವಸತಿ ವ್ಯವಸ್ಥೆ ಮಾಡುವುದಕ್ಕೆ ಅವಕಾಶವಿದ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ರೆವಿನ್ಯೂ ಖಾತೆಯವರು ಇದರ ಬಗ್ಗೆ ಆಲೋಚನೆ ಮಾಡುವುದಕ್ಕೆ ಅವಕಾಶವಿದೆಯೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಮತ್ತು ಸರ್ಕಾರವನ್ನು ನಾನು ಪ್ರಾರ್ಥನೆ ಮಾಡುತ್ತಾ ಇದ್ದೇನೆ.

ಇನ್ನು ಹೆಚ್ಚುವರಿ ಜಮೀನುಗಳನ್ನು ಹಂಚತಕ್ಕ ಬಗ್ಗೆ ಹೇಳುವುದಾದರೆ ನನಗೆ ಬಂದ ವರದಿ ಪ್ರಕಾರ ಕೆಲಸಕ್ಕೆ ಬಾರದೇ ಇರತಕ್ಕ ಗುಡ್ಡಗಾಡು ಪ್ರದೇಶಗಳು ನೇಗಿಲು ಹೊಡೆಯುವುದಕ್ಕೂ ಬರುವುದಿಲ್ಲ, ಅಂಥ ಜಮೀನುಗಳನ್ನು ಹಂಚತಕ್ಕ ವ್ಯವಸ್ಥೆ ನಡೆಯುತ್ತಾ ಇದೆ. ಆದ್ದರಿಂದ ಲ್ಯಾಂಡ್ ಗ್ರಾಂಟ್ ಕಮಿಟಿಗಳಲ್ಲಿ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಇದ್ದರೆ ಒಳ್ಳೆಯದು. ಅಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯಿದ್ದು ಸ್ಪಾಟನ್ನು ನೋಡಿ ಉಳುವುದಕ್ಕೆ ಯೋಗ್ಯವಾಗಿರತಕ್ಕ ಜಮೀನನ್ನು ಹಂಚಿಕೆ ಮಾಡತಕ್ಕ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಅವೇಲಬಲ್ ಲಿಸ್ಟ್‌ನಲ್ಲಿ ಸೇರಿರತಕ್ಕ ಜಮೀನಿನ ೫೦ ಪರ್ಸೆಂಟ್ ಜಮೀನನ್ನು ಹಂಚುವುದಕ್ಕೆ ಅವಕಾಶವಿರುತ್ತದೆ, ಅದನ್ನು ಮಾಡಬೇಕು ಎಂದು ತಮ್ಮ ಮುಖಾಂತರ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ.

ಇನ್ನು ಬ್ಯಾಕ್‌ವರ್ಡ್ ಕ್ಲಾಸಸ್ ಹಾಸ್ಟೆಲ್ಸ್ ಬಗ್ಗೆ ಹೇಳಿದ್ದೀರಿ. ಇದನ್ನು ಕೇವಲ ಸಿಟಿಗಳಲ್ಲಿ, ಟೌನುಗಳಲ್ಲಿ ಮಾತ್ರ ಮಾಡುತ್ತಾ ಇದ್ದೀರಿ. ಹಳ್ಳಿಗಳಲ್ಲಿ ಹೈಸ್ಕೂಲುಗಳಿವೆ, ಅಲ್ಲಿ ಹಾಸ್ಟೆಲ್ ಫೆಸಿಲಿಟೀಸ್ ಇಲ್ಲ, ತಾವು ಅಲ್ಲಿ ಹಾಸ್ಟೆಲುಗಳನ್ನು ಮಾಡಲೇಬೇಕಾಗುತ್ತದೆ. ಪ್ರೈವೇಟ್ ಹೈಸ್ಕೂಲುಗಳು ಇರತಕ್ಕ ಕಡೆ ಹಾಸ್ಟೆಲ್ಸ್‌ನ್ನು ಮಾಡುವುದಕ್ಕೆ ಅವಕಾಶ ಕೊಡಿ. ಈಗ ೧೦-೧೫ ಹಳ್ಳಿಗಳಿಗೆ ಒಂದು ಹೈಸ್ಕೂಲು ಆಗುತ್ತಾ ಇದೆ. ೭ನೇ ತರಗತಿಯಲ್ಲಿ ಮೊದಲಿದ್ದ ಪಬ್ಲಿಕ್ ಎಕ್ಸಾಮಿನೇಷನ್ ತೆಗೆದು ಬಿಟ್ಟರು, ಈಗ ೨೦೦-೨೫೦ ಹೈಸ್ಕೂಲುಗಳು ಹೆಚ್ಚಿಗೆ ಆಗುತ್ತಾ ಇರುವುದರಿಂದ ಎಲ್ಲಾ ಕಡೆ ಹಾಸ್ಟೆಲುಗಳನ್ನು ಮಾಡದೇ ಹೋದರೆ, ಹರಿಜನ-ಗಿರಿಜನರ, ಹಿಂದುಳಿದವರ ಮಕ್ಕಳು ಪ್ರೌಢಶಾಲೆಗಳಿಗೆ ಸೇರುವುದಕ್ಕೆ ಅವಕಾಶವಾಗುವುದಿಲ್ಲ. ಎಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಗ್ರಾಂಟ್ ಕೊಡುತ್ತಾ ಇದ್ದೀರಿ ಅಲ್ಲಿ ೧೦ ಪರ್ಸೆಂಟ್

ಹರಿಜನರನ್ನು ಕಡ್ಡಾಯವಾಗಿ ಸೇರಿಸಬೇಕು ಎಂದು ಒತ್ತಾಯ ಮಾಡಬೇಕು. ಬೋವಿಗಳು, ಲಂಬಾಣಿಗಳು, ಕೊರಚರು, ಕೊರಮರು ಇವರು untonchables ಅಲ್ಲ. ಹೀಗೆ ಅನ್‌ಟಚಬಲಿಟಿ ಇಲ್ಲದೇ ಇರತಕ್ಕವರನ್ನು ಹಿಂದುಳಿದ ವರ್ಗಗಳ ಹಾಸ್ಟಲ್‌ಗಳಲ್ಲಿ ಸೇರಿಸಿಕೊಂಡು ಲೆಕ್ಕಕ್ಕೆ ಇವರು ಹರಿಜನರು ಎಂದು ತೋರಿಸುತ್ತಾರೆ. ಹರಿಜನರಿಗೂ ಬೇರೆ ಬ್ಯಾಕ್‌ವರ್ಡ್ ಕ್ಲಾಸ್‌ಗೂ ಅಷ್ಟು ವ್ಯತ್ಯಾಸವಿರುವುಲ್ಲ. ಇದರಲ್ಲಿ ಶೇಕಡ ೧೦ ರಷ್ಟು ಹರಿಜನ-ಗಿರಿಜನರ ಮಕ್ಕಳನ್ನು ಸೇರಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ತಮಗೆ ಹೇಳಿದ್ದೇನೆ, ತಾವು ಇದರ ಬಗ್ಗೆ ವಿಚಾರಮಾಡಬೇಕು ಮತ್ತು ಇದನ್ನು ಕಡ್ಡಾಯ ಮಾಡಬೇಕಾಗುತ್ತದೆ, ಇಲ್ಲದೇ ಹೋದರೆ ಗ್ರಾಂಟನ್ನು ನಿಲ್ಲಿಸಬೇಕಾಗುತ್ತದೆ ಎಂದು ತಿಳಿಸಿರಿ; ಅನೇಕ ಮಠಾಧಿಪತಿಗಳು ಇದಕ್ಕೆ ಅವಕಾಶ ಕೊಟ್ಟಿದ್ದಾರೆ. ಉದಾಹರಣೆಗೆ ಸಿರಿಗೆರೆ ಮಠಾಧಿಪತಿಗಳು ಎಲ್ಲಾ ವರ್ಗದ ಮಕ್ಕಳಿಗೆ ಅವಕಾಶಕೊಟ್ಟಿದ್ದಾರೆ. ಅಲ್ಲಿ ಎಲ್ಲಾ ಮಕ್ಕಳು ಸೇರಿ ಒಬ್ಬೊಬ್ಬರಿಗೆ ಊಟ ಬಡಿಸಿಕೊಳ್ಳುತ್ತಾರೆ, ಎಲ್ಲರೂ ಕಲೆತು ಮಿಳಿತವಾಗಿ, ಯಾವ ಬೇಧಭಾವವಿಲ್ಲದೆ ಊಟೋಪಚಾರಗಳು ನಡೆಯುತ್ತಿದೆ, ಈ ರೀತಿ ೨೦-೨೫ ವರ್ಷಗಳಿಂದ ನಡೆಸುತ್ತಿದ್ದಾರೆ. ಈ ರೀತಿ ಮಠಾಧಿಪತಿಗಳು ಎಲ್ಲಾ ವರ್ಗದವರಿಗೆ ಅನುಕೂಲಮಾಡಿಕೊಟ್ಟಿದ್ದಾರೆ. ಈಗ ಬ್ರಾಹ್ಮಣರು ಜಾತಿ ಬಿಟ್ಟಿದ್ದಾರೆ, ಜಾತಿ ವಾದ ಬಿಟ್ಟು ಎಷ್ಟೋ ವರ್ಷ ಆಯಿತು. ಎಲ್ಲೆಲ್ಲಿ ಗ್ರಾಂಟ್-ಇನ್-ಏಯ್ಡ್ ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್ಸ್ ಇವೆಯೋ ಅಲ್ಲಿ ಹರಿಜನರ ಮಕ್ಕಳನ್ನು ಕಡ್ಡಾಯವಾಗಿ ಸೇರಿಸುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಇನ್ನು ಅನ್‌ಟಚಬಿಲಿಟಿ ಅಫೆನ್ಸಸ್ ಆಕ್ಟ್ ಇದೆ, ಅದರಲ್ಲಿ ಕೇಸುಗಳು ಬಹಳ ಕಡಿಮೆ. Untouchability is rampant everywhere. ಅಸ್ಪೃಶತೆ ಎಲ್ಲೆಲ್ಲೂ ತುಂಬಿದೆ ಅದಿಲ್ಲದಿರುವುದೇ ಕಡಿಮೆ. ಇದು ೧೦೦ಕ್ಕೆ ೯೯.೯೯ ರಷ್ಟು ವಾಸ್ತವಿಕ ಅಂಶ. ಇದನ್ನು ನಿವಾರಣೆ ಮಾಡಬೇಕಾದರೆ ಕಮಿಷನರ್ ಫಾರ್ ಎಸ್.ಸಿ, ಅಂಡ್ ಎಸ್.ಟಿ. ಅವರು ಒಂದು ಸಲಹೆ ಕೊಟ್ಟಿದ್ದಾರೆ. ಅದಕ್ಕೆ ಸ್ಪೆಷಲ್ ಕೋರ್ಟುಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಅಲ್ಲಿ ಅದನ್ನು ಟ್ರೈಮಾಡಿದರೆ ಜಸ್ಟೀಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಮಾಡತಕ್ಕಂಥ ದಿಶೆಯಲ್ಲಿ ಸರ್ಕಾರ ಪರ್ಯಾಲೋಚನೆ ಮಾಡಬೇಕು. ಮತ್ತೆ ಅನ್‌ಟಚಬಿಲಿಟಿ ಒಂದು ಜಾಡ್ಯ, ಅದನ್ನು ನಿರ್ಮೂಲ ಮಾಡಲಿಕ್ಕೆ ಮಾರ್ಗವನ್ನು ಹುಡುಕಬೇಕಾಗುತ್ತದೆ. ಅದಕ್ಕೆ ಮುಖ್ಯವಾಗಿ ಪ್ರತಿಯೊಂದು ಹಾಸ್ಟೆಲನ್ನೂ ಕೂಡ ಜಾತಿಯ ಒಂದು ಹೆಸರಿನಲ್ಲಿ ಕರೆಯದೆ ಎಲ್ಲಾ ವರ್ಗದವರನ್ನೂ ಸೇರಿಸುವುದಕ್ಕೆ ಅವಕಾಶ ಮಾಡಿದಾಗ, ಎಲ್ಲಾ ಮಕ್ಕಳಿಗೂ ಜಾತಿ ಭಾವನೆ ಬರದಹಾಗೆ ಒಟ್ಟಿಗೆ ವಾಸ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ, ಜಾತಿ ಎನ್ನುವುದು ನಿರ್ಮೂಲವಾಗುತ್ತದೆ. ಆದ್ದರಿಂದ ಹೆಚ್ಚು ಹೆಚ್ಚು ಹಾಸ್ಟೆಲುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆಗೆಯಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾಭ್ಯಾಸ ದೊರೆಯುವಂತೆ ಮಾಡಬೇಕು. ಪ್ರಾಥಮಿಕ ನರ್ಸರಿಯಿಂದ ಹಿಡಿದು ಕಾಲೇಜುಮಟ್ಟದವರೆಗೆ ಹೆಚ್ಚು ಹೆಚ್ಚು ಹಾಸ್ಟೆಲುಗಳನ್ನು ಕೊಡಬೇಕು. ಮತ್ತೆ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಹಾಸ್ಟೆಲನ್ನು ಕೊಡುತ್ತಾ ಇಲ್ಲ. ಅನೇಕ ಕಡೆ ಕೊಟ್ಟಿಲ್ಲ ಎನ್ನುವ ವಿಷಯ ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಪಿ.ಯು.ಸಿ. ಹಾಸ್ಟೆಲುಗಳನ್ನು ನಡೆಸಬೇಕಾಗುತ್ತದೆ ; ನಡೆಸದೇ ಹೋದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಇಂಜನಿಯರಿಂಗ್, ಮೆಡಿಕಲ್, ಅಗ್ರಿಕಲ್ಚರಲ್ ಸೈನ್ಸಸ್, ವೆಟರ್ನರಿ, ಟೆಕ್ನಿಕಲ್ ಮುಂತಾದ ಕಾಲೇಜುಗಳಿಗೆ ಹೋಗುವುದಕ್ಕೆ ಪಿ.ಯು.ಸಿ. ಮಟ್ಟದಲ್ಲಿ ಹೆಚ್ಚಿನ ತರಬೇತಿ ಕೊಡತಕ್ಕಂಥಾದ್ದು ಟ್ಯೂಷನ್ ಹೇಳುವುದು ಮಾಡಿದರೆ ಮೇಲ್ಮಟ್ಟದ ರೀತಿಯಲ್ಲಿ ಮೆರಿಟ್‌ನಲ್ಲಿ ಪಾಸ್‌ಮಾಡಿ, ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ಸೇರುವುದಕ್ಕೆ ಅವಕಾಶವಿರುವುದರಿಂದ ಅಲ್ಲಿ ಕಾನ್‌ಸಂಟ್ರೇಟ್‌ಮಾಡಿ, ಪಿ.ಯು.ಸಿ. ಕ್ಲಾಸ್‌ನಲ್ಲಿ ಟ್ಯೂಷನ್ ಹೇಳಿಸಬೇಕು.

ಈ ರೀತಿಯಾಗಿ ಅವರನ್ನು ತಯಾರು ಮಾಡಿ, ಯಾರಿಗೆ ಸಿ. ಬಿ. ಜಡ್. ಬೇಕೋ ಮತ್ತು ಯಾರಿಗೆ ಪಿ.ಸಿ.ಎಂ.ಬಿ ಬೇಕೋ ಆ ವಿಷಯಗಳಲ್ಲಿ ಅವರಿಗೆ ವಿಶೇಷ ತರಬೇತಿಯನ್ನು ಕೊಟ್ಟರೆ ಅವರು ಸಹ ಎಲ್ಲಾ ಕೇಡರ್‌ನಲ್ಲೂ ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆ. ಆಗ ಅವರು ಸಹ ಇತರೇ ಬುದ್ಧಿವಂತ ಹುಡುಗರೊಡನೆ ಕಾಂಪಿಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಶಿಕ್ಷಣ ರಂಗದಲ್ಲಿಯೇ ಮೂಲತಃ ಬದಲಾವಣೆಯಾಗಬೇಕಾಗಿರುವುದರಿಂದ ಇದರ ಕಡೆಗೆ ಸರ್ಕಾರದವರು ವಿಶೇಷವಾಗಿ ಗಮನವನ್ನು ಹರಿಸಬೇಕಾಗಿದೆ ಎಂದು ಹೇಳಬಯಸುತ್ತೇನೆ.

ಇನ್ನು ವಸತಿ ಸೌಕರ್ಯದ ಬಗ್ಗೆ ಹೇಳುವುದಾದರೆ, ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೋಸ್ಕರವಾಗಿ ಕೆಲವು ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವುದರಲ್ಲಿದ್ದಾರೆ ಮತ್ತು ಕೆಲವು ಕಡೆ

ಅಕ್ವೈರ್ ಮಾಡಿಕೊಂಡಿದ್ದೀರಿ. ಇನ್ನು ಕೆಲವು ಕಡೆ ಪ್ರೈವೇಟ್ ಲ್ಯಾಂಡ್ ಸಿಗದೇ ಇದ್ದರೆ ಸರ್ಕಾರಿ ಜಮೀನಿನಲ್ಲಿಯಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಇವತ್ತಿಗೂ ಸಹ ಕೆಲವು ಕುಗ್ರಾಮದಲ್ಲಿರುವ ಹರಿಜನರಿಗೆ ವಾಸಕ್ಕೆ ಮನೆಗಳು ಇಲ್ಲ. ಈ ವಿಷಯವನ್ನು ನಾನು ಜಿಲ್ಲಾಧಿಕಾರಿಗಳವರ ಗಮನಕ್ಕೆ ತಂದಿದ್ದೇನೆ ಮತ್ತು ಸರ್ಕಾರದ ಗಮನಕ್ಕೂ ತಂದಿದ್ದೇನೆ. ಆದುದರಿಂದ ಜನತಾ ಮನೆಗಳಾಗಲೀ, ಇಲ್ಲವೇ ಸೈಟ್‌ಗಳನ್ನು ಕೊಡುವಾಗ ಹರಿಜನರಿಗೂ ಕೊಡುವ ಹಾಗೆ ತಾವು ವ್ಯವಸ್ಥೆ ಮಾಡಬೇಕು. ಈಗ ಏನಾಗುತ್ತಿದೆ ಎಂದರೆ ಹಳ್ಳಿಗಳಲ್ಲಿ ಯಾರು ನಿರ್ಗತಿಕರು ಇದ್ದಾರೋ ಅವರಿಗೆ ಸೈಟ್‌ಗಳು ಸಿಗುತ್ತಿಲ್ಲ. ಯಾರು ಪ್ರಭಾವಶಾಲಿಗಳು ಇದ್ದಾರೋ ಅಂಥವರಿಗೆ ಮನೆಗಳು ಸೈಟ್‌ಗಳು ಸಿಗುತ್ತಿದೆ. ನಿರ್ಗತಿಕರು ಜೋಪಡಿಗಳಲ್ಲಿ ವಾಸ ಮಾಡಿಕೊಂಡಿದ್ದು ಅವರ ಆರೋಗ್ಯ ಕೆಡುವಂಥ ಸ್ಥಿತಿಯಲ್ಲಿದ್ದರೂ ಸಹ ಅವರು ಅಲ್ಲಿಯೇ ವಾಸ ಮಾಡಿಕೊಂಡಿದ್ದಾರೆ. ಆದುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಅಂಥಾ ಜನಕ್ಕೆ ಮೊದಲು ಸೈಟ್‌ಗಳನ್ನಾಗಲಿ ಇಲ್ಲವೇ ಮನೆಗಳನ್ನು ಕಟ್ಟಿಸಿಕೊಡುವ ಕಡೆಗೆ ಸರ್ಕಾರದವರು ಗಮನ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಆಡಳಿತದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಬೇರೆ ರಾಜ್ಯಗಳಲ್ಲಿ ಐ.ಎ.ಎಸ್. ಕೇಡರ್ ಅಧಿಕಾರಿಗಳ ವಯೋಮಿತಿಯನ್ನು ೫೮ಕ್ಕೆ ಮಾಡಿದ್ದಾರೆ. ನಮ್ಮ ಸಮಾಜ ಕಲ್ಯಾಣ ಇಲಾಖೆಗೆ ಐ.ಎ.ಎಸ್. ಕೇಡರ್ ಅಧಿಕಾರಿಗಳನ್ನು ಹಾಕಬೇಡಿ. ಯಾರು ಅಲ್ಲಿಯೇ ೨೦–೨೫ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ ಅಂಥವರಿಗೆ ಪ್ರಮೋಷನ್ ಕೊಟ್ಟು ಐ.ಎ.ಎಸ್. ಕೇಡರ್‌ಗೆ ಇಕ್ವಿವಲೆಂಟ್ ಸ್ಕೇಲ್‌ನ್ನು ಕೊಡಿ. ಮತ್ತೆ ಬೇರೆ ರಾಜ್ಯಗಳಲ್ಲಿ ನಿವೃತ್ತಿ ವಯಸ್ಸನ್ನು ೫೮ ಇರುವ ಹಾಗೆ ನಮ್ಮಲ್ಲಿಯೂ ಮಾಡಬೇಕು ಎನ್ನುವ ಬಗ್ಗೆ ಕೆಲವು ಇಲಾಖೆಯವರು ಪ್ರಪೋಜಲ್‌ಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆಂದು ತಿಳಿದುಬಂದಿದೆ. ಅದರ ಬಗ್ಗೆ ವಿಚಾರಣೆ ಮಾಡಿ ಎಂದು ಹೇಳಬಯಸುತ್ತೇನೆ. ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಸಹ ಡೈರೆಕ್ಟರ್ ಹುದ್ದೆಯನ್ನು ಐ.ಎ.ಎಸ್.ರವರಿಂದ ಭರ್ತಿ ಮಾಡುವ ಬದಲು ಯಾರು ಅಲ್ಲಿಯೇ ೨೦, ೨೫ ವರ್ಷಗಳಿಂದ ಸೇವೆ ಸಲ್ಲಿಸಿಕೊಂಡು ಬಂದಿದ್ದಾರೋ ಅಂಥವರಿಗೆ ಪ್ರಮೋಷನ್ ಕೊಟ್ಟು ಐ.ಎ.ಎಸ್.ರವರ ಪೇ ಸ್ಕೇಲಿಗೆ ಇಕ್ವಿವಲೆಂಟಾಗಿ ಸಂಬಳವನ್ನು ಕೊಟ್ಟು ಅವರ ನಿವೃತ್ತಿ ವಯಸ್ಸನ್ನು ಸಹ ೫೮ಕ್ಕೆ ಏರಿಸಿದರೆ ಅವರಿಗೂ ಸಹ ಕಾನ್‌ಫಿಡೆನ್ಸ್‌ನಿಂದ ಕೆಲಸ ಮಾಡಲು ಉತ್ಸುಕತೆ ಇರುತ್ತದೆ ಮತ್ತು ಇಷ್ಟು ವರ್ಷ ಕಷ್ಟಪಟ್ಟರೂ ಡೈರೆಕ್ಟರ್ ಹುದ್ದೆ ಸಿಗಲಿಲ್ಲ ಬರೀ ಜಾಯಿಂಟ್ ಡೈರೆಕ್ಟರ್ ಇಲ್ಲವೇ ಡೆಪ್ಯುಟಿ ಡೈರೆಕ್ಟರ್‌ರವರ ಹುದ್ದೆ ಸಿಕ್ಕಿತು ಎಂದು ಅವರು ನೊಂದುಕೊಳ್ಳಲು ಅವಕಾಶ ಇರುವುದಿಲ್ಲ. ಅವರಲ್ಲಿಯೂ ಕೂಡ ಕೆಲವರು ಹರಿಜನರು ಹಿಂದುಳಿದವರು ಇದ್ದಾರೆ, ಅಂಥವರಿಗೆ ಪ್ರಮೋಷನ್ ಕೊಡುವ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು The Director Social Welfare Officer is just like headclerk to the Deputy Commissioner. He has to route his papers through the District Development Assistant. The District Social Welfare Officer must be equated with the Class-I gazetted as in the other departments and he must be directly under the control of the Deputy Commissioner if need be. Otherwise he may be an independent officer like the Deputy Director of Agriculture etc., Only for the purpose of co-ordination the Deputy Commissioner will be the Chairman of the co-ordination Committee and he will review the progress as in the case of other departments. ಆದುದರಿಂದ ಈ ರೀತಿ ಮಾಡುವುದರಿಂದ ಕಾನ್‌ಫಿಡೆನ್ಸ್ ಬರುತ್ತದೆ ಮತ್ತು ಕೆಲಸವನ್ನು ಕೂಡ ಚೆನ್ನಾಗಿ ಮಾಡುತ್ತಾರೆಂದು ಹೇಳಬಯಸುತ್ತೇನೆ. ಈಗಾಗಲೇ ಜೀಪು ಕೊಟ್ಟಿದ್ದೀರಿ ಮತ್ತು ಎಲ್ಲಾ ತರಹದ ಸೌಕರ್ಯವನ್ನೂ ಕೊಟ್ಟಿದ್ದೀರಿ, ಇಷ್ಟೆಲ್ಲಾ ಇದ್ದಾಗ್ಯೂ ಕೂಡ ಅವರು ತುರ್ತಾಗಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಆದುದರಿಂದ ಇದರ ಕಡೆಗೆ ಸರ್ಕಾರದವರು ಲಕ್ಷ್ಯ ನೀಡಬೇಕೆಂದು ಹೇಳಬಯಸುತ್ತೇನೆ. The Block Development Officer has to look after the implementation of the Social Welfare Schemes and he is assisted by the Social Welfare Inspector who is of the cadre of the Second Division Clerk or the First Division Clerk. ಆದುದರಿಂದ ಎಕ್ಸ್‌ಟೆನ್‌ಷನ್ ಆಫೀಸರ ಎಂದು ಮಾಡಿ ಕೋ ಆಪರೇಷನ್ ಮತ್ತು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿರುವ ಹಾಗೆ ಅಲ್ಲಿ ಯಾವ

ರೀತಿಯ ಪೇ ಸ್ಕೇಲ್ ಗೊಟ್ಟಿದ್ದಾರೋ ಆ ರೀತಿ ಕೊಟ್ಟು ಮಾಡಿ, ಇಲ್ಲದೇ ಹೋದರೆ ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಇನ್ಸ್‌ಪೆಕ್ಟಿಂಗ್ ಆಫೀಸರ್ ಎಂದು ಮಾಡಿ ಅವರನ್ನು ಕ್ಲಾಸ್ (೨) ಗೆಜೆಟೆಡ್ ಹುದ್ದೆಗೇರಿಸಿರಿ, ಆಗ ಈ ಇಲಾಖೆಗೂ ಘನತೆ ಮತ್ತು ತೂಕ ಬರುತ್ತದೆ. ಹಿಂದುಳಿದ ವರ್ಗಗಳ ಕಲ್ಯಾಣವನ್ನು ಹೊತ್ತಿರತಕ್ಕಂಥ ಅತ್ಯಂತ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರಿಗೆ ಒಳ್ಳೆಯ ಸ್ಥಾನ ಮಾನಗಳನ್ನು ಕೊಟ್ಟರೆ ಅವರು ಹೆಚ್ಚಿನ ಶ್ರದ್ಧಾಸಕ್ತಿಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಅವರು ಇನ್ನೊಬ್ಬರ ಕೈಕೆಳಗೆ ಕೆಲಸ ಮಾಡುವುದು ಎಂದರೆ ಜವಾಬ್ದಾರಿ ಹೆಚ್ಚಿಗೆ ಇರುವುದಿಲ್ಲ. ಆದುದರಿಂದ ಇದನ್ನು ಕೂಡಲೇ ತಾವು ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಬಡಮಕ್ಕಳು ಮತ್ತು ಅಂಗವಿಕಲ ಮಕ್ಕಳಿಗಾಗಿ ಆರ್ಫನ್ ಸ್ಕೂಲ್‌ಗಳನ್ನು ತೆರೆದಿದ್ದಾರೆ. ಇದಕ್ಕಾಗಿ ಪ್ರತಿಯೊಂದು ತಾಲ್ಲೂಕ್‌ಗಳಲ್ಲೂ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದಾರೆ, ಅದಕ್ಕಾಗಿ ನಮ್ಮ ಸರ್ಕಾರದವರನ್ನು ಅಭಿನಂದಿಸುತ್ತಿದ್ದೇನೆ. ಹೀಗೆ ಮಾಡುವಾಗ ಸಮಾಜ ಕಲ್ಯಾಣ ಇಲಾಖೆಯವರಲ್ಲಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರಲ್ಲಿ ಒಂದು ಕೋ ಆರ್ಡಿನೇಷನ್ ಇದ್ದರೆ ಒಳ್ಳೆಯದು. ಈ ಎರಡೂ ಇಲಾಖೆಗಳ ಕೋ ಆರ್ಡಿನೇಷನ್‌ನಿಂದ ಬಡವರ ಮಕ್ಕಳ ಕಲ್ಯಾಣವಾಗುತ್ತದೆಂದು ನಾನು ನಂಬಿಕೊಂಡಿದ್ದೇನೆ.

೫-೦೦ ಪಿ.ಎಂ.

ಇದನ್ನು ತಾವು ಮಾಡುತ್ತೀರೆಂದು ನಂಬಿ ಹೇಳುತ್ತಿದ್ದೇನೆ. ನಾನು ಆಡಳಿತದ ಬಗ್ಗೆ ಹೇಳಿದ್ದೇನೆ ಮತ್ತು ಚಿಕ್ಕ ಮಕ್ಕಳಿಂದ ಹಿಡಿದು ಕಾಲೇಜು ಮಟ್ಟದವರೆಗೆ ಹೇಳಿದ್ದೇನೆ. ಬೇರೆ ಸಂದರ್ಭದಲ್ಲಿ ಈ ಬಗ್ಗೆ ಇನ್ನೂ ಬೇರೆ ಬೇರೆ ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ನಾವು ಹೇಳಿದ್ದೆಲ್ಲವೂ ಕಾರ್ಯಗತವಾಗಬೇಕು. ಆದರೆ ನಾವು ಪ್ರತಿ ಬಜೆಟ್ ಭಾಷಣದಲ್ಲಿ ಏನು ಮಾತನಾಡುತ್ತೇವೆ ಅವು ಕಾರ್ಯರೂಪಕ್ಕೆ ಬರುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಕಳೆದ ವರ್ಷ ನನಗೊಂದು ಆಶ್ವಾಸನೆಯನ್ನು ಕೊಟ್ಟಿದ್ದರು; ಆದರೆ ಅದು ಇದುವರೆಗೆ ಕಾರ್ಯ ರೂಪಕ್ಕೆ ಬರಲಿಲ್ಲ. ಸಮಾಜ ಕಲ್ಯಾಣ ಇಲಾಖೆಯವರು ಇವತ್ತಿನ ದಿವಸ ನೂರಾರು ಗ್ರಾಂಟ್ ಇನ್ ಏಡ್ ಹಾಸ್ಟೆಲುಗಳಿಗೆ ಗ್ರಾಂಟನ್ನು ಕೊಡುತ್ತಿದ್ದಾರೆ; ಅದಕ್ಕಾಗಿ ಆ ಖಾತೆಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೆ ಅಲ್ಲಿ ಏನು ಮಾಡಿದ್ದಾರೆಂದರೆ, ಗ್ರಾಂಟ್ ಇನ್ ಏಡ್ ಹಾಸ್ಟೆಲುಗಳು ಹರಿಜನರದ್ದಾಗಿರಲಿ, ಗಿರಿಜನರದ್ದಾಗಿರಲಿ ಅಥವಾ ಯಾವುದೇ ಖಾಸಗಿಯವರದ್ದಾಗಿರಲಿ, ಅವನ್ನು ಎರಡು ವರ್ಷ ನಡೆಸಿದ ಮೇಲೆ ೩ನೇ ವರ್ಷದಲ್ಲಿ ಆಡಿಟ್ ವರದಿಯನ್ನು ಕೊಟ್ಟಮೇಲೆ ಅದನ್ನು ನೋಡಿಕೊಂಡು ಗ್ರಾಂಟ್ ಕೊಡಬೇಕೆಂದು ಇವರ ರೂಲ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಆ ರೂಲ್ಸ್ ಅಪ್ರೂವ್ ಆಗದಿದ್ದರೂ ಅದನ್ನು ಜಾರಿಗೆ ತಂದಿದ್ದಾರೆ. ಅದರ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ; ಅದರಲ್ಲಿ, ಆ ಒಂದು ನಿಯಮಾವಳಿಯನ್ನು ಸಡಿಲಿಸಬೇಕೆಂದು ಹೇಳಿದ್ದೆ. ಅದಕ್ಕೆ ಒಂದು ಕ್ಯಾಲೆಂಡರ್ ಈಯರ್ ಸಾಕು. ಒಂದು ವರ್ಷ ಹಾಸ್ಟೆಲ್ ಪ್ರಾರಂಭವಾಗಿ ಅದು ಮಾರ್ಚ್ ಕೊನೆಯವರೆಗೆ ನಡೆದಮೇಲೆ ಅದರ ಬಗ್ಗೆ ಆಡಿಟ್ ವರದಿಯನ್ನು ಕೊಟ್ಟಬಳಿಕ (ಅಧಿಕಾರಿಗಳು ಹೋಗಿ ಇನ್ಸ್‌ಪೆಕ್ಟ್ ಮಾಡಿ ವರದಿಯನ್ನು ಒಪ್ಪಿಸಿದ ಮೇಲೆ) ಅಂದರೆ ಎರಡನೇ ವರ್ಷದಿಂದ ಗ್ರಾಂಟ್ ಕೊಡತಕ್ಕ ವ್ಯವಸ್ಥೆ ಆಗಬೇಕು. ಯಾವುದೇ ಹಾಸ್ಟೆಲಿಗಾಗಲೀ ಮುಂಗಡವಾಗಿ ಗ್ರಾಂಟನ್ನು ಕಳುಹಿಸಿದರೆ ಹಾಸ್ಟೆಲನ್ನು ಪ್ರಾರಂಭಿಸುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ, ಬಡ ವಿದ್ಯಾರ್ಥಿಗಳ ಹಾಸ್ಟೆಲನ್ನು ನಡೆಸುವುದು ಬಹಳ ಕಷ್ಟ. ಎರಡು ವರ್ಷ ಆದ ಮೇಲೆ ೩ನೇ ವರ್ಷದಿಂದ ಗ್ರಾಂಟು ಕೊಡುವುದು ಬೋಗಸ್ ಆಗುತ್ತದೆ. ಈ ರೀತಿ ಬೋಗಸ್ ಆಗುವುದಕ್ಕೆ ಅವಕಾಶ ಕೊಡದೆ ಚೆನ್ನಾಗಿ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಮತ್ತು ಒಂದು ವರ್ಷ ಚೆನ್ನಾಗಿ ಊಟ ವಸತಿಯನ್ನು ಮಕ್ಕಳಿಗೆ ಕೊಟ್ಟರೆ ಮಾತ್ರ ಮರು ವರ್ಷದಿಂದ ಗ್ರಾಂಟ್ ಕೊಡಿ. ೩ನೇ ವರ್ಷದಿಂದ ಗ್ರಾಂಟ್ ಕೊಡತಕ್ಕ ನಿಯಮವನ್ನು ಸಡಿಲಿಸಿ ೨ನೇ ವರ್ಷದಿಂದ ಕೊಡಬೇಕೆಂದು ಕಳೆದ ವರ್ಷ ಕೇಳಿಕೊಂಡಾಗ ಮಾನ್ಯ ಮಂತ್ರಿಗಳು ಈ ಬಗ್ಗೆ ಭರವಸೆ ನೀಡಿದ್ದರು. ಆದರೆ ಇದುವರೆಗೆ ಅದು ಕಾರ್ಯಗತವಾಗಲಿಲ್ಲ. ಹೋದ ವರ್ಷ ಮಾರ್ಚ್ ಕೊನೆಯಲ್ಲಿ ಒಂದು ವಾರ ಪರದಾಡಿದರೂ ಒಂದು ಫೈಲನ್ನೂ ಒದಗಿಸುವದಕ್ಕೆ ಮುಂದೆ ಬರಲಿಲ್ಲ. ಕೊನೆಗೆ ನಾನೇ ತೆಗೆದುಕೊಂಡು ಹೋಗಿ ತೋರಿಸಿದ್ದಾಯಿತು. ಆಮೇಲೆ ಗ್ರಾಂಟ್ ಮಂಜೂರ್ಮಾಡಿದರು. ಆಗ ಮಾಡಿದ್ದನ್ನು ಇನ್ನೂ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಈಗ ಏನೋ ಕೊಟ್ಟಿದ್ದಾರೆಂದು ಕೇಳಿದೆ. ಕಾಲಕ್ಕೆ ಸರಿಯಾಗಿ ಹಣ ಕೊಡದಿದ್ದರೆ ಬಡ ವರ್ಗದ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತದೆ. ನಿಜವಾಗಿ ಬಡವರನ್ನು ಉದ್ಧಾರ ಮಾಡಬೇಕೆಂದರೆ

ಕಟ್ಟುನಿಟ್ಟಾಗಿ ನಿಯಮಗಳನ್ನು ಅನುಸರಿಸುವಂತೆ ಮಾಡಬೇಕು. ಮಕ್ಕಳಿಗೆ ಸರಿಯಾಗಿ ಊಟ ಹಾಕುತ್ತಾರೆಯೋ ಇಲ್ಲವೆ, ಸಾಕಷ್ಟು ಸಿಬ್ಬಂದಿ ವರ್ಗ ಇದೆಯೋ ಇಲ್ಲವೆ, ಅಟೆಂಡೆನ್ಸ್ ಇದೆಯೋ ಇಲ್ಲವೆ, ಕೆಲಸ ಸರಿಯಾಗಿ ನಡೆಯುತ್ತಿದೆಯೋ ಇಲ್ಲವೆ ಎಂಬುದನ್ನು ತನಿಖೆ ಮಾಡಿಸಬೇಕು. ಇವನ್ನೆಲ್ಲ ಮಾಡುವುದು ಬಿಟ್ಟು ಚೆನ್ನಾಗಿ ನಡೆಯುತಕ್ಕ ಹಾಸ್ಟೆಲುಗಳಿಗೆ ತೊಂದರೆ ಮಾಡಿದರೆ ಹೇಗೆ? ಈ ರೀತಿ ಸುಮ್ಮನೆ ತೊಂದರೆ ಕೊಡುವುದರಿಂದ ಸಮಾಜ ಕಲ್ಯಾಣ ಮಾಡಿದ ಹಾಗ ಆಗುವುದಿಲ್ಲ. ಆದ್ದರಿಂದ, ಸಮಾಜಕ್ಕೆ ಇರತಕ್ಕ ಈ ಒಂದು ತೊಂದರೆಯನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ವರ್ಷೇ ವರ್ಷೇ ಮಕ್ಕಳ ಸಂಖ್ಯೆ ಜಾಸ್ತಿಯಾಗುವುದರಿಂದ ಆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಗ್ರಾಂಟನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆ ವ್ಯಾಪಕವಾಗಿರತಕ್ಕದ್ದಾದ್ದರಿಂದ ಇನ್ನೂ ಹೇಳತಕ್ಕದ್ದು ಇತ್ತು; ಆದರೆ ಸಮಯದ ಅಭಾವ ಇರುವುದರಿಂದ ಇಷ್ಟು ಮಾತ್ರ ಹೇಳಿ, ನಾನು ಇದುವರೆಗೆ ಕೊಟ್ಟ ಸಲಹೆಗಳನ್ನು ಸರ್ಕಾರ ಕಾರ್ಯರೂಪಕ್ಕೆ ತರುತ್ತದೆಂದು ನಂಬಿ ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಅನಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಉಪಾಧ್ಯಕ್ಷರೇ, ನಾನು ಮಹಿಳಾ ಹಾಗೂ ಶಿಶು ಕಲ್ಯಾಣದ ಬಗ್ಗೆ ಮಾತನಾಡಬೇಕೆಂದಿದ್ದೇನೆ. ದಿನನಿತ್ಯದ ಪತ್ರಿಕೆಗಳಲ್ಲಿ, ಮಹಿಳೆಯ ಮೇಲೆ ಅತ್ಯಾಚಾರ, ವರದಕ್ಷಿಣೆಗಾಗಿ ಬಲಿ, ಹರಿಜನ ಮಹಿಳೆಯ ಮೇಲೆ ಅತ್ಯಾಚಾರ, ಇತ್ಯಾದಿಗಳನ್ನು ನೋಡುತ್ತೇವೆ. ಇವತ್ತು ಈ ಒಂದು ಸುದ್ದಿ ದೊಡ್ಡ ಶಿರೋನಾಮೆಯಲ್ಲಿ ಬಂದಿದೆ. ದಾದಿಯರ ಮೇಲೆ, ಶಿಕ್ಷಕಿಯರ ಮೇಲೆ, ಮಹಿಳಾ ವೈದ್ಯರ ಮೇಲೆ, ಮಹಿಳಾ ನೌಕರರ ಮೇಲೆ, ಹಾದಿಯಲ್ಲಿ ಹೋಗುವವರ ಮೇಲೆ, ಮನೆಯಲ್ಲಿ ಇದ್ದವರ ಮೇಲೆ ಶಾಸಕರು, ವೈದ್ಯರು, ಶಿಕ್ಷಕರು, ದೊಡ್ಡ ದೊಡ್ಡ ಅಧಿಕಾರಿಗಳು, ಪೋಲೀಸರು ಮುಂತಾದವರು ಅತ್ಯಾಚಾರ ಮಾಡುತ್ತಾರೆ. ಮೊನ್ನೆ ಪತ್ರಿಕೆಯಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ನಡೆದ ವಿಚಾರ ಬಂದಿತ್ತು.

ಒಬ್ಬರು ಮಾನ್ಯ ಸದಸ್ಯರು.—ಶಾಸಕಿಯರ ಮೇಲೆ ಅಂದರು, ಯಾವ ಶಾಸಕಿಯರ ಮೇಲೆ ಅತ್ಯಾಚಾರವಾಗಿದೆ?

ಶ್ರೀಮತಿ ಅನಸೂಯ ಗಜಾನನ ಶರ್ಮ.—ಹೆಣ್ಣು ಮಕ್ಕಳು ಮಾತನಾಡಿದರೆ ಇವರಿಗೆ ಆಗುವುದಿಲ್ಲ. ನಾವು ಸದನದಲ್ಲಿ ೭-೭ ಜನರಿದ್ದೇವೆ......

ಶ್ರೀ ಜಿ. ಕೆ. ತಕ್ಕೇಡ್.—ನಮ್ಮ ಅವ್ವನು ಹೆಣ್ಣು ಮಗಳೆ. ನೀವು ಏತಕ್ಕೆ ಸಿಟ್ಟಿನಲ್ಲಿ ಮಾತನಾಡುತ್ತೀರಿ?

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಿಮ್ಮ ಮಗಳು ಹೆಣ್ಣು ಮಗಳೇ. ನಾವು ಹೇಳುವುದನ್ನು ಸ್ವಲ್ಪ ಸುಮ್ಮನೆ ಕೇಳಬೇಕು.

ಶ್ರೀ ಜಿ. ಕೆ. ತಕ್ಕೇಡ್.—ಕೇಳುತ್ತೇವೆ ಅವ್ವ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಹೆಣ್ಣು ಮಕ್ಕಳ ವಿಷಯ ಎತ್ತಿದ ಕೂಡಲೇ ಜಗಳಕ್ಕೆ ಬರುತ್ತಾರೆ. ನಮ್ಮ ತಾಯಿಯೂ ಹೆಣ್ಣುಮಗಳೇ ಅನ್ನುತ್ತಾರೆ. ಏತಕ್ಕೆ ಇವರಿಗೆ ಸುಮ್ಮನಿರುವುದಕ್ಕಾಗುವುದಿಲ್ಲ? ಎಲ್ಲರೂ ಹೆಣ್ಣು ಮಕ್ಕಳ ಬಗ್ಗೆ ಮಾತನಾಡುತ್ತಾರೆ; ಅವರಿಗೆ ರಕ್ಷಣೆ ನೀಡುವವರು ಯಾರೂ ಇಲ್ಲ. ಅತ್ಯಾಚಾರ ಎಸಗುವವರ ಸಂಖ್ಯೆ ಹೆಚ್ಚಿದೆ. ಅವರು ಹೆಣ್ಣು ಮಕ್ಕಳನ್ನು ಪಶುಗಳು ಎಂದು ತಿಳಿದುಕೊಂಡಿದ್ದಾರೋ ಅಥವಾ ಭೋಗದ ವಸ್ತು ಎಂದು ತಿಳಿದುಕೊಂಡಿದ್ದಾರೋ ಗೊತ್ತಾಗುವುದಿಲ್ಲ. ಯಾವ ಕ್ಷೇತ್ರದಲ್ಲಿ ನೋಡಿದರೂ ಇದು ಅಧಿಕವಾಗಿದೆ. ಪ್ರಿನ್ಸಿಪಾಲ್ ಲೆಕ್ಚರರ್ ಮೇಲೆ ಅತ್ಯಾಚಾರ ಮಾಡುತ್ತಾರೆ. ಒಬ್ಬ ಶಿಕ್ಷಕ ೯ ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ್ದನ್ನು ಪತ್ರಿಕೆಯಲ್ಲಿ ತಾವು ಓದಿರಬಹುದು. ಇದನ್ನೆಲ್ಲಾ ನೋಡಿದರೆ ಈ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇದೆಯೋ ಇಲ್ಲವೋ ಎಂಬ ಸಂಶಯ ಬರುತ್ತದೆ. ಹೆಣ್ಣು ಮಕ್ಕಳ ಮಾರಾಟವಂತೂ ಪ್ರತಿನಿತ್ಯ ಒಂದೇ ಸಮನೆ ನಡೆಯುತ್ತಿದೆ. ಇದನ್ನು ಪ್ರತಿವರ್ಷವೂ ಹೇಳುತ್ತಿದ್ದೇವೆ; ಆದರೂ ಅದು ನಿಂತಿಲ್ಲ. ಇಸ್ಲಾಂ ಧರ್ಮಗ್ರಂಥವಾದ ಖುರಾನ್‌ನಲ್ಲಿ ಸ್ತ್ರೀಪುರುಷರೆಲ್ಲ ಸಮಾನರು, ಮಾನವರೆಲ್ಲ ಸಮಾನರು ಎಂದು ಹೇಳಿದೆ. ಆದರೆ ಈ ಜನತೆ ಮಾಡುತ್ತಿರುವುದು ಏನೆಂದರೆ, ಹೆಣ್ಣು ಮಕ್ಕಳು ಸಿನೇಮಾ ನೋಡಬಾರದೆಂದು ಒಬ್ಬ ಶಿಕ್ಷಕಿ ಸಿನೇಮಾ ನೋಡಿದ್ದಕ್ಕೆ ಆಕೆಯನ್ನು ಕೆಲಸದಿಂದ ಸಸ್ಪೆಂಡ್ ಮಾಡಿದರು. ಆಕೆಯ

ರಕ್ಷಣೆಗೆ ಯಾರೂ ಹೋಗಲಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ವಿಚಾರ ಮಾಡುವಂಥ ಕಾಲ ಬಂದಿದೆ. ಈ ರೀತಿ ಹೆಣ್ಣು ಮಕ್ಕಳನ್ನು ಹತ್ತಿಕ್ಕುವುದು ನಮ್ಮ ಸಂವಿಧಾನ ಪ್ರಕಾರ ನಾಗರೀಕರ ಮೂಲಭೂತ ಹಕ್ಕುಗಳಿಗೆ ಧಕ್ಕೆ ತಂದಂತಾಗುತ್ತದೆ. ಇಷ್ಟಾದರೂ ಕೂಡ ನಮ್ಮ ಮಹಿಳಾ ಹಾಗೂ ಶಿಶು ಕಲ್ಯಾಣ ಇಲಾಖೆ ನಿದ್ದೆ ಮಾಡುತ್ತಿದೆ ಎಂದು ಕಾಣುತ್ತದೆ. ಈ ಖಾತೆಯ ಸಚಿವೆಯವರು ನನಗೆ ಗೊತ್ತಿರುವವರು. ಇವರು ಬಹಳ ಚಟುವಟಿಕೆಯಿಂದ, ಚುರುಕಿನಿಂದ ಓಡಾಡುವವರು; ಲಕ್ಷಣವಾಗಿ, ಅಲಂಕಾರವಾಗಿ ಇರುವವರು; ಆದರೆ ಅವರು ಈ ರೀತಿ ಹೆಣ್ಣು ಮಕ್ಕಳಿಗೆ ಅನ್ಯಾಯವಾಗುತ್ತಿರುವ ವಿಚಾರ ಪತ್ರಿಕೆಗಳಲ್ಲಿ ಬರುತ್ತಿದ್ದರೂ ಆ ಬಗ್ಗೆ ಒಂದೇ ಒಂದು ಹೇಳಿಕೆಯನ್ನು ಪತ್ರಿಕೆಗಳ ಮೂಲವಾಗಲೀ ಅಥವಾ ರೇಡಿಯೋ ಮೂಲಕವಾಗಲಿ ಕೊಟ್ಟದ್ದನ್ನು ನಾನು ಕಾಣಲಿಲ್ಲ.

ಈ ಬಗ್ಗೆ ರೇಡಿಯೋನಲ್ಲಿ ಭಾಷಣ ಮಾಡಬಹುದಾಗಿತ್ತು. ಆದರೆ ಅದನ್ನೂ ಸಹ ಮಾಡಲಿಲ್ಲ. ಈ ಖಾತೆಗೆ ೧೩, ೮೫, ೦೪,೭೦೦ ರೂಪಾಯಿಗಳನ್ನು ಕೇಳಿದ್ದಾರೆ ಈ ಹಣ ಏತಕ್ಕಾಗಿ ? ಸುಮ್ಮನೆ ಬಟವಾಡೆ ಮಾಡಲಿಕ್ಕಾ ? ಆ ರೀತಿ ಮಾಡುವುದಾದರೆ ಇದಕ್ಕೆ ಪ್ರತ್ಯೇಕ ಇಲಾಖೆ ಏತಕ್ಕೆ ಬೇಕು ? ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ಶಾಖೆ ಮಾಡಿ ಒಬ್ಬ ಅಧಿಕಾರಿಯನ್ನಿಟ್ಟಿದ್ದರೆ ಅವರು ಈ ಹಣ ಹಂಚುವ ಕೆಲಸ ಮಾಡುತ್ತಿದ್ದರು. ಸಚಿವರು ಪ್ರತ್ಯೇಕ ಮತ್ತು ಇಲಾಖೆ ಏತಕ್ಕೆ ಬೇಕು. ನಮ್ಮ ಮಾನ್ಯ ಸಚಿವೆಯವರನ್ನು ನೋಡಿದಾಗ ಈ ಖಾತೆಯನ್ನು ವಹಿಸಿಕೊಳ್ಳುವುದಕ್ಕೆ ಎಲ್ಲಾ ತರಹದ ಅರ್ಹತೆಯಿದೆಯೆಂದು ಕಾಣುತ್ತದೆ. ಅವರು ಮಹಿಳೆಯರಾಗಿದ್ದಾರೆ, ಅವರಿಗೆ ಮಕ್ಕಳಿವೆ. ಆದ್ದರಿಂದ ಈ ಖಾತೆಗೆ ಅವರು ಯೋಗ್ಯ ವ್ಯಕ್ತಿ. ಆದರೆ ಅವರಿಗೆ ಈ ಖಾತೆಯನ್ನು ನಡೆಸುವುದರಲ್ಲಿ ಚುರುಕುತನ ಇಲ್ಲ ಎಂದು ಪಶ್ಚಾತ್ತಾಪದಿಂದ ಮತ್ತು ಸಂಕಟದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದ ಮಹಿಳೆಯರ ಆರ್ತನಾದ ಇವರಿಗೆ ಕೇಳುವುದಿಲ್ಲವೇ ? ನಮ್ಮಂಥವರಿಗೆ ಪತ್ರಿಕೆ ಓದಿದ ತಕ್ಷಣ ಮನಸ್ಸಿಗೆ ಖೇದವಾಗುತ್ತದೆ. ಆದರೆ ಶ್ರೀಮತಿ ಮನೋರಮ ಮಧ್ವರಾಜ್ ಅವರಿಗೆ ಏನೂ ಆಗುವುದಿಲ್ಲವಲ್ಲ ಎಂದು ಆಶ್ಚರ್ಯವಾಗುತ್ತದೆ. ಇಷ್ಟೆಲ್ಲಾ ಇವರಿಗೆ ಅನುಕೂಲವಿದ್ದರೂ ಕೂಡ ಯೋಗ್ಯ ವ್ಯಕ್ತಿಗಳಾಗಿದ್ದರೂ ಕೂಡ ಏತಕ್ಕೆ ಮಹಿಳೆಯರ ರಕ್ಷಣೆಗೆ ಬರುತ್ತಿಲ್ಲ ? ಇವರು ನನಗೆ ಬೇಕಾದವರು. ಒಬ್ಬ ಮಹಿಳೆ ಸಚಿವೆಯಾಗಿರುವುದನ್ನು ನೋಡಿ ಸಂತೋಷಪಡುವವಳು ನಾನು ಸುದೈವದಿಂದ ಮಹಿಳೆಯರ ಬಗ್ಗೆ ಕನಿಕರ ಇರುವಂಥ ಪತಿ ಇವರಿಗೆ ಸಿಕ್ಕಿದ್ದಾರೆಂದು ಕೇಳಿದ್ದೇನೆ. ಆದರೆ ಇವರ ಮನೆಯವರನ್ನು ನಾನು ನೋಡಿಲ್ಲ. ಆದರೆ ಇವರ ಬಾಯಲ್ಲಿ ಬಂದ ಉದ್ಗಾರದಿಂದ ಇದು ತಿಳಿಯುತ್ತದೆ. ಶ್ರೀಮತಿ ಮನೋರಮ ಮಧ್ವರಾಜ್ ಅವರು ಒಂದು ಸಾರಿ ''ಪಾಪ ಗಂಡಸರು ಏನು ಮಾಡುತ್ತಾರೆ ?'' ಎಂದು ಹೇಳಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ. ಗಂಡಸರು ಎಂದರೆ ಬಹಳ ಒಳ್ಳೆಯವರು ಎಂಬ ಅನುಭವ ಇವರಿಗೆ ಬಂದಿದೆ.

ಶ್ರೀ ಜಿ. ಕೆ. ತಕ್ಕೇದ್.—ಗಂಡಸರ ಬಗ್ಗೆ ಏತಕ್ಕೆ ನಿಮಗೆ ಮತ್ಸರ ?

ಶ್ರೀಮತಿ ಅನಸೂಯ ಗಜಾನನ ಶರ್ಮ.—''ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ'' ಎಂದು ಸರ್ವಜ್ಞ ಕವಿ ಹೇಳಿದ್ದಾನೆ. ಹಾಗೆ ಇವರು ಹೇಗೆ ಸುಖದಲ್ಲಿದ್ದಾರೋ ಅದೇ ರೀತಿ ಎಲ್ಲಾ ಮಹಿಳೆಯರೂ ಇದ್ದಾರೆ ಎಂದು ಮಾನ್ಯ ಮಂತ್ರಿಗಳು ತಿಳಿದುಕೊಂಡಿದ್ದಾರೆ. ಇವರಂತೆ ಇರುವವರನ್ನು ನಾಲ್ಕು ಜನರನ್ನು ನೋಡಿದ್ದಾರೆ. ಎಲ್ಲರೂ ಸುಖವಾಗಿದ್ದಾರೆಂದು ತಿಳಿದುಕೊಂಡಿದ್ದಾರೆ. ಆದ್ದರಿಂದಲೇ ಈ ಖಾತೆಗೆ ಈ ದುರ್ದೆಸೆ ಬಂದಿದೆಯೆಂದು ಸಂಕಟದಿಂದ ಹೇಳಬೇಕಾಗಿದೆ. 'ಸುಧಾ' ವಾರ ಪತ್ರಿಕೆಯಲ್ಲಿ ''ಕೆಂಪು ದೀಪದ ಕೆಳಗೆ'' ಎಂಬ ಲೇಖನ ಬರುತ್ತಿತ್ತು ಇದನ್ನು ನೋಡಿದಾಗ ದೇವರು ಈ ಹೆಣ್ಣನ್ನು ಏತಕ್ಕೆ ಹುಟ್ಟಿಸಿದ್ದಾನೆ, ಇಂಥ ಪಿಶಾಚಿ ರಾಕ್ಷಸ ಗಂಡಸರ ಕೈಯಲ್ಲಿ ಏತಕ್ಕೆ ಕೊಟ್ಟಿದ್ದಾನೆ ಎಂದು ನನಗೆ ಅನ್ನಿಸುತ್ತದೆ.

ಶ್ರೀ ಜಿ. ಕೆ. ತಕ್ಕೇದ್.—ಪುನರ್ಜನ್ಮದಲ್ಲಿ ನಮ್ಮನ್ನು ಹೆಂಗಸರನ್ನಾಗಿ ಹುಟ್ಟಿಸಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಎಲ್ಲ ಗಂಡಸರೂ ರಾಕ್ಷಸರು, ಪಿಶಾಚಿಗಳು ಎಂದು ಹೇಳುವುದು ಸರಿಯಲ್ಲ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಕಳ್ಳನ ಮನಸ್ಸು ಉಳ್ಳುಳ್ಳಗೆ' ಎಂಬಂತೆ ಇವರಿಗೇಕೆ ?

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಸದಸ್ಯೆಯರು ಮಾತನಾಡುವಾಗ ಈ ಸದಸ್ಯರು ಮಾಡುವ ವರ್ತನೆ ನೋಡಿದಾಗ ಅವರು ಹೇಳುವುದು ಸರಿ ಎಂದೆನಿಸುತ್ತದೆ.

ಉಪಾಧ್ಯಕ್ಷರು.—ಮಧ್ಯೆ ಮಧ್ಯೆ ಬೇರೆಯವರು ಮಾತನಾಡುವುದು ಬೇಡ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿದಂತೆ ಏತಕ್ಕೆ ಮಾತನಾಡುತ್ತೀರಿ ? ನಾನು ಯಾವ ಸದಸ್ಯರ ಬಗ್ಗೆ ಹೇಳಲಿಲ್ಲ, 'ಸುಧಾ' ಪತ್ರಿಕೆಯಲ್ಲಿ 'ಕೆಂಪು ದೀಪದ ಕೆಳಗೆ' ಎಂಬ ಲೇಖನದಲ್ಲಿ ಹೆಣ್ಣು ಮಕ್ಕಳಿಗೆ ಗಂಡಸರು ಪಿಶಾಚಿಗಳಂತೆ ಚಿತ್ರಹಿಂಸೆ ಕೊಡುತ್ತಿದ್ದರು ಎಂದು ಬಂದಿದೆ. ಗಂಡನ ಕೈಯಿಂದ ತಪ್ಪಿಸಿಕೊಂಡು ಅನಾಥಾಶ್ರಮದಲ್ಲಿ ಇದ್ದವರನ್ನು ಜೈಲಿಗೆ ಹೋದವರನ್ನು ಸಂದರ್ಶನ ಮಾಡಿ ಲೇಖನ ಬರೆದಿದ್ದಾರೆ. ಇದೇನೂ ಪುರಾಣದ ಕಥೆಯಲ್ಲ. ಪ್ರತ್ಯಕ್ಷವಾಗಿ ಈ ಜಗತ್ತಿನಲ್ಲಿ ನಮ್ಮ ನಿಮ್ಮ ಕಾಲದಲ್ಲಿ ನಡೆದಂಥ ಘಟನೆ ಇದನ್ನೂ ಕೂಡ ಮಾನ್ಯ ಸಚಿವೆಯವರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಮನೆಯವರು ವಕೀಲರಿದ್ದಾರೆ. ಅವರ ಹತ್ತಿರ ಹೆಂಗಸರು ಡೈವೋರ್ಸ್ ಕೇಸ್ ವಿಷಯವಾಗಿ ಬಂದಾಗ ಎಂಥ ಕ್ಷುಲ್ಲಕ ಕಾರಣಗಳಿಗೆ ಗಂಡಸರು ಚಿತ್ರಹಿಂಸೆ ಕೊಡುತ್ತಾರೆಂಬುದನ್ನು ಕೇಳಿ ಬಹಳ ಆಶ್ಚರ್ಯವಾಗುತ್ತಿತ್ತು. ನಿಜವಾಗಿ ಹೆಣ್ಣುಮಕ್ಕಳೆಲ್ಲಾ ಒಂದು ಸಂಘ ಮಾಡಿಕೊಂಡು ಮದುವೆ ಆಗುವುದನ್ನೇ ನಿಲ್ಲಿಸಬೇಕೇನೋ ಎಂದೆನಿಸುತ್ತದೆ.

ಶ್ರೀ ವಿ. ಎಂ. ಮುತ್ತೀಕಟ್ಟಿ.—ಅದಕ್ಕೆ ಕುಮಾರಿ ಪ್ರಮೀಳ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಅಂಥ ಕಾಲ ಬರುತ್ತದೆ.

ಶ್ರೀ ವಿ. ಎಂ. ಮುತ್ತಿಕಟ್ಟಿ.—ಪ್ರಮೀಳ ಅವರನ್ನು ಆ ಸಂಘದ ಅಧ್ಯಕ್ಷರನ್ನಾಗಿ ಮಾಡಿ ಎಂದು ಸಲಹೆ ನೀಡುತ್ತಿದ್ದೇನೆ.

ಶ್ರೀಮತಿ ಮೋಟಮ್ಮ.—ಮದುವೆಯಾಗಿರುವವರಿಗೆ ಏನಾದರೂ ಪರಿಹಾರ ಹುಡುಕುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಾನು ಹೇಳುವುದು ನಿಮಗೆ ತಮಾಷೆಯಾಗಿ ಕಾಣಬಹುದು. ನಿತ್ಯಜೀವನದಲ್ಲಿ ನಡೆಯುತ್ತಿರುವುದನ್ನು ನೆನೆದರೆ ನಮ್ಮ ಹೃದಯದಲ್ಲಿ ಸಂಕಟ ಉಕ್ಕಿ ಬರುತ್ತದೆ. ಆದರೆ ನಿಮಗೆ ಹಾಸ್ಯದಂತೆ ಕಾಣುತ್ತದೆ. ನೀವು ಸುಖವಾಗಿರಬಹುದು. ಆದರೆ ನಿಮ್ಮ ಮನೆಯ ಪಕ್ಕದ ಮನೆಗಳಲ್ಲಿ, ನಿಮ್ಮ ಊರಿನಲ್ಲಿ ಹೀಗೆ ಇದೆಯಾ ? ಹೆಣ್ಣುಮಕ್ಕಳ ಕಣ್ಣೀರು ನಿಮಗೆ ಕಾಣುವುದಿಲ್ಲವೇ ? ಮಾನ್ಯ ಸಚಿವೆಯರು ಗಂಡಸರು ಏನು ಮಾಡುತ್ತಾರೆ ಎಂಬ ಉದ್ಗಾರವನ್ನು ತೆಗೆದಿದ್ದಾರೆ, ಇದು ಅವರ ಸ್ವಂತ ಅನುಭವ, ಅವರ ಅನುಭವ ಅಷ್ಟಕ್ಕೇ ಸೀಮಿತವಾಗಿರಬೇಕು. ಇನ್ನು ವರದಕ್ಷಿಣೆ ಪಿಡುಗಿನ ಬಗ್ಗೆ ಹೇಳುವುದಾದರೆ ಈ ವರದಕ್ಷಿಣೆಯಿಂದಾಗಿ ಅನೇಕ ಹೆಣ್ಣುಮಕ್ಕಳನ್ನು ಸುಡುತ್ತಿದ್ದಾರೆ. ನಾನು ಹೆಣ್ಣು ಎಂದು ಈ ರೀತಿಯೆಲ್ಲಾ ಹೇಳುತ್ತಿದ್ದೇನೆ ಎಂದು ತಿಳಿಯಬೇಡಿ. ನಿಮಗೆ ಹೃದಯ ಇದ್ದರೆ ಯೋಚನೆ ಮಾಡಿ. ನಿಮ್ಮ ಹೆಣ್ಣುಮಕ್ಕಳಿಗೆ ಲಗ್ನ ಮಾಡುವಾಗ ಇಂಥ ಕಟುಕರ ಕೈಯಲ್ಲಿ ಕೊಡಬಹುದೆಂದು ನಿಮಗನ್ನಿಸುತ್ತದೆಯೇ ? ಏನಾದರೂ ಆಗಲಿ, ಆ ಮದುವೆ ಮಾಡಿಕೊಳ್ಳುವುದೇ ಬೇಡ ಎಂದು ಹೇಳುವ ಕಾಲ ಬರುತ್ತದೆ. ನನಗೂ ತಂದೆ ತಾಯಿ ಅಣ್ಣ ತಮ್ಮ ಎಲ್ಲಾ ಇದ್ದಾರೆ, ಗಂಡು ಹೆಣ್ಣು ಸಮಾಜದಲ್ಲಿ ಒಟ್ಟಿಗೆ ಬಾಳತಕ್ಕವರು. ಆದರೆ ಈ ರೀತಿ ಅನ್ಯಾಯಗಳು ನಡೆಯುತ್ತಿರುವುದನ್ನು ನೋಡಿದಾಗ ಮನಸ್ಸಿಗೆ ತುಂಬಾ ನೋವಾಗುತ್ತದೆ. ಇಂಥ ಅನ್ಯಾಯಗಳು ನಡೆಯುತ್ತಿದ್ದರೂ ಮಾನ್ಯ ಸಚಿವೆಯವರಿಗೆ ಇದೆಲ್ಲಾ ಗೊತ್ತಿದ್ದರೂ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದು ವಿಚಾರ ಮಾಡುವ ಪ್ರಶ್ನೆ. ಮೇಲಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಹೆಣ್ಣುಮಕ್ಕಳ ಕಷ್ಟದ ಅರಿವಿದೆ. ಅವರಿಗೆ ಹೆಣ್ಣುಮಕ್ಕಳಿಗೆ ಒಳ್ಳೆಯ ಸ್ಥಾನಮಾನ ಕೊಡಬೇಕೆಂಬ ಮನಸ್ಸಿದೆ. ಅವರು ಮುಖ್ಯಮಂತ್ರಿಗಳಾದನಂತರ ಆರೇಳು ಹೆಣ್ಣುಮಕ್ಕಳಿಗೆ ಒಳ್ಳೆಯ ಸ್ಥಾನವನ್ನು ಕೊಟ್ಟಿದ್ದಾರೆ. ಕರೆದು ಗೌರವಿಸಿದ್ದಾರೆ. ಇಂಥ ಒಬ್ಬ ಮುಖ್ಯಮಂತ್ರಿಗಳಿರಬೇಕಾದರೆ ಮಾನ್ಯ ಮಂತ್ರಿಗಳು ಹೆಣ್ಣುಮಕ್ಕಳಿಗೆ ಬೇಕಾದಷ್ಟು ಉಪಕಾರ ಮಾಡಬಹುದಾಗಿತ್ತು. ಹೆಣ್ಣುಮಕ್ಕಳ ಕಣ್ಣೀರನ್ನು ಒರೆಸಬಹುದಾಗಿತ್ತು. ಇವರ ಸಂಕಷ್ಟದ ಪರಿಹಾರ ಮಾಡುವಲ್ಲಿ ಬೇಕಾದ ಯೋಜನೆಗಳನ್ನು ಹಾಕಿಕೊಂಡು ಪುಣ್ಯವನ್ನು ಕಟ್ಟಿಕೊಳ್ಳಬಹುದಾಗಿತ್ತು. ಇಂಥ ಅವಕಾಶದ ಸದುಪಯೋಗವನ್ನು ಪಡೆಯಲಿಲ್ಲವಲ್ಲ ಎಂದು ಪಶ್ಚಾತ್ತಾಪದಿಂದ ಹೇಳಬೇಕಾಗಿದೆ.

ಶ್ರೀ ಪಿ. ರಾಮದೇವ್.—ಹೆಣ್ಣುಮಕ್ಕಳಿಗೆ ಕಣ್ಣೀರೇ ಬಂಡವಾಳ, ಅದೂ ಹೋಗಿಬಿಟ್ಟರೆ ಮುಂದೇನು ಗತಿ ?

ಶ್ರೀಮತಿ ಅನಸೂಯ ಗಜಾನನ ಶರ್ಮ.—ಮಾನ್ಯ ಮಂತ್ರಿಗಳಿಗೇನೋ ನಾನು ಆಳುವ ಪಕ್ಷದಲ್ಲಿ ದ್ದೇನೆ, ಏನೂ ತೊಂದರೆಯಿಲ್ಲ ಎಂದೆನಿಸಬಹುದು, ಒಂದು ಸಾರಿ ನನ್ನನ್ನು ಮತ್ತು ಶ್ರೀಮತಿ ಪದ್ಮಾವತಿ ವಿಠ್ಠಲರಾವ್ ಅವರನ್ನು ಅರೆಸ್ಟ್ ಮಾಡಿಕೊಂಡುಹೋದಾಗ ಮಂತ್ರಿಗಳ ಪ್ರತಿಕ್ರಿಯೆ ಏತಕ್ಕೆ ಬರಲಿಲ್ಲ ? ಹುಬ್ಬಳ್ಳಿಯಲ್ಲಿ ಹೆಣ್ಣುಮಕ್ಕಳ ಮೇಲೆ ಲಾಠಿ ಚಾರ್ಜ್ ಆಯಿತು. ಅದರ ಬಗ್ಗೆಯೂ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಡಲಿಲ್ಲ, ಹಾಗೇನಾದರೂ ಹೇಳಿಕೆ ಕೊಟ್ಟಿದ್ದರೆ ಮಹಿಳೆಯರ ಪರವಾಗಿ ಒಬ್ಬ ಮಂತ್ರಿಯಿದ್ದಾರೆ ಅವರು ಅವರ ಬಲಕ್ಕೆ ಬರುತ್ತಾರೆ ಎಂಬ ಹೆದರಿಕೆ ಅಧಿಕಾರಿಗಳಿಗೆ ಬರುತ್ತಿತ್ತು. ಹೆಣ್ಣುಮಕ್ಕಳ ಮೇಲೆ ಏನಾದರೂ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಭಯ ಬರುತ್ತಿತ್ತು. ದರೆ ಅದನ್ನು ನಮ್ಮ ಮಂತ್ರಿಗಳು ಮಾಡಲಿಲ್ಲ, ನಮ್ಮನ್ನು ಹಿಂದೆ ವಿನಾಕಾರಣ ಅರೆಸ್ಟ್ ಮಾಡಿದ್ದರು.

ಈ ಬಗ್ಗೆ ಇವರ ಪ್ರತಿಕ್ರಿಯೆ ನನಗೆ ಕಾಣಲಿಲ್ಲ. ಹುಬ್ಬಳ್ಳಿಯಲ್ಲಿ ಹೆಣ್ಣುಮಕ್ಕಳ ಮೇಲೆ ಲಾಠಿ ಚಾರ್ಜು ಆಯಿತು. ಮುಸಲ್ಮಾನ್ ಹೆಣ್ಣುಮಕ್ಕಳು ಸಿನಿಮಾಕ್ಕೆ ಹೋಗುವುದನ್ನು ಪ್ರತಿಭಟನೆ ಮಾಡಿದಂತಹ ಒಬ್ಬ ಮಹಿಳಾ ಉಪಾಧ್ಯಾಯರನ್ನು ಸಸ್ಪೆಂಡ್ ಮಾಡಿದರು. ಈ ವಿಚಾರದಲ್ಲಿ ಇವರು ಆ ಶಾಲೆಗೆ ಒಂದು ಪತ್ರ ಬರೆಯಬಹುದಾಗಿತ್ತು. ಆದರೆ ಅದರ ಬಗ್ಗೆ ಏನೂ ಹೇಳಲಿಲ್ಲ. ನಮ್ಮ ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳಾ ಇಲಾಖೆಯು ಈ ರೀತಿ ಕೆಲಸ ಮಾಡುತ್ತಿದೆ. ಮಹಿಳೆ ಅಂದರೆ ಯಾರು ? ಹಗಲಿರಳು ತನ್ನ ಸಂಸಾರಕ್ಕಾಗಿ, ಗಂಡನಿಗಾಗಿ, ತಂದೆ ತಾಯಿಗಳಿಗಾಗಿ, ಅತ್ತೆ ಮಾವಂದಿರಿಗಾಗಿ, ಅಕ್ಕ ತಂಗಿಯರಿಗಾಗಿ, ಮಕ್ಕಳು ಮರಿಗಾಗಿ ದುಡಿದು ಜೀವವನ್ನು ಸವೆಸುವವಳು ಮಹಿಳೆ. ಇವಳ ಅಭಿವೃದ್ಧಿ ಬಗ್ಗೆ, ಅಭ್ಯುದಯದ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಯಾವ ರೀತಿಯ ಕಾರ್ಯ ಕ್ರಮಗಳನ್ನು ಹಾಕಿಸಿಕೊಂಡಿದೆ ? ೫೦೦ ರೂಪಾಯಿ ಸಂಪಾದನೆಯಲ್ಲಿ ತನ್ನ ಸಂಸಾರವನ್ನು ತೂಗಿಸ ತಕ್ಕ ಜಾಣ್ಮೆ ಮಹಿಳೆಯರಲ್ಲಿರುತ್ತದೆ. ಈತವಾದ ಜೀವನವನ್ನು ನಡೆಸಿಕೊಂಡು ಹೋಗುವುದರಲ್ಲಿ ಮಹಿಳೆಯರ ಪಾತ್ರ ದೊಡ್ಡದಾಗಿರುತ್ತದೆ. ತಾಯಿಯಾದವಳು ಇಡೀ ಕುಟುಂಬದ ಆರೋಗ್ಯದ ಕಡೆಗೆ ಗಮನ ಕೊಡಬೇಕಾಗುತ್ತದೆ. ಆದರೆ, ತಿಳುವಳಿಕೆ ಇಲ್ಲದ ಹೆಂಗಸಾದರೆ ಒಂದು ಸಾವಿರ ರೂಪಾಯಿಗಳ ಪಗಾರ ತಂದುಕೊಟ್ಟರೂ ಸಂಸಾರವನ್ನು ಸರಿಯಾಗಿ ನಡೆಸುವುದಕ್ಕೆ ಬರುವುದಿಲ್ಲ.

ಇವತ್ತು ದಿನಬೆಳಗಾದರೆ ವರದಕ್ಷಿಣೆಗೆ ಹೆಣ್ಣುಮಕ್ಕಳ ಬಲಿ ಎಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ನಮ್ಮ ಸಮಾಜ ಹೆಣ್ಣು ಮಕ್ಕಳನ್ನು ಯಾವರೀತಿ ನಡೆಸಿಕೊಳ್ಳುತ್ತಿದೆ ಎಂಬುದಕ್ಕೆ ಸಾವಿರಾರು ಹೆಣ್ಣು ಮಕ್ಕಳು ವರದಕ್ಷಿಣೆ ಪಿಡುಗಿಗೆ ಬಲಿಯಾಗಿರುವುದೇ ಸಾಕ್ಷಿಯಾಗಿದೆ. ವರದಕ್ಷಿಣೆಯನ್ನು ಕೊಡಲಿಲ್ಲವೆನ್ನುವ ಕಾರಣಕ್ಕಾಗಿ ಮುಗ್ಧ ಹೆಣ್ಣು ಮಕ್ಕಳಿಗೆ ಚಿತ್ರಹಿಂಸೆ ಕೊಟ್ಟು, ಉರುಲು ಹಾಕಿ ಸಾಯಿಸುವುದು, ಬೆಂಕಿ ಇಟ್ಟು ಸಾಯಿಸುವುದು, ಗಂಡನ ಮನೆಯಿಂದ ಓಡಿಸುವುದು, ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಹಿಂಸೆ ನೀಡುವುದನ್ನು ನೋಡಿದರೆ, ಇವರನ್ನು ಪಿಶಾಚಿಗಳು ಎಂದು ಕರೆದರೆ ತಪ್ಪೇನೂ ಆಗುವುದಿಲ್ಲ. ಇದನ್ನು ತಪ್ಪಿಸುವುದಕ್ಕೆ ಮಹಿಳಾ ಮತ್ತು ಮಕ್ಕಳ ಇಲಾಖೆ ಏನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ರೀತಿ ಹೆಣ್ಣುಮಕ್ಕಳನ್ನು ವಿನಾಕಾರಣ ಬಲಿ ತೆಗೆದುಕೊಂಡಂತಹ ವ್ಯಕ್ತಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಏನು ಶಿಕ್ಷೆ ವಿಧಿಸಿದ್ದೀರಿ ? ರಾಜ್ಯದಲ್ಲಿ ವರದಕ್ಷಿಣೆ ಪಿಡುಗಿಗೆ ಬಲಿಯಾಗಿರತಕ್ಕ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು ? ಇದರ ಬಗ್ಗೆ ಮಾನ್ಯ ಸಚಿವೆಯವರು ಸೂಕ್ತ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಹಿಂದೆ ಮಾರ್ಗದ ಮಲ್ಲಪ್ಪನವರು ಆರೋಗ್ಯ ಸಚಿವರಾಗಿದ್ದಾಗ ಒಂದು ದವಾಖಾನೆಯಲ್ಲಿ ತನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಂಥ ಹುಡುಗಿಯ ಮೇಲೆ ವೈದ್ಯರೊಬ್ಬರು ಅತ್ಯಾಚಾರ ಮಾಡಿದಂತ ಸಂದರ್ಭದಲ್ಲಿ, ಆ ಹುಡುಗಿ ಜೀವ ಕಳೆದುಕೊಂಡ ವಿಷಯ ಈ ಸದನದಲ್ಲಿ ಬಂದಾಗ ಮಾರ್ಗದ ಮಲ್ಲಪ್ಪನವರು ಮಹಿಳೆಯರ ಬಗ್ಗೆ ಸ್ವಲ್ಪ ಹಗುರವಾಗಿ ಮಾತನಾಡಿದ್ದರು.

೫–೩೦ ಪಿ.ಎಂ.

ಆಗ ಶ್ರೀಮತಿ ಸುಮತಿ ಮಡಿಮಾನ್ ಅವರು ಇದ್ದರು, ಅವರು ಆಡಳಿತ ಪಕ್ಷದಲ್ಲಿದ್ದರೂ ಹೆಣ್ಣು ಮಕ್ಕಳ ಬಗ್ಗೆ ರಕ್ಷಣೆ ಕೊಡಬೇಕೆಂದು ಹೇಳುತ್ತಿದ್ದರು, ಹೆಣ್ಣುಮಕ್ಕಳ ಕಲ್ಯಾಣಕ್ಕೆ ಅನ್ಯಾಯವಾದಾಗ ಆಳುವ ಪಕ್ಷ ಆಗಲಿ, ಯಾವ ಪಕ್ಷವೇ ಆಗಲಿ ಹೆಣ್ಣು ಮಕ್ಕಳ ಕಲ್ಯಾಣದ ಬಗ್ಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುವಂತಾದ್ದು ಇಲ್ಲಿ ಆಗಬೇಕು. ಇವೊತ್ತು ಯಾವ ಹೆಣ್ಣಿಗೆ ತೊಂದರೆಯಾದರೂ ಆ ಸಂದರ್ಭದಲ್ಲಿ ನಾವು ಆ ಜಾತಿ, ಈ ಜಾತಿ ಅಂಥ ನೋಡುತ್ತೇವೇನು ? ಅದೇ ರೀತಿಯ ಒಂದು ಮಾನವೀಯತೆಯ ದೃಷ್ಟಿ ಎಲ್ಲರಲ್ಲೂ ಬೆಳೆಯಬೇಕು. ಮಾನ್ಯ ಹಾವನೂರ್ ಅವರು ಸಚಿವರು ಆಗಿದ್ದಾಗ, ಮುಸಲ್ಮಾನ್ ಹೆಂಗಸರಿಗೆ ಅವಮಾನ ಆಯಿತು ಅಂಥ ಹೇಳಿದ ಸಂದರ್ಭದಲ್ಲಿ ಅವರು ಕೂಡ ಸಮಾಜ ಕಲ್ಯಾಣ ಸಚಿವರಾಗಿ ಯೋಗ್ಯವಾದ ಭಾಷಣ ಮಾಡಿದ್ದರು. ಹೆಣ್ಣುಮಕ್ಕಳ ಪರಿಸ್ಥಿತಿಯ ಬಗ್ಗೆ ಕನಿಕರಪಟ್ಟು ಮಾತನಾಡಿದ್ದರು, ನಾನು ಅವರ ಎದುರು ಬೆಂಚಿನಲ್ಲಿದ್ದರೂ ಕೂಡ ನಾನು ಆಗ ಅವರಿಗೆ ಫಾರ್ ಆಗಿ ಮಾತನಾಡಿದ್ದೇನೆ, ಅವರು ಹೆಣ್ಣುಮಕ್ಕಳ ಬಗ್ಗೆ ಕನಿಕರಪಟ್ಟು ಏನು ಮಾತನಾಡಿದ್ದರು ಅದನ್ನು ನಾನು ಡಿಫೆಂಡ್ ಮಾಡಿದ್ದೇನೆ. ಮಹಿಳಾ ಮತ್ತು ಶಿಶು ಕಲ್ಯಾಣ ಖಾತೆ, ನಮ್ಮ ರಾಜ್ಯದ ಹೆಣ್ಣುಮಕ್ಕಳು, ನಮ್ಮ ಮಕ್ಕಳು ಎನ್ನುವ ತರದಲ್ಲಿ ನೋಡಬೇಕು. ಆದರೆ ಆ ರೀತಿಯಲ್ಲಿ ಅವರು ನೋಡಿಕೊಂಡಿಲ್ಲ ಎಂದು ಹೇಳುತ್ತೇನೆ. ಪದ್ಮಕ್ಕನ ಪ್ರಕರಣದಲ್ಲಿ ಕುಮಾರಿ ಪ್ರಮಿಳಾ ಅವರು ಮಾನ್ಯ ಸಚಿವರು ರಾಜೀನಾಮೆ ಕೊಡಬೇಕೆಂದು ಅಲ್ಲಿಯೇ ಕುಳಿತು ಹೇಳಿದ್ದಾರೆ. ಕುಮಾರಿ ಪ್ರಮಿಳಾ ಅವರು ಹೆಣ್ಣುಮಕ್ಕಳಿಗೆ ಏನಾದರೂ ಅನ್ಯಾಯವಾದಂಥ ವಿಚಾರ ಬಂದರೆ ಚಡಪಡಿಸುತ್ತಾರೆ. ಅವರೇನಾದರೂ ಈ ಖಾತೆಯ ಸಚಿವರಾಗಿದ್ದರೆ ಹೆಣ್ಣುಮಕ್ಕಳಿಗೆ ಚಿತ್ರಹಿಂಸೆ ಕೊಡುವವರಿಗೆ ಬಹಳ ಕಷ್ಟವಾಗುತ್ತಿತ್ತು. ಹೆಣ್ಣುಮಕ್ಕಳಿಗೆ ಅನ್ಯಾಯವಾದಾಗ ಅದರ ಬಗ್ಗೆ ನಾವು ಸರ್ಕಾರವನ್ನು ಎಚ್ಚರಿಸಬೇಕಾದ್ದು ನಮ್ಮ ಕರ್ತವ್ಯ. ಹೆಣ್ಣುಮಕ್ಕಳ ಬಗ್ಗೆ ಅನ್ಯಾಯವಾದಂಥ ವಿಚಾರಗಳು ಪತ್ರಿಕೆಗಳಲ್ಲಿ ಬರುತ್ತಾ ಇರುತ್ತವೆ, ಇವರು ಹೆಣ್ಣುಮಕ್ಕಳಿಗೆ ರಕ್ಷಣೆ ಮಾಡುತ್ತಿಲ್ಲ ಎನ್ನುವುದನ್ನು ನಾನು ಬಹಳ ಪಶ್ಚಾತ್ತಾಪದಿಂದ ಹೇಳುತ್ತಿದ್ದೇನೆ. ಇವೊತ್ತು ವರದಕ್ಷಿಣೆ ಪಿಡುಗಿನಿಂದ ಹೆಣ್ಣುಮಕ್ಕಳಿಗೆ ಬಹಳ ಅನ್ಯಾಯವಾಗುತ್ತಿದೆ, ಇದರ ಬಗ್ಗೆ ತಾವು ಮನಸ್ಸು ಮಾಡಿ ಕ್ರಮ ತೆಗೆದುಕೊಳ್ಳುವ ದಿಸೆಯಲ್ಲಿ ಪ್ರಯತ್ನ ಮಾಡಿದರೆ ಈಗಿಂದೀಗಲೇ ಸರಿ ಹೋಗುತ್ತದೆಂದು ನಾನು ಹೇಳುವುದಿಲ್ಲ, ಆದರೆ ಇನ್ನು ೧೦–೧೫ ವರ್ಷಗಳಲ್ಲಾದರೂ ಅವರಿಗೆ ಒಂದು ಸುರಕ್ಷತೆ ಸಿಕ್ಕುತ್ತದೆ. ಹೆಣ್ಣುಮಕ್ಕಳನ್ನು ಸಮಾಜ ನೋಡತಕ್ಕ ದೃಷ್ಟಿ ಪರಿವರ್ತನೆಯಾಗಿ, ಸಮಾಜದಲ್ಲಿ ಹೆಣ್ಣುಮಕ್ಕಳು ಸರಿಸಮಾನರು, ಅವರಿಗೂ ಒಳ್ಳೆಯ ಸ್ಥಾನ ಇದೆ, ಬುದ್ಧಿ ಇದೆ, ಹೃದಯ ಇದೆ ಎನ್ನುವ ತಿಳುವಳಿಕೆ ಸಮಾಜದಲ್ಲಿ ಬರಲಿಕ್ಕೆ ಅವಕಾಶವಾಗುತ್ತದೆ. ಇನ್ನು ಹಿಂದೆ ವಿಶ್ವ ಕುಟುಂಬ ಕಲ್ಯಾಣ ಯೋಜನೆ ಎಂಬ ಹೆಸರಿನ ಖಾತೆ ಇತ್ತು, ಈಗ ಅದು ಎಲ್ಲಿದೆಯೋ ಗೊತ್ತಿಲ್ಲ, ನಮ್ಮ ಶಿರಸಿ ಕಡೆ ಮೊದಲು ಇತ್ತು. ಅವರು ಏನು ಕೆಲಸ ಮಾಡುತ್ತಿದ್ದರು ಅಂದರೆ ಹಳ್ಳಿ ಹಳ್ಳಿಗಳಿಗೆ ಹೋಗಿ ಮನೆಗಳಲ್ಲಿ ಉಳಿದುಕೊಂಡು ಅವರ ಗುರುತು ಪರಿಚಯ ಮಾಡಿಕೊಂಡು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಉಪದೇಶ ಮಾಡುತ್ತಿದ್ದರು. ಅವರಿಗೆ ಗೊತ್ತಾಗದಂತೆ ಮನಸ್ಸನ್ನು ಪರಿವರ್ತನೆ ಮಾಡುತ್ತಿದ್ದರು. ಅದೇ ರೀತಿ ಸೇವಾನಿರತ ಕಾರ್ಯಕರ್ತರ ಖಾತೆಯನ್ನು ತೆರೆಯಿರಿ, ಪಗಾರಕ್ಕೋಸ್ಕರ ದುಡಿಯುವವರು ಬೇಡ, ಈ ಕೆಲಸವನ್ನು ಮಹಿಳಾ ಕಲ್ಯಾಣ ವತಿಯಿಂದ ನಡೆಸಬೇಕು, ಪ್ರತಿ ಊರು ಹಳ್ಳಿಗಳಿಗೆ ಹೋಗಿ ಹೆಣ್ಣುಮಕ್ಕಳ ಬಗ್ಗೆ ಜನರಲ್ಲಿರತಕ್ಕ ಭಾವನೆಯನ್ನು ದೂರ ಮಾಡಬೇಕು. ಹಿಂದೆ ಹೆಣ್ಣುಮಕ್ಕಳು ಪತಿವ್ರತೆಯರಾಗಿ ಪತಿ ಪೂಜೆ ಮಾಡಬೇಕೆಂದು ಹೇಳುತ್ತಿದ್ದರು ಹಿಂದಿನ ಕಾಲದಲ್ಲಿ ಗಂಡಸರೂ ಕೂಡ ಪತ್ನಿಗೆ ಅಷ್ಟೇ ನಿಷ್ಠಾವಂತರಾಗಿದ್ದರು. ಇವೊತ್ತು ಈ ಇಲಾಖೆ ಡಿಮ್ಯಾಂಡ್‌ನಲ್ಲಿ ಇಟ್ಟಂತಹ ಹಣವನ್ನು ಹಂಚಿದರೆ ಈ ಕೆಲಸ ಏನೂ ಆಗುವುದಿಲ್ಲ, ಈಗ ಹೆಣ್ಣುಮಕ್ಕಳಿಗೆ ಏನು ಅನ್ಯಾಯವಾಗುತ್ತಿದೆ ಆ ಬಗ್ಗೆ ಹೆಣ್ಣುಮಕ್ಕಳ ಕಲ್ಯಾಣಕ್ಕೆ ಇರತಕ್ಕ ಖಾತೆ ಕೆಲಸ ಮಾಡಬೇಕಾಗುತ್ತದೆ. ಇವೊತ್ತು ಬೇರೆ ಬೇರೆ ಖಾತೆಗಳ ಮಂತ್ರಿಗಳು ಇಲ್ಲಿದ್ದಾರೆ, ಅವರಿಗೆ ಏನಾದರೂ ತೊಂದರೆ ಆದರೆ ಏನು ಮಾಡಬೇಕೆಂದು ತಿಳಿಯದೇ ಇದ್ದಾಗ ಬೇರೆ ರಾಜ್ಯದ ಮಂತ್ರಿಗಳೊಡನೆ ತಿಳಿದುಕೊಂಡು ಬರುತ್ತಾರೆ, ಇವೊತ್ತು ಮಹಿಳೆಯರಿಗೆ ಅನೇಕ ತೊಂದರೆಗಳು ಇರುತ್ತವೆ, ಇವುಗಳನ್ನು ಪರಿಹಾರ ಮಾಡಲಿಕ್ಕೆ ನಮ್ಮ ರಾಜ್ಯದಲ್ಲಿ ಅನೇಕ ಹಿರಿಯರು ತಿಳಿದವರು, ಸಂಘಸಂಸ್ಥೆಗಳವರು ಇದ್ದಾರೆ, ಅವರ ಕಡೆ ಹೋಗಿ ವಿಚಾರಿಸಿ ಪರಿಹಾರ ಮಾಡುವ ಬಗ್ಗೆ ವಿಚಾರವಿನಿಮಯ ಮಾಡಬಹುದು, ಬೇರೆ ರಾಜ್ಯದ ಸಚಿವರನ್ನು ಈ ಖಾತೆಗೆ ಸಂಬಂಧಪಟ್ಟವರನ್ನು ಕರೆಸಿ ವಿಚಾರವಿನಿಮಯ ಮಾಡಬಹುದು, ಅಥವಾ ಇವರೇ ಅಲ್ಲಿ ಹೋಗಿ ನೋಡಬಹುದು,

ಇವರ ಬಳಿ ಒಂದು ದೊಡ್ಡ ಡಿಪಾರ್ಟ್‌ಮೆಂಟ್ ಇದೆ, ಬೇಕಾದಷ್ಟು ವಿಚಾರಗಳು ಪತ್ರಿಕೆಗಳಲ್ಲಿ ಬರುತ್ತದೆ. ಜಗತ್ತಿನ ಇತರೇ ರಾಷ್ಟ್ರಗಳಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ತಿಳಿದುಕೊಂಡು, ಹೆಣ್ಣು ಮಕ್ಕಳ ಹಕ್ಕುಬಾಧ್ಯತೆ ಹಾಗೂ ಸರಿಸಮಾನತೆಯನ್ನು ಕಾಪಾಡಿಕೊಂಡು ಹೋಗಲಿಕ್ಕೆ ಏನಾದರೂ ಒಂದು ಕಾರ್ಯಕ್ರಮ ಮಾಡಬಹುದಿತ್ತು. ಆದರೆ ಅದನ್ನು ಮಾಡಿಲ್ಲ. ಇನ್ನು ತಮಗೆ ಕೇವಲ ಕೆಲವೇ ದಿವಸಗಳ ಅಧಿಕಾರ ಇದೆ. ಅಷ್ಟರಲ್ಲಿ ಈ ಕೆಲಸ ಮಾಡಬೇಕು. ನಾನು ಹಿಂದೆ ಒಂದು ಸಾರಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ, ಗುಜರಾತಿನಲ್ಲಿರತಕ್ಕ ಒಂದು ಸಂಸ್ಥೆಯ ಬಗ್ಗೆ ಹೇಳಿದ್ದೆ. ಆ ವಿಚಾರ ಕಸ್ತೂರಿಯಲ್ಲಿ ಬಂದಿತ್ತು ಅಂಥ ಕಾಣುತ್ತದೆ. ಅಲ್ಲಿರತಕ್ಕ ಸಂಸ್ಥೆ ಹೆಣ್ಣುಮಕ್ಕಳಿಗೋಸ್ಕರ ಕೆಲಸ ಮಾಡತಕ್ಕಂಥ ಸಂಸ್ಥೆ. ಇವೊತ್ತು ಹೆಣ್ಣುಮಕ್ಕಳಿಗೆ ಸಂಸಾರದಲ್ಲಿ ತೊಂದರೆ ಬರತಕ್ಕಂತಾದ್ದು ಇದೆ. ಇವೊತ್ತು ವಿಧವೆಯರು ಅನಾಥೆಯರ ವಿಚಾರವೇ ಒಂದು ರೀತಿಯಾದರೆ, ಸಂಸಾರದಲ್ಲಿಯೇ ಇದ್ದು ನೋಡುವವರಿಗೆ ಒಳ್ಳೆಯ ಮರ್ಯಾದೆಯಿಂದ, ಗೌರವದಿಂದ ಸಂಸಾರ ನಡೆಸುತ್ತಿದ್ದಾರೆ ಅಂಥ ಕಾಣುತ್ತಾರೆ, ಆದರೆ ಅವರು ಒಳಗಿಂದೊಳಗೆ ಪಡತಕ್ಕ ಚಿತ್ರಹಿಂಸೆ ಯಾರ ಹತ್ತಿರವೂ ಹೇಳಲಿಕ್ಕೆ ಸಾಧ್ಯವಿಲ್ಲ, ಅವರ ಗಂಡಸರು ಕೆಟ್ಟ ಚಟಕ್ಕೆ ಬಿದ್ದಿರುತ್ತಾರೆ ಈ ಕಾರಣದಿಂದ ಆ ಗಂಡಸರಿಗೆ ಸಾವಿರ ರೂಪಾಯಿ ಸಂಪಾದನೆಯಾದರೂ ಸಂಸಾರಕ್ಕೆ ದುಡ್ಡು ಕೊಡುವುದಿಲ್ಲ, ಅವರು ಅವರ ಪರಿಸ್ಥಿತಿಯನ್ನು ಜನರ ಮುಂದೆ ಹೇಳುವ ಪರಿಸ್ಥಿತಿ ಇರುವುದಿಲ್ಲ. ಈ ರೀತಿಯ ಕಷ್ಟಪರಿಸ್ಥಿತಿಯಲ್ಲಿರತಕ್ಕ ಮಹಿಳೆಯರ ನೆರವಿಗಾಗಿ ಗುಜರಾತಿನಲ್ಲಿರತಕ್ಕ ಸಂಸ್ಥೆ ಮುಂದೆ ಬರುತ್ತದೆ. ಆ ಸಂಸ್ಥೆಗೆ ಸೊಸೆ ಹೋಗಿ ಅತ್ತೆ, ಗಂಡನ ವಿಚಾರ, ಮಗನ ವಿಚಾರ ಯಾವುದೇ ತೊಂದರೆ ಇದ್ದರೂ ಹೇಳಿಕೊಳ್ಳಬಹುದು. ಆಗ ಅವರು ಮನೆಯವರನ್ನು ಸಂಪರ್ಕಿಸಿ, ಸುಧಾರಿಸಲಿಕ್ಕೆ ನೋಡುತ್ತಾರೆ. ಸಾಧ್ಯವಾಗದೇ ಇದ್ದರೆ ಅವರೇ ಕೋರ್ಟಿನಲ್ಲಿ ಕೇಸು ಹಾಕುತ್ತಾರೆ. ಹೆಣ್ಣುಮಕ್ಕಳ ಹತ್ತಿರ ದುಡ್ಡು ಇಲ್ಲದೇ ಇರುವುದರಿಂದ. ಅವರೇ ಕೋರ್ಟಿಗೆ ಹೋಗಿ ಆ ಜಡ್ಜ್ ಮುಂದೆ ಇದ್ದಂಥ ಪರಿಸ್ಥಿತಿಯನ್ನು ಹೇಳುತ್ತಾರೆ. ಇಂಥ. ಎಷ್ಟೋ ಕೇಸುಗಳು ಫಾರ್ ಆಗಿದ್ದನ್ನು ನಾವು ಓದಿದ್ದೇವೆ.

ಆ ಸಂಸ್ಥೆಯವರ ಕೈಯಲ್ಲಿ ಹಣ ಇದೆ. ಇಂಥ ಒಂದು ಸಂಸ್ಥೆಯನ್ನು ಇಲ್ಲಿಯೂ ಸ್ಥಾಪನೆ ಮಾಡಿ ನಮ್ಮ ಹೆಣ್ಣು ಮಕ್ಕಳ ಕಣ್ಣೀರನ್ನು ಅವರ ಸೆರಗಿನಿಂದ ಒರೆಸುವ ಕೆಲಸ ಮಾಡಬೇಕಾಗಿತ್ತು. ಹೋಗಲಿ, ಇನ್ನು ಮುಂದಾದರೂ ಮಾಡಿ ಎಂದು ಒತ್ತಾಯದಿಂದ ಹೇಳುತ್ತಿದ್ದೇನೆ. ನಮ್ಮ ಸುತ್ತಮುತ್ತ ಇರತಕ್ಕ ಹೆಣ್ಣು ಮಕ್ಕಳು ಕಣ್ಣೀರಿಡುವುದನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ ನಾವು ನಿಸ್ಸಹಾಯಕರು, ಗಂಡ ಕುಡಿತದ ಚಟಕ್ಕೆ ಬಿದ್ದು ಪ್ರತಿದಿನ ಕುಡಿದು ಬಂದು ಹೆಂಡತಿಯನ್ನು ಹೊಡೆಯುತ್ತಾನೆ ಚಿತ್ರ ಹಿಂಸೆ ಕೊಡುತ್ತಾನೆ. ತಮಗೆ ಒಂದು ಉದಾಹರಣೆ ಕೊಡುವುದಾದರೆ, ಸಿರ್ಸಿಯಲ್ಲಿ ನಾವು ವಾಸವಾಗಿದ್ದ ಹಿಂದಿನ ಬೀದಿಯಲ್ಲಿ ಪರಿಶಿಷ್ಟ ಜನಾಂಗದ ಒಂದು ಮನೆ ಇತ್ತು. ರಾತ್ರಿ ಒಂದು ಗಂಟೆಯ ಮೇಲೆ ಆಕೆಯ ಗಂಡ ಚೆನ್ನಾಗಿ ಕುಡಿದು ಬಂದು ಆಕೆಯನ್ನು ಚೆನ್ನಾಗಿ ಹೊಡೆಯುತ್ತಿದ್ದ. ಆಕೆಯ ಚೀರಾಟ, ನರಳಾಟಗಳನ್ನು ಕೇಳಲಾಗದೆ ನಾನೇ ಹೋಗಿ ಆತನಿಗೆ ಹೇಳಿಬಿಡೋಣ ಎಂದು ಎಷ್ಟೋಸಾರಿ ಮನಸ್ಸು ಮಾಡಿದ್ದೆ. ಆದರೆ ಆತ ಚೆನ್ನಾಗಿ ಕುಡಿದಿರುತ್ತಾನೆ, ನಾವು ಹೇಳುವುದಕ್ಕೆ ಹೋದಾಗ ನಮಗೆ ಬೆಲೆಯನ್ನು ಕೊಡದೆ ಬಾಯಿಗೆ ಬಂದಂತೆ ಬೈದರೆ ಏನು ಮಾಡುವುದು ? ಆಕೆಯನ್ನು ನಮ್ಮ ಮನೆಗೆ ಕರೆದುಕೊಂಡು ಬರೋಣವೆಂದರೆ, ನಾಳೆ ಮತ್ತೆ ಆ ಗಂಡನ ಜೊತೆಯಲ್ಲೇ ಸಂಸಾರ ಮಾಡಬೇಕಾಗುತ್ತದೆ, ಅಲ್ಲದೆ ಆಕೆಗೆ ನಾಲ್ಕಾರು ಮಕ್ಕಳು ಬೇರೆ ಇದ್ದವು. ಇಂಥ ಕುಡುಕ ಗಂಡನ ಜೊತೆಯಲ್ಲಿ ಹೇಗೆ ಸಂಸಾರ ಮಾಡಬೇಕೆಂಬುದು ಯಾರಿಗೂ ಅರ್ಥವಾಗುವುದಿಲ್ಲ, ನಾನು ಇದನ್ನು ಎಷ್ಟು ಹೇಳಿದರೂ ಕಡಿಮೆಯೇ ಆಗುತ್ತದೆ. ಆಕೆಯನ್ನು ಈ ಸಂಕಷ್ಟದಿಂದ ಪಾರು ಮಾಡುವುದು ಹೇಗೆ ಎಂದು ನನಗೆ ಅದೇ ಒಂದು ಯೋಚನೆಯಾಗಿತ್ತು. ಅವನು ತನಗೆ ಕೈಗೆ ಸಿಕ್ಕಿದ್ದರಲ್ಲಿ ಹೆಂಡತಿಯನ್ನು ಹೊಡೆಯುತ್ತಿದ್ದ. ಆಕೆಗೆ ಏನಾದರೂ ಹೆಚ್ಚೂ ಕಡಿಮೆ ಆದರೆ, ತಾನೇ ದವಾಖಾನೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿಕೊಂಡು ಬರುತ್ತಿದ್ದ. ಇಂಥ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಹೆಣ್ಣು ಮಕ್ಕಳು ತಮ್ಮ ಜೀವನವನ್ನು ನಡೆಸುತ್ತಿವೆ. ಇನ್ನು ಕೆಲವರು ಇದನ್ನೆಲ್ಲಾ ಹೇಳಿಕೊಂಡರೆ ಸಮಾಜದಲ್ಲಿ ತಾವು ಹಗುರವಾಗುತ್ತೇವೆಂದು ಭಾವಿಸಿ ಬಾಯಿ ಮುಚ್ಚಿಕೊಂಡು ಉಪವಾಸವಾದರೂ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಸ್ವಾಮಿ, ನನಗೆ ತಿಳಿಸಿರುವಂತೆ ಗುಜರಾತಿನಲ್ಲಿ ಒಂದು ಸಂಸ್ಥೆ ಇದೆ. ಆ ಸಂಸ್ಥೆಯವರು ಹೆಣ್ಣು ಮಕ್ಕಳ ಪುರೋಭಿವೃದ್ಧಿಗಾಗಿ, ಅವರ ಹಿತರಕ್ಷಣೆಗಾಗಿ ಹೋರಾಡುತ್ತಾರೆ. ಅಂಥದೇ ಒಂದು ಸಂಸ್ಥೆಯನ್ನು ನಮ್ಮ ರಾಜ್ಯದಲ್ಲೂ

ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಕ್ರಿಶ್ಚಿಯನ್ ಸಮಾಜದಲ್ಲಿ ಲಗ್ನ ಆಗದಿರುವ ಹೆಣ್ಣು ಮಕ್ಕಳು ವಿಧವೆಯರು ಯಾರೇ ಇದ್ದರೂ, ಅವರು ಸಮಾಜದಲ್ಲಿ ಬಹಳ ಗೌರವದಿಂದ ಎಲ್ಲರೊಡನೆ ಸರಿಸಮಾನವಾಗಿ ಬಾಳುವೆ ಮಾಡುವ ವ್ಯವಸ್ಥೆ ಇದೆ. ಆದರೆ ನಮ್ಮ ಹಿಂದೂ ಸಮಾಜದಲ್ಲಿ ಅಂಥ ಒಂದು ಅವಕಾಶ, ವ್ಯವಸ್ಥೆ ಇಲ್ಲ. ಕ್ರಿಶ್ಚಿಯನರಿಗೆ ಸಂಬಂಧಪಟ್ಟಂಥ ಸ್ಕೂಲುಗಳು, ದವಾಖಾನೆಗಳು ಎಲ್ಲೆಲ್ಲಿರುತ್ತವೆ. ಅಂಥ ಕಡೆಗೆ ಈ ಸಂಸ್ಥೆಯಿಂದಲೇ ಸಿಸ್ಟರ್ಸ್, ನರ್ಸ್ ಹೋಗಿ ಪಾಠ ಮಾಡುವುದು, ರೋಗಿಗಳ ಸೇವೆ ಮಾಡುವುದು ಮುಂತಾದ್ದನ್ನು ಮಾಡುತ್ತಾರೆ. ಅವರಲ್ಲಿ ಮೇಲು ಕೀಳೆಂಬ ಭಾವನೆಯೇ ಬರುವುದಿಲ್ಲ. ನಮ್ಮ ರೀತಿಯಲ್ಲಿ ಸಂಸಾರದಲ್ಲಿ ಅವರು ಕಷ್ಟಪಡುವ ಪ್ರಸಂಗವೇ ಬರುವುದಿಲ್ಲ. ನಮ್ಮಲ್ಲಿ ಅರವಿಂದರ ಆಶ್ರಮದಲ್ಲಿ ಇಂಥಾದ್ದು ನಡೆಯುತ್ತಿದೆ. ಅಲ್ಲಿ ಎಲ್ಲರೂ ಸೇವಕರು, ಅವರು ತಮ್ಮ ಡಾಕ್ಟರ್‌ಗಳಿಗೆ ಪಗಾರವನ್ನೇ ಕೊಡುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ನಮ್ಮಂಥ ಅತಿಥಿಗಳು ಹೋದರೆ ಬೇರೆ ರೀತಿಯ ಊಟವನ್ನು ಹಾಕುತ್ತಾರೆ. ಅಲ್ಲಿರತಕ್ಕವರೆಲ್ಲಾ ಒಂದು ರೀತಿಯ ಊಟವನ್ನು ತಿನ್ನುತ್ತಾರೆ. ಅವರಲ್ಲಿ ಯಾವುದೇ ಬೇಧಭಾವವಿಲ್ಲ. ಈಗಂತೂ ನಮ್ಮಲ್ಲಿ ವರದಕ್ಷಿಣೆಯ ಪಿಡುಗು ಬಹಳವಾಗಿದೆ. ವರದಕ್ಷಿಣೆ ಇಲ್ಲದೆ ಹೆಣ್ಣು ಮಕ್ಕಳ ಲಗ್ನವಂತೂ ಆಗುವುದೇ ಇಲ್ಲ. ಈ ಬಗ್ಗೆ ನಾವು ಪ್ರತಿನಿತ್ಯ ಪತ್ರಿಕೆಗಳಲ್ಲಿ ನೋಡುತ್ತಲೇ ಇರುತ್ತೇವೆ. ಇತ್ತೀಚೆಗೆ ವರದಕ್ಷಿಣೆಯನ್ನು ಮಾವ ಸರಿಯಾಗಿ ಕೊಡಲಿಲ್ಲವೆಂದು ಆತ ತನ್ನ ಹೆಂಡತಿಯನ್ನೇ ಸುಟ್ಟುಹಾಕಿದ. ಇನ್ನೊಂದು ಕಡೆ ತೌರುಮನೆಯಿಂದ ಹೆಂಡತಿ ತನಗೆ ಬರಬೇಕಾದ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬರಲಿಲ್ಲವೆಂದು ಆಕೆಗೆ ಹಿಂಸೆ ಕೊಡುತ್ತಿದ್ದುದರಿಂದ ಆ ಹೆಣ್ಣು ಮಗಳು ತನ್ನ ಕುತ್ತಿಗೆಗೆ ಉರುಳು ಹಾಕಿಕೊಂಡರು. ಇಂಥ ನಿದರ್ಶನಗಳು ದಿನಬೆಳಗಾದರೆ ಕೇಳಿಬರುತ್ತಿರುವುದರಿಂದ ಓದನ್ನು ಕಲಿತ ಹೆಣ್ಣು ಮಕ್ಕಳು ಇತ್ತೀಚೆಗೆ ಮದುವೆ ಆಗುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಇಂಥವರು ಇನ್ನು ಮುಂದೆ ಎಲ್ಲರೊಂದಿಗೆ ಗೌರವದಿಂದ ಬಾಳುವೆ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಇರುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಮಹಿಳಾ ಮತ್ತು ಶಿಶುಕಲ್ಯಾಣ ಖಾತೆಗೋಸ್ಕರ ಕೋಟಿಗಟ್ಟಲೆ ಹಣವನ್ನು ಕೇಳಿದ್ದಾರೆ. ಈ ಖಾತೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡ ಬಯಸುತ್ತೇನೆ. ಏನೆಂದರೆ ಅನಾಥ ಮಕ್ಕಳಿಗೆ, ದಿಕ್ಕಿಲ್ಲದೆ ಮಹಿಳೆಯರಿಗೆ, ಶಿಕ್ಷೆಯನ್ನು ಅನುಭವಿಸಿ ಜೈಲಿನಿಂದ ಬಿಡುಗಡೆ ಹೊಂದಿ ಬಂದವರಿಗೆ, ಸಮಾಜದಲ್ಲಿ ಗೌರವದಿಂದ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಮಹಿಳೆಯರಿಗೆ ವರದಕ್ಷಿಣೆಯ ಪಿಡುಗಿನಿಂದ ಆಗಬಹುದಾದ ತೊಂದರೆಗಳನ್ನು ತಪ್ಪಿಸಲು ಸೂಕ್ತ ರೀತಿಯಲ್ಲಿ ಈಗಿನ ಕಾಯಿದೆಯನ್ನು ತಿದ್ದುಪಡಿ ಮಾಡಲು ಕಾನೂನು ತಜ್ಞರ ಸಲಹೆಯನ್ನು ಪಡೆಯಬೇಕು. ನಮ್ಮ ಹೆಣ್ಣು ಮಕ್ಕಳಿಗೆ ಲಗ್ನವಾಗದಿದ್ದರೆ ಅವರು ಸಮಾಜದಲ್ಲಿ ಗೌರವದಿಂದ ಜೀವನ ಮಾಡುವುದಕ್ಕೆ ಅವಕಾಶವನ್ನು ಉಂಟು ಮಾಡಿಕೊಡಬೇಕು. ಹೆಣ್ಣು ಮಕ್ಕಳು ಡೆಸ್ಟಿಟ್ಯೂಟ್ಸ್, ವಿಧವೆಯರು ಮನೆಯಿಂದ ಹೊರಗೆ ಬಂದರೆ ಅವರ ಕಷ್ಟ ಏನೆಂಬುದು ಸಮಾಜಕ್ಕೆ ಗೊತ್ತಾಗುತ್ತದೆ. ಆದರೆ ಗಂಡಂದಿರು ಮನೆಗಳಲ್ಲಿ ಕೊಡತಕ್ಕ ಕಷ್ಟ ಚಿತ್ರಹಿಂಸೆ ಇವುಗಳನ್ನು ಹೊರಗಿನ ಸಮಾಜದವರು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ಗುಜರಾತಿನಲ್ಲಿರುವಂತೆ ಇಲ್ಲೂ ಕೂಡ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ ಮಹಿಳೆಯರ ಕಲ್ಯಾಣಕ್ಕೆ ಅನುಕೂಲ ಮಾಡಿಕೊಡಬೇಕು.

ಇನ್ನೊಂದು ವಿಚಾರ ಹೇಳುವುದೆಂದರೆ, ವಿಧವೆಯರನ್ನು ಮದುವೆಯಾಗುವವರಿಗೆ ೩,೦೦೦ ರೂ. ಕೊಡುವುದಾಗಿ ಹೇಳುತ್ತಿದ್ದೀರಿ. ಆದರೆ ನನ್ನ ಸಲಹೆ ಏನೆಂದರೆ ವಿಧವೆಯರನ್ನು ಮದುವೆಯಾಗುವವರಿಗೆ ಉದ್ಯೋಗವನ್ನು ಕೊಡುತ್ತೇವೆಂದು ತಾವು ಆಸೆಯನ್ನು ತೋರಿಸಿದರೆ ವಿಧವೆಯರ ಲಗ್ನ ಸುಲಭವಾಗಿ ಆಗುತ್ತದೆ. ತಮ್ಮ ಪುಸ್ತಕದಲ್ಲಿ ವಿಧವೆಗೆ ಮದುವೆಯಾದುದು ಮಾತ್ರ ಇದೆ. ಆದ್ದರಿಂದ ವರನಿಗೆ ಸ್ವಲ್ಪ ಹೆಚ್ಚಿನ ಆಸೆಯನ್ನು ತೋರಿಸಬೇಕು.....

ಶ್ರೀ ಕೆ. ಭಾಸ್ಕರ ನಾಯ್ಡು.—ನೀವು ಪ್ರಮೀಳಾರವರಿಗೆ ಹೇಳಿ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಪ್ರಮೀಳಾರವರಿಗೆ ಏತಕ್ಕೆ ಹೇಳಬೇಕು. ಅವರು ಅಷ್ಟೊಂದು ಸುಲಭವಾಗಿದ್ದಾರೆಯೇ ? ಅವರು ಒಬ್ಬ ಹೈಕೋರ್ಟ್ ಅಡ್ವೋಕೇಟ್ ಆಗಿದ್ದಾರೆ ಅವರ ಬಗ್ಗೆ ಅಷ್ಟೊಂದು ಲಘುವಾಗಿ ಮಾತನಾಡಬೇಡಿ. ಹಾಗಾದರೆ ನಮ್ಮ ಶ್ರೀ ಲಕ್ಷ್ಮೀಸಾಗರ್‌ರವರ

ಬಗ್ಗೆ ಇಷ್ಟು ಹಗುರವಾಗಿ ಮಾತನಾಡುವುದಕ್ಕೆ ನಿಮಗೆ ಧೈರ್ಯ ಇದೆಯೇ ? ನಿಮ್ಮಂತೆಯೇ ಬೇರೆಯ ವರೂ ಜನರಿಂದ ಆರಿಸಿ ಬಂದಿದ್ದಾರೆ......

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ತಮ್ಮನ್ನು ವಿನಯ ಪೂರ್ವಕವಾಗಿ ಕೇಳಿಕೊಳ್ಳು ತ್ತೇನೆ, ಒಲಿದರೆ ನಾರಿ, ಒಲಿಯದಿದ್ದರೆ...... ? ಎನ್ನುವ ಮಟ್ಟಕ್ಕೆ ಇದು ಹೋದೀತು, ಆದ್ದರಿಂದ ದಯವಿಟ್ಟು ಈ ವಿಷಯವನ್ನು ಇಲ್ಲಿಗೆ ಸಾಕು ಮಾಡುವಂತೆ ಹೇಳಿ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಇಂಥ ಕಷ್ಟಪರಿಸ್ಥಿತಿ ನಾಳೆ ನಮ್ಮ, ನಿಮ್ಮೆಲ್ಲರ ಮಕ್ಕಳಿಗೂ ಬರಬಹುದು. ಆದ್ದರಿಂದ ಈಗಲೇ ನಾವು ಸೂಕ್ತ ಕ್ರಮ ಕೈಗೊಳ್ಳುವುದು ಒಳೆಯದು. ಇನ್ನು ಈ ಖಾತೆಯಲ್ಲಿ ಪೌಷ್ಟಿಕ ಆಹಾರ ಕೊಡತಕ್ಕ ಯೋಜನೆ ಏನಿದೆ, ಅದು ಬಹಳ ಒಳ್ಳೆಯದು. ಈ ಕಾರ್ಯಕ್ರಮವನ್ನು ಎಲ್ಲ ಜಿಲ್ಲಾ ಮಟ್ಟದಲ್ಲೂ ಜಾರಿಗೆ ತರಬೇಕು. ಬಡವರು ವಾಸವಾಗಿರತಕ್ಕ ಕಡೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಈ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಸರ್ಕಾರದವರು ದೊಡ್ಡ ಮನಸ್ಸಿನಿಂದ ಈ ಯೋಜನೆಯನ್ನು ಜಾರಿಗೆ ತಂದಿದ್ದರೂ ಇದರ ವಿತರಣೆ ಸಂಬಂಧದಲ್ಲಿ ಸರ್ಕಾರದ ಸರಿಯಾದ ಮೇಲ್ವಿಚಾರಣೆ ಇಲ್ಲದೆ ಅನೇಕ ಕೇಂದ್ರಗಳಲ್ಲಿ ಈ ಪೌಷ್ಟಿಕ ಆಹಾರದ ವಿತರಣೆ ಸರಿಯಾಗಿ ಆಗುತ್ತಿಲ್ಲ ಎಂಬ ದೂರುಗಳು ಬಹಳವಾಗಿ ಬರುತ್ತಿವೆ. ಇದರ ಕಡೆಗೆ ಸರ್ಕಾರ ಗಮನ ಕೊಡಬೇಕು.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಹೇಳಬೇಕೆಂದರೆ, ಕೆಲವು ಕ್ರೂರಿಗಳು ಅನಾಥಾಲಯ ಗಳಿಂದ ಮಕ್ಕಳನ್ನು ಕದ್ದುಕೊಂಡು ಹೋಗಿ ಅವರನ್ನು ಮತಾಂತರ ಮಾಡಿ ವಿವಿಧ ಕೃತ್ಯಗಳಲ್ಲಿ ಆ ಮಕ್ಕಳನ್ನು ತೊಡಗಿಸುತ್ತಾರೆ. ಇದನ್ನು ನಾವು ನೀವೆಲ್ಲರೂ ಕೇಳಿದ್ದೇವೆ. ಇತ್ತೀಚೆಗೆ ನಮ್ಮ ಸಂಬಂಧೀಕರ ಹೆಣ್ಣು ಮಗಳೊಬ್ಬಳು ಮೈಸೂರಿನಿಂದ ಕಾಣೆಯಾಗಿದ್ದಾಳೆಂದು ಇದೇ ಸದನದಲ್ಲಿ ನಾನು ಹೇಳಿದ್ದೆ. ಆಕೆಯ ವಿಳಾಸವನ್ನು ಹಾಗೂ ವಿವರಗಳನ್ನು ಕೊಟ್ಟಿದ್ದರೂ ಇದುವರೆಗೂ ಆಕೆ ಎಲ್ಲಿದ್ದಾಳೆ ಎಂಬುದನ್ನು ಪತ್ತೆ ಹಚ್ಚುವುದಕ್ಕಾಗಿಲ್ಲ. ಈ ಪ್ರಕರಣ ನಡೆದು ೨ ವರ್ಷವಾಯಿತು. ಇನ್ನು ಮುಂದಾದರೂ ಇಂಥಾದ್ದು ನಡೆಯುವುದಕ್ಕೆ ಅವಕಾಶ ಕೊಡದೆ, ಸರ್ಕಾರದವರು ಈ ಮಹಿಳಾ ಮತ್ತು ಶಿಶು ಕಲ್ಯಾಣ ಖಾತೆಗೆ ಏನು ಹಣವನ್ನು ಖರ್ಚು ಮಾಡುತ್ತಿದ್ದೀರಿ ಇದು ಸದುಪಯೋಗವಾಗುವಂತೆ ಸರಿಯಾದ ಮೇಲ್ವಿಚಾರಣೆಯಿಂದ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ನನಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ಮೊನ್ನೆ ಮೊನ್ನೆ ಪೇಪರ್‌ನಲ್ಲಿ ಓದಿದ್ದೇನೆ. ತಮಿಳುನಾಡಿನಲ್ಲಿ ಮಧ್ಯಾಹ್ನದ ಉಪಹಾರವನ್ನು ಎಲ್ಲ ಶಾಲೆಗಳಲ್ಲಿಯೂ ಮಕ್ಕಳಿಗೆ ಕೊಡಬೇಕೆಂದು ೬೦ ಲಕ್ಷ ರೂಪಾಯಿಗಳನ್ನು ಮಧ್ಯಾಹ್ನದ ಊಟಕ್ಕಾಗಿ ಅಲ್ಲಿನ ಸರ್ಕಾರದವರು ಕೊಟ್ಟಿದ್ದಾರೆ. ನಮ್ಮಲ್ಲಿ ಎಷ್ಟೋ ಮಕ್ಕಳು ಒಂದು ಹೊತ್ತು ಊಟಕ್ಕೂ ಕೂಡ ಗತಿ ಇಲ್ಲದೆ ಎಷ್ಟೆಷ್ಟೋ ದೂರದಿಂದ ಓದಲು ಬರುತ್ತಾರೆ. ನಾನು ಕೂಡ ಒಂದು ಬಾಲವಾಡಿಯನ್ನು ನಡೆಸುತ್ತಿದ್ದೇನೆ. ಅಲ್ಲಿನ ಮಕ್ಕಳನ್ನು ನೋಡಿದಾಗ ಬಹಳ ದಿಗಿಲಾಗುತ್ತದೆ. ಕೆಲವು ಮಕ್ಕಳು ಊಟವಿಲ್ಲದೆ ಬರುತ್ತಾರೆ. ಅವರ ತಂದೆ ತಾಯಿಗಳು ಎಲ್ಲೋ ಕೆಲಸಕ್ಕೆ ಹೋಗಿರುತ್ತಾರೆ, ಮಕ್ಕಳು ಮನೆಗೆ ಮಧ್ಯಾಹ್ನದ ಊಟಕ್ಕೆಂದು ಹೋಗುತ್ತಾರೆ, ಮನೆಯಲ್ಲಿ ಏನೂ ಇರುವುದಿಲ್ಲ. ಹಾಗೆಯೇ ಚೀಲವನ್ನು ತೆಗೆದುಕೊಂಡು ಬರು ತ್ತಾರೆ. ಅವರಿಗೆ ನಾವು ಮಿಡ್ಡೆಮೀಲ್ಸ್ ಎಂದು ಏನು ಕೊಡುತ್ತೇವೆ ಅದನ್ನು ತಿಂದು ಕೈ ಮತ್ತು ತಟ್ಟೆಯನ್ನೆಲ್ಲಾ ನೆಕ್ಕುತ್ತಿರುತ್ತಾರೆ. ಇದನ್ನು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ನಮ್ಮ ರಾಜ್ಯ ದಲ್ಲೂ ಆದಷ್ಟು ಜಾಗ್ರತೆಯಾಗಿ ಈ ಒಂದು ಯೋಜನೆಯನ್ನು ಜಾರಿಗೆ ತರಲೇಬೇಕು. ಇದರಿಂದ ಮಕ್ಕಳಿಗೆ ನಿಜವಾಗಿಯೂ ಕೂಡ ಬಹಳ ಅನುಕೂಲವಾಗುತ್ತದೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಹಿಳೆಯರ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಗೆ ಮಹಿಳೆಯರಿಗೆ ಒಂದು ಅನಾಥಾ ಶ್ರಮವನ್ನು ಕೊಡಲೇಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಒಂದು ಯೋಜನೆ ಇದೆ. ಅನಾಥ ಮಗುವಿಗೆ ರಕ್ಷಣೆ ಕೊಡಲಿಕ್ಕೆ ೭೦ ರೂಪಾಯಿಗಳನ್ನು ಕೊಡುತ್ತಾ ರೆಂದು ಹೇಳಿದ್ದೀರಿ. ಆದರೆ ಇದನ್ನು ಇದರಲ್ಲಿ ಅಳವಡಿಸಿದಂತೆ ಕಾಣುವುದಿಲ್ಲ; ಈ ಯೋಜನೆಯ ಫಲ ನಮ್ಮ ಜನರಿಗೂ ಕೂಡ ಸಿಗುವಂತೆ ಆಗಬೇಕು. ಸಂಸಾರದಲ್ಲಿ ವಿರಸಬಂದು ಮಹಿಳೆಯರು ಆತ್ಮಹತ್ಯೆಗೆ ಕೊಲೆಗೆ ಈಡಾಗತಕ್ಕಂಥ ಅನಾಥ ಮಹಿಳೆಯರಿಗೆ ಏನಾದರೂ ಒಂದು ಉದ್ಯೋಗ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಕೆಲವು ಮಹಿಳೆಯರು ಅನಾಥಾಶ್ರಮಗಳಿಗೆ ಹೋಗಲಿಕ್ಕೆ ಮನಸ್ಸು ಮಾಡುವುದಿಲ್ಲ. ಇಂತಹವರು ಏನಾದರೂ ಒಂದು ಉದ್ಯಮವನ್ನು ಮನೆಯಲ್ಲಿಯೇ ಮಾಡಿಕೊಂಡು ಜೀವನ ಮಾಡಲು

ಉದ್ಯೋಗ ಅವಕಾಶವನ್ನು ಕೊಡಬೇಕೆಂದು ಹೇಳುತ್ತೇನೆ. ಇನಕ್ಕೆ ಸಮಾಜ ಕಲ್ಯಾಣ ಇಲಾಖೆಯವರು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಒಂದು ಕಾರ್ಯಕ್ರಮ ಹಾಕಿಕೊಂಡು ಅದರ ಪ್ರಕಾರ ಹಣವನ್ನು ಕೊಟ್ಟು ಅವರು ಯಾವುದಾದರೂ ಸ್ವಂತ ಉದ್ಯಮದಲ್ಲಿ ತೊಡಗುವಂತೆ ಮಾಡಿ ಅವರಿಗೆ ಬರತಕ್ಕಂಥ ತೊಂದರೆಯನ್ನು ದೂರ ಮಾಡಬೇಕು. ಅದಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಐಟಿಐ ಸ್ಕೂಲನ್ನು ತೆಗೆಯಬೇಕು. ಇದರಿಂದ ಹೆಣ್ಣುಮಕ್ಕಳು ಸ್ವಂತ ಉದ್ಯಮಿಗಳಾಗಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಈಗ ಎಷ್ಟೋ ಸಂಸಾರಗಳಲ್ಲಿ ಗಂಡ ದುಡಿಯುತ್ತಾನೆ, ಅದನ್ನೆಲ್ಲ ಹಾಳು ಮಾಡಿ ಮನೆಗೆ ಬರುತ್ತಾನೆ. ಸರ್ಕಾರಿ ನೌಕರರೇ ಇರಲಿ ಅಥವಾ ಖಾಸಗಿ ನೌಕರರೇ ಇರಲಿ, ಅವರ ಸಂಬಳದಲ್ಲಿ ಕೆಲವು ಅಂಶವಾದರೂ ಕನ್‌ಸ್ಯೂಮರ್ಸ್ ಸೊಸೈಟಿಗೆ ಹೋಗುವಂತೆ ಮಾಡಿದರೆ ಇಂತಹ ಹೆಣ್ಣುಮಕ್ಕಳಿಗೆ ಸ್ವಲ್ಪ ಅನುಕೂಲವಾಗುತ್ತದೆ. ಹೆಣ್ಣುಮಕ್ಕಳಿಗೆ ಈ ರೀತಿಯಿಂದ ಸಹಾಯ ಮಾಡಿದರೆ ಅವರ ಕುಟುಂಬಕ್ಕೆ ಅನುಕೂಲವಾಗುತ್ತದೆ.

ಇನ್ನು ಮಹಿಳೆಯರ ಬಗ್ಗೆ ಈಗ ಇಲಾಖೆಯ ವತಿಯಿಂದ ಆಗುತ್ತಿರುವ ಪ್ರಚಾರ ಖಂಡಿತವಾಗಿಯೂ ಏನೇನು ಸಾಲದು. ಈ ಸದನದಲ್ಲಿ ನಾನು ಮೆಂಬರಾಗಿ ಸುಮಾರು ನಾಲ್ಕು ನಾಲ್ಕುವರೇ ವರ್ಷಗಳಾಯಿತು. ಆದರೂ ಇವರ ಬಗ್ಗೆ ಇಷ್ಟು ಯೋಜನೆಗಳು ಇವೆ ಎಂಬುದು ಪೂರ್ಣವಾಗಿ ನನಗೆ ಗೊತ್ತಾಗಲಿಲ್ಲ. ಪುಸ್ತಕದಲ್ಲಿ ಮಾತ್ರ ಇಷ್ಟೊಂದು ಯೋಜನೆಗಳು ಇರುತ್ತವೆ. ಉದ್ಯೋಗ ದೃಢೀಕರಣ ಯೋಜನೆ ರೇಡಿಯೋ ಮುಖಾಂತರ ಬರಬೇಕು. ಪ್ರತಿಯೊಂದು ಯೋಜನೆಯ ಬಗ್ಗೆಯೂ ದಿನನಿತ್ಯ ಯಾವುದಾದರೂ ಒಂದು ವೇಳೆಯಲ್ಲಿ ರೇಡಿಯೋ ಮುಖಾಂತರ ಪ್ರಚಾರ ಮಾಡಬೇಕು. ಹೆಣ್ಣುಮಕ್ಕಳಿಗೆ ಅನುಕೂಲವಾಗುವಂಥ ಯೋಜನೆಗಳು ರೇಡಿಯೋ ಮುಖಾಂತರ ಪ್ರಚಾರವಾದರೆ ಹಳ್ಳಿಗಳಲ್ಲಿ ಪಾತ್ರೆ ತಿಕ್ಕುತ್ತಿರುವಾಗ, ತಮ್ಮ ಕೆಲಸದಲ್ಲಿ ತೊಡಗಿರುವಾಗ ಕೇಳಿ ತಿಳಿದುಕೊಳ್ಳಬಹುದು. ಇಲ್ಲದಿದ್ದರೆ ಇಂಥ ಯೋಜನೆಗಳಿವೆ ಎಂದು ಯಾರು ಹೇಳುತ್ತಾರೆ? ಒಂದು ಮಾತು. ಸವಿಮಾತು ಯಾವರೀತಿ ಪ್ರಚಾರ ಮಾಡುತ್ತಾರೆ, ಅದೇರೀತಿ ಮಹಿಳೆಯರಿಗಾಗಿ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ,

ಇನ್ನು ಮಹಿಳೆಯರು ನೌಕರಿಗೆ ಬಂದಾಗ ಸಮಾಜದಲ್ಲಿ ಅವರ ಬಗ್ಗೆ ಒಂದುರೀತಿಯಾದ ತಾತ್ಸಾರ ಮನೋಭಾವನೆ ಇರುತ್ತದೆ. ಇದು ಸಮಾಜದಲ್ಲಿ ದೂರವಾಗಬೇಕು, ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಸರಿಯಾಗಿ ಗಂಡಸರಿಂದ ಗೌರವ ಭಾವನೆ ಬರುವಂಥ ಕಾರ್ಯಕ್ರಮವನ್ನು ಕೈಗೊಳ್ಳಲು ಸೇವಾ ನಿರತ ಕಾರ್ಯಕರ್ತರನ್ನು ನೇಮಿಸಬೇಕು. ಗುಜರಾತಿನಲ್ಲಿ ಈ ರೀತಿಯಾದ ಸಂಸ್ಥೆಗಳು ಇದ್ದು ಅಲ್ಲಿ ಬಹಳ ಉಪಯುಕ್ತವಾಗಿ ಕೆಲಸ ಮಾಡುತ್ತಿರುವಂತೆ ಇಲ್ಲಿಯೂ ವ್ಯವಸ್ಥೆ ಆಗಬೇಕೆಂದು ಹೇಳಿ ಈ 2-3 ವಿಚಾರಗಳನ್ನು ಮಾನ್ಯ ಸಚಿವೆಯರ ಮುಂದೆ ಇಟ್ಟಿದ್ದೇನೆ. ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತಾರೆಂದು ತಿಳಿದುಕೊಂಡು ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.— ಈಗ ಕುಮಾರಿ ಎಸ್. ಪ್ರಮೀಳರವರು ಮಾತನಾಡಬಹುದು.

ಶ್ರೀ ಎಂ.ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೆ, ಕುಮಾರಿ ಎಸ್. ಪ್ರಮೀಳರವರು ಮಾತನಾಡಲಿ, ನಾನು ಬೇಡವೆಂದು ಹೇಳುವುದಿಲ್ಲ. ನಾನು ಅವರು ಹೇಳಿದ್ದನ್ನೆಲ್ಲ ಒಪ್ಪಿಕೊಂಡಿದ್ದೇನೆ. ಗಂಡಸರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅದನ್ನೆಲ್ಲ ಸ್ವೀಕಾರ ಮಾಡಿದ್ದೇನೆ. ಆದರೆ ಅವರು ಮಾತನಾಡಿದರೆ "ಹತ್ತಿಯ ಮರದ ಹೂವನ್ನು ಕಾಣಬಹುದು, ನೀರಿನಲ್ಲಿ ಮೀನಿನ ಹೆಜ್ಜೆಯನ್ನು ಹುಡುಕಬಹುದು. ಆದರೆ ಹೆಣ್ಣಿನ ಮಾಯೆ ಬಗ್ಗೆ ಸ್ವಲ್ಪ ಏನಾದರೂ ಇದ್ದರೆ ಅದರ ಬಗ್ಗೆ ಏತಕ್ಕೆ ಅವರು ಮಾತನಾಡುವುದಿಲ್ಲ. ಅವರು ಮಾತನಾಡದೇ ಹೋದರೆ ಅದರ ಬಗ್ಗೆ ನಾನು ಮಾತನಾಡುತ್ತೇನೆ.

ಶ್ರೀಮತಿ ಅನುಸೂಯ ಗಜಾನನಶರ್ಮ.—ಮಾನ್ಯ ಅಧ್ಯಕ್ಷರೇ, ಮಾನ್ಯ ನಾನಯ್ಯನವರು ಹೇಳಿದ್ದಕ್ಕೆ ಒಂದು ಮಾತನ್ನು ಹೇಳುತ್ತೇನೆ. ಹೆಣ್ಣಿನ ಮಾಯೆ ಎಂದು ಹೇಳಿದರು, ಇದನ್ನು ಹೇಳಿದವರು ಯಾರು ಸ್ವಾಮಿ ಎಂದು ಕೇಳುತ್ತೇನೆ.

ಶ್ರೀ ಜಿ.ಕೆ. ತಕ್ಕಿಡ್.—ಮಾನ್ಯ ಅಧ್ಯಕ್ಷರೇ, ಅಕ್ಕಮಹಾದೇವಿ ಹೆಣ್ಣು ಮಾಯೆ ಎಂದು ಹೇಳಿದ್ದಾರೆ. ೧೨ನೇ ಶತಮಾನದಲ್ಲಿ "ಹೆಣ್ಣು ಹೆಣ್ಣೆಂಬರು, ಹೆಣ್ಣು ಹೆಣ್ಣಲ್ಲ, ಹೆಣ್ಣು ಮಾಯೆ" ಎಂದು ಹೇಳಿದ್ದಾರೆ.

ಶ್ರೀಮತಿ ಅನುಸೂಯ ಗಜಾನನಶರ್ಮ.—ಹೆಂಗಸರ ಬಗ್ಗೆ ತಾವು ಈ ರೀತಿ ಹೇಳುವುದಾದರೆ ಗಂಡ ಕುಡಿತದ ಚಟಕ್ಕೆ ಬಿದ್ದು ಮನೆಯಲ್ಲಿರತಕ್ಕಂಥ ಪಾತ್ರೆ ಮಂಗಳಸೂತ್ರ ಎಲ್ಲವನ್ನು ಕಿತ್ತುಕೊಂಡು ಹೋಗಿ ಮಾರಿ ಕುಡಿದು ಮನೆಗೆ ಬರುತ್ತಾನೆ. ಮತ್ತೆ ಮನೆಗೆ ಬಂದರೂ ಮರ್ಯಾದಸ್ಥ ಹೆಣ್ಣುಮಗಳು ಬೇರೆಯವರ ಮನೆಗೆ ಹೋಗಿ ಪಾತ್ರೆಯನ್ನು ತಿಕ್ಕಿ ನಾಲ್ಕು ಕಾಸು ಸಂಪಾದನೆ ಮಾಡಿಕೊಂಡು ಬಂದು ಅದರಲ್ಲಿ ಸ್ವಲ್ಪ ಗಂಡನಿಗೆ ಕೊಟ್ಟು ಮನೆಯ ಗೌರವವನ್ನು ಕಾಪಾಡುತ್ತಾಳೆ. ಇಂಥ ಹೆಣ್ಣನ್ನು ಮಾಯೆ ಎಂದು ಹೇಳತಕ್ಕಂಥದ್ದು ನಿಜವಾಗಿಯೂ ನಾಚಿಕೆ ತರುವಂಥ ಮಾತಾಗುತ್ತದೆಂದು ಹೇಳುತ್ತೇನೆ.

ಕುಮಾರಿ ಎಸ್. ಪ್ರಮೀಳ.—ಮಾನ್ಯ ಅಧ್ಯಕ್ಷರೇ,

"ಹೆಣ್ಣಿಗೆ ಗಂಡಾಗಿ ಕಾಡಿತ್ತು ಮಾಯೇ
ಗಂಡಿಗೆ ಹೆಣ್ಣಾಗಿ ಕಾಡಿತ್ತು ಮಾಯೇ
ಹೆಣ್ಣು ಹೆಣ್ಣಲ್ಲ ಕಪಿಲ ಸಿದ್ಧ ಮಲ್ಲಿಕಾರ್ಜುನ ಕೇಳ"

ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಇದನ್ನು ತಿಳಿದುಕೊಂಡರೆ ಸಾಕು. ಆದ್ದರಿಂದ ದಯವಿಟ್ಟು ಹೆಣ್ಣನ್ನು ಅರ್ಥಮಾಡಿಕೊಳ್ಳಬೇಕು. ಹೊನ್ನಮ್ಮ ಏನು ಹೇಳಿದ್ದಾರೆಂದರೆ.—

"ಹೆಣ್ಣು ಹೆಣ್ಣೆಂದೇಕೆ ಪೇಳುವಿರಿ.

ಕಣ್ಣು ಕಾಣದ ಗಾವಿಲರು ಎಂದು ಹೇಳಿದ್ದಾರೆ. ಆದ್ದರಿಂದ ನೀವು ಕಣ್ಣು ಕಾಣದ ಗಾವಿಲರು ಆಗಬೇಡಿ, ಹೆಣ್ಣನ್ನು ಅರ್ಥಮಾಡಿಕೊಳ್ಳುವಂಥ ಮನೋಭಾವವನ್ನು ತಾವು ಇಟ್ಟುಕೊಂಡು, ನಾನು ಹೇಳುವ ಎರಡು ಮಾತುಗಳನ್ನು ಕಿವಿಇಟ್ಟು, ಮನಸ್ಸಿನಲ್ಲಿ ಆಕಾಂಕ್ಷೆ ಇಟ್ಟು ಕೇಳಿ ಎಂದು ಕೇಳಿಕೊಳ್ಳುತ್ತೇನೆ.

೬-೦೦ ಪಿ.ಎಂ.

ಶ್ರೀ ಆನಂದಕುಂದ ಹೆಗ್ಡೆ.—"ಹೌದೆಂಬ ರಾಣಿ ಪುಷ್ಪಾಣಿ, ಶ್ವೇತವರ್ಣಾಂಕ ರಾಯಸೋ, ಮಚ್ಚಬಾಧೆ ಜಲಸುಸ್ಯ ವಪನ್ನಾರ ರವಸುತಂ" ಎಂದು ಹೇಳಿದ್ದಾರೆ.

ಕುಮಾರಿ ಎಸ್. ಪ್ರಮೀಳ.—ಅರವಿಂದ ಮಹರ್ಷಿಗಳು ಒಮ್ಮೆ ಮಹರ್ಷಿಗಳಾಗುವುದಕ್ಕೆ ಮುಂಚೆ ದಾರಿಯಲ್ಲಿ ಹೋಗುತ್ತಿರುವಾಗ ಓರ್ವ ಭಿಕ್ಷುಕ ಭಿಕ್ಷೆ ಬೇಡುತ್ತಿದ್ದುದನ್ನು ನೋಡಿದರು. ದಾರಿಯಲ್ಲಿ ಹೋಗುವವರನ್ನೆಲ್ಲಾ ಅಮ್ಮಾ, ಅಪ್ಪ ಒಂದಾಣೆ ಭಿಕ್ಷೆ ನೀಡಿ ಕೇಳುತ್ತಿದ್ದ. ಯಾರು ಕೂಡ ಆ ಕಡೆ ನೋಡಲಿಲ್ಲ. ಅರವಿಂದ ಮಹರ್ಷಿಗಳು ಹಾಗೆಯೇ ನೋಡುತ್ತಾ ಇದ್ದರು. ಅಲ್ಲೇ ಇದ್ದಂತಹ ಒಬ್ಬ ಭಿಕ್ಷುಕಿ ತಾನು ಬೆಳಗಿನಿಂದ ದುಡಿದಿದ್ದ ಐದಾರಾಣೆಯನ್ನು ಆತನಿಗೆ ನೀಡಿದಳು. ಏಕೆಂದರೆ ಆ ಭಿಕ್ಷುಕ ಕಾಯಿಲೆಯಿಂದ ಕೂಡ ನರಳುತ್ತಿದ್ದ. ಯಾರು ಕೂಡ ಒಂದು ಆಣೆಯನ್ನು ಕೊಟ್ಟಿರಲಿಲ್ಲ. ಆಕೆ ಕೂಡ ಭಿಕ್ಷೆ ಮಾಡಿ ಕೂಡಿಟ್ಟಿದ್ದ ಐದಾರಾಣೆಯನ್ನು ಕೊಡುತ್ತಿರುವುದನ್ನು ಅರವಿಂದ ಮಹರ್ಷಿಗಳು ನೋಡಿದರು. ಆಗ ಅರವಿಂದ ಮಹರ್ಷಿಗಳು ಎಂತಹ ದೈವ ಸೃಷ್ಟಿ ಈ ಹೆಣ್ಣು ಎಂದು ಅಂದುಕೊಂಡರು. ಆಗ ಅವರಿಗೆ ಆವಿರ್ಭಾವವಾಯಿತು. ಒಮ್ಮೆ ಮಹಾತ್ಮಾಗಾಂಧಿಯವರು ಒಂದು ಮಾತು ಹೇಳಿದ್ದಾರೆ. ಏನೆಂದರೆ, ಒಬ್ಬ ಮಹಿಳೆ ಹೆರಿಗೆ ಬೇನೆಯಿಂದ ಸಾಯುವ ಸ್ಥಿತಿಯಲ್ಲಿದ್ದಳು. ಡಾಕ್ಟರು ಬಂದು ನೋಡಿ ಆಕೆಯ ಗಂಡ ಮತ್ತು ಅತ್ತೆ, ಮಾವಂದಿರನ್ನು ಕರೆದು "ತಾಯಿಯನ್ನು ಬದುಕಿಸಬೇಕೋ ಮಗುವನ್ನು ಬದುಕಿಸಬೇಕೋ, ಏಕೆಂದರೆ ಶಸ್ತ್ರಚಿಕಿತ್ಸೆ ಆಗಲೇಬೇಕಾಗಿದೆ" ಇಬ್ಬರಲ್ಲಿ ಒಬ್ಬರನ್ನು ಮಾತ್ರ ಬದುಕಿಸಲಿಕ್ಕೆ ಸಾಧ್ಯವೆಂದು ಹೇಳಿದಾಗ, ಹೆರಿಗೆಯ ನೋವಿನಿಂದ ನರಳುತ್ತಿದ್ದ ಹೆಂಗಸು ಹೇಳುತ್ತಾಳೆ "ನನ್ನ ಗಂಡನ ವಂಶದ ಉದ್ಧಾರವಾಗಬೇಕಾಗಿದೆ, ನಾನು ಇಲ್ಲದಿದ್ದರೂ ನನ್ನ ಗಂಡ ಇನ್ನೊಬ್ಬಳನ್ನು ಮದುವೆಯಾಗಬಹುದು. ಆದರೆ ವಂಶ ಉದ್ಧಾರವಾಗಬೇಕಾಗಿದೆ ದಯವಿಟ್ಟು ನನ್ನ ಮಗುವನ್ನು ಬದುಕಿಸಿ ಎಂದು ಹೇಳತಕ್ಕ ದೃಶ್ಯವನ್ನು ನೋಡಿ ಅಲ್ಲೇ ಇದ್ದ ಮಹಾತ್ಮಾಗಾಂಧಿಯವರು ನೋಡಿ ನನಗೆ ಇನ್ನೊಮ್ಮೆ ಎಂದಾದರೂ ಮಾನವ ಜನ್ಮ ಬರುವುದಾದರೆ ನನ್ನನ್ನು ಹೆಣ್ಣಾಗಿ

ಹುಟ್ಟಿಸು ಎಂದು ಮಹಾತ್ಮಾಗಾಂಧಿಯವರು ದೇವರನ್ನು ಕೇಳಿಕೊಂಡಿದ್ದಾರೆ. ಹೆಣ್ಣು ಪವಿತ್ರವಾದುದು ನಾವು ಎಂದೂ ಕೂಡ ಅಬಲೆಯರಲ್ಲ ಮಹಾತ್ಮಾಗಾಂಧಿಯವರು ಕೂಡ ಹೆಣ್ಣು ಜನ್ಮವನ್ನು ಕೊಡು ಎಂದು ಕೇಳಿಕೊಂಡಿದ್ದಾರೆ. ಆದ್ದರಿಂದ ನಾವೂ ಕೂಡ ಬಾಳಿ ಬದುಕಲಿಕ್ಕೆ ಆಸ್ಪದ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಎಂತಹ ದೃಷ್ಟಿ ಕೋನವನ್ನು ಇಟ್ಟುಕೊಂಡು ಮಹಾತ್ಮಾಗಾಂಧಿಯವರು ಹೇಳಿದ್ದಾರೆ ಎಂಬುದನ್ನು ತಾವು ನೋಡಬೇಕು. ಮಗನನ್ನು ಉಳಿಸಿ, ನನ್ನ ವಂಶದ ಉದ್ಧಾರವಾಗಬೇಕಾಗಿದೆ ಎಂದು ಹೆಣ್ಣು ಹೇಳುತ್ತಾಳೆ, ತನ್ನನ್ನು ತಾನು ಬಲಿಕೊಟ್ಟು ವಂಶವನ್ನು ಉದ್ಧಾರ ಮಾಡಲಿಕ್ಕೆ ಹೆಣ್ಣು ಹಿಂಜರಿಯಲಿಲ್ಲ. ಆದ್ದರಿಂದ ಹೆಣ್ಣಿನ ಬಗ್ಗೆ ಮಾತನಾಡುವಾಗ ತಾವು ಯಾವ ದೃಷ್ಟಿಯನ್ನಿಟ್ಟುಕೊಂಡು ಮಾತನಾಡಬೇಕೆಂಬುದನ್ನು ತಾವುಗಳು ಅರಿತುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಏನೆಂದರೆ, ಇಲ್ಲಿ ನಡೆಯುತಕ್ಕ ಚರ್ಚೆಯನ್ನು ನೋಡಿದರೆ. ನನಗೆ ಕಾಲೇಜಿನ ದಿನಗಳು ನೆನಪಿಗೆ ಬರುತ್ತವೆ. ಕಾಲೇಜಿನಲ್ಲಿ ಹೆಣ್ಣು ಹೆಚ್ಚೋ ಗಂಡು ಹೆಚ್ಚೋ ಎಂದು ವಾದ ಮಾಡುತ್ತಿದ್ದರು. ಇವತ್ತು ಇಲ್ಲಿ ಮಹಿಳಾ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಾಗಬೇಕು. ಆದರೆ ಇಲ್ಲಿ ನಡೆಯುತ್ತಿರುವುದೇ ಬೇರೆ.

ಕುಮಾರಿ ಎಸ್. ಪ್ರಮೀಳ.—ಹೆಣ್ಣನ್ನು ಸರ್ಕಾರ ಮತ್ತು ಸಮಾಜ ಯಾವ ದೃಷ್ಟಿ ಕೋನದಿಂದ ನೋಡುತ್ತಿದೆ ಅಂದರೆ, ಅದರ ಬಗ್ಗೆ ನಾವು ಇವತ್ತು ಎಚ್ಚರಿಕೆ ನೀಡಬೇಕಾಗಿದೆ ಎಂದು ಅಂದುಕೊಂಡಿದ್ದೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಮುಂಚೆ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ನಾನು ಮಾತನಾಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯನ್ನು ಮೊದಲು ಇಟ್ಟುಕೊಂಡು ೨ನೆಯದಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಇಟ್ಟುಕೊಂಡಿದ್ದಾರೆ. ಈ ಡಿಸ್ಕ್ರಿಮಿನೇಷನ್ ಏತಕ್ಕೆ ? ಇವತ್ತು ಮನೆ ಮನೆಯಲ್ಲಿ, ಸಮಾಜದಲ್ಲಿ ಸರ್ಕಾರದಲ್ಲಿ ಪ್ರತಿಯೊಂದರಲ್ಲೂ ಈ ರೀತಿ ಆಗುತ್ತಿದೆ. ನನಗೆ ಬಹಳ ದುಃಖವಾಗುತ್ತದೆ, ಇಂತಹ ಒಂದು ಡಿಸ್ಕ್ರಿಮಿನೇಷನ್ ಈ ಮನೆಯಲ್ಲಾದರೂ ಆಗಬಾರದಾಗಿತ್ತು, ಇನ್ನು ಮುಂದೆ ಈ ರೀತಿ ಆಗುವುದಕ್ಕೆ ಅವಕಾಶ ಕೊಡಬಾರದು. ನಾವೂ ಕೂಡ ೫೦ ಪರ್ಸೆಂಟ್ ಇದ್ದೇವೆ ಎನ್ನುವುದನ್ನು ಹಿಂದೆಯೂ ಹೇಳಿದ್ದೇನೆ ಇವತ್ತು ಕೂಡ ಹೇಳುತ್ತಿದ್ದೇನೆ.

ಇವತ್ತು ಕೇವಲ ೩ ಪರ್ಸೆಂಟ್ ಇರತಕ್ಕ ಗಿರಿಜನರ ಗತಿ ಕರ್ನಾಟಕ ರಾಜ್ಯದಲ್ಲಿ ಏನಾಗಿದೆ ? ಅದರ ಬಗ್ಗೆ ಪ್ರತಿಯೊಬ್ಬರೂ ಕೂಡ ಗಮನ ಹರಿಸಬೇಕಾಗಿದೆ, ಈ ಒಂದು ಪರಿಸ್ಥಿತಿ ಒದಗಿ ಬಂದದ್ದು ಹಾವನೂರ್‌ರವರ ರಿಪೋರ್ಟ್ ಬಂದಾಗ, ಆ ವರದಿಯಲ್ಲಿ ನಾಯಕ ನಾಯಕಡ ಜನಾಂಗವನ್ನು ಬ್ಯಾಕ್‌ವರ್ಡ್ ಟ್ರೈಬ್ಸ್ ಎಂದು ಮಾಡಿದ್ದು ನಮಗೆಲ್ಲರಿಗೂ ಗೊತ್ತಿದೆ. ಕಾರಣಾಂತರಗಳಿಂದ ಬೇರೊಂದು ನೋಟಿಫಿಕೇಷನ್ ತೆಗೆದುಕೊಂಡು ಬಂದು ನಾಯಕ ಎಂಬ ವರ್ಡ್‌ನ್ನು ಡಿಲೀಟ್ ಮಾಡಿದ್ದಾರೆ. ಪ್ರೆಸಿಡೆನ್ಷಿಯಲ್ ಆರ್ಡರ್‌ನಲ್ಲಿ ನಾಯಕ ಮತ್ತು ನಾಯಕಡ ಇಂತಹದ್ದು ಏನಾದರೂ ಇದ್ದರೆ ಮೆಮೊರಾಂಡಮ್ ಮಾಡಿ ತೆಗೆದುಹಾಕಬೇಕು. ಕರ್ನಾಟಕದ ಮಟ್ಟದಲ್ಲಿ ಷೆಡ್ಯೂಲ್ಡ್ ಟ್ರೈಬ್ ಎಂದು ಹೇಳಿ ಡಿಸ್ಕ್ರಿಮಿನೇಷನ್ ಮಾಡಿ ಯಾವ ಬೇಸಿಸ್ ಮೇಲೆ ತೆಗೆದುಹಾಕಿದ್ದಾರೆ? ಇವತ್ತು ನಾಯಕ ಅಥವಾ ನಾಯಕಡ ಅಲ್ಲಿ ಕಾಮ ಹಾಕಿ ನಾಯಕಡವನ್ನು ನಾಯಕ ಎಂದು ಮಾಡಿರತಕ್ಕ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಷೆಡ್ಯೂಲ್ಡ್ ಟ್ರೈಬ್‌ನವರ ಗತಿ ಏನಾಗಿದೆ? ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಅವರ ಹೆಸರು ಹೇಳಿಕೊಂಡು ಬಂದಿರತಕ್ಕ ಶಾಸಕರು ಅವರ ಬಗ್ಗೆ ಏನು ಮಾಡಿದ್ದಾರೆಂಬುದನ್ನು ನಾವು ಇವತ್ತು ಡಿಬೇಟ್ ತೆಗೆದು ನೋಡಬೇಕಾಗಿದೆ. ಹರಿಜನರ ಮತ್ತು ಗಿರಿಜನರ ಗತಿ ಏನಾಗಿದೆ ಎನ್ನುವುದನ್ನು ಪರಿಶೀಲಿಸಬೇಕಾಗಿದೆ. ಇವತ್ತು ಎರಡೂವರೆ ಲಕ್ಷ ಇರತಕ್ಕ ಗಿರಿಜನರಿಗೆ ಎಲ್ಲೂ ಒಂದು ಸೀಟು ಕೊಡುತ್ತಿಲ್ಲ. ಯಾವುದೇ ಹುದ್ದೆಯನ್ನು ತೆಗೆದುಕೊಂಡರೂ ಕೂಡ ಅವರಿಗೆ ಮೀಸಲಾತಿ ದೊರೆಯುತ್ತಿಲ್ಲ. ಲೋಕಸೇವಾ ಆಯೋಗದಲ್ಲಿ ಯಾವ ರೀತಿ ಸೆಲೆಕ್ಟ್ ಮಾಡುತ್ತಿದ್ದಾರೋ ಗೊತ್ತಿಲ್ಲ. ಇದುವರೆಗೆ ನಿಜವಾದ ಗಿರಿಜನರಿಗೆ ಕೆಲಸ ಸಿಕ್ಕಿಲ್ಲ. ನಾನು ಅಂಕಿ ಅಂಶಗಳನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಇದರ ಬಗ್ಗೆ ಸೂಕ್ತ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಮೆಡಿಕಲ್ ಕಾಲೇಜುಗಳಲ್ಲಿ ೧೭ ಸೀಟುಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಒಂದೇ ಒಂದು ಸೀಟು ಗಿರಿಜನರಿಗೆ ಕೊಟ್ಟಿಲ್ಲ. ಅದೇ ರೀತಿ ಇಂಜಿನಿಯರ್ ಕಾಲೇಜುಗಳಲ್ಲಿ ಕೊಟ್ಟಿಲ್ಲ. ಎಲ್ಲಾ ಕಡೆಯಿಂದಲೂ ಮಾಹಿತಿ ತರಿಸಿಕೊಂಡು ನಿಮ್ಮ ಡಿಪಾರ್ಟ್‌ಮೆಂಟ್

ನವರು ತನಿಖೆ ಮಾಡಿದ್ದಾರೆ, ರಿಪೋರ್ಟ್ ಬಂದಿದೆ. ಷೆಡ್ಯೂಲ್ಡ್ ಟ್ರೈಬ್ ಅಲ್ಲದ ಮದಕರಿನಾಯಕ ಶಿವಪ್ಪನಾಯಕರಂತಹ ಜನಾಂಗಕ್ಕೆ ಸೇರಿದವರಿಗೆ ಅಂದರೆ ಬ್ಯಾಕ್‌ವರ್ಡ್ ಟ್ರೈಬ್ ಅಲ್ಲದವರಿಗೆ ಇವತ್ತಿನ ದಿವಸ ಸೀಟುಗಳನ್ನು ಕೊಟ್ಟಿದ್ದಾರೆ. ಇಂತಹವರು ಗಿರಿಜನರಿಗೆ ಇಟ್ಟಂತಹ ಹಣವನ್ನು ದೋಚಿದ್ದಾರೆ. ಅವರಿಗೆ ಸ್ಕಾಲರ್‌ಷಿಪ್ ರೂಪದಲ್ಲಿ ಹಣವನ್ನು ಕೊಟ್ಟಿದ್ದಾರೆ. ಯಾರು ಯಾರನ್ನೋ ಲೂಟಿ ಮಾಡಿ ಹಣವನ್ನು ತೆಗೆದುಕೊಂಡಿದ್ದಾರೆ. ನಿಮಗೆ ಯಾರು ಅನುಮತಿಯನ್ನು ಕೊಟ್ಟಿದ್ದು? ಈ ಹಣವನ್ನು ಟ್ರೈಬ್ ಅಲ್ಲದವರಿಗೆ ಕೊಡುವುದಕ್ಕೆ? ಇದರ ಬಗ್ಗೆ ಚಿಂತನೆ ಮಾಡಬೇಕಾದ ಪರಿಸ್ಥಿತಿ ಒದಗಿ ಬಂದಿದೆ. ಸ್ಕೂಲ್‌ಗಳ ಪರಿಸ್ಥಿತಿ ಏನಾಗಿದೆ ಅಂದರೆ ಷೆಡ್ಯೂಲ್ಡ್ ಟ್ರೈಬ್ ಅಲ್ಲದವರು ಷೆಡ್ಯೂಲ್ಡ್ ಟ್ರೈಬ್ ಹೆಸರಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಹೆಸರಿನಲ್ಲಿ ೮-೧೦ ಸ್ಕೂಲ್‌ಗಳನ್ನು ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರ ಹತ್ತಿರ ತೆಗೆದುಕೊಂಡಿದ್ದಾರೆ. ಆದರೆ ಒಂದೇ ಒಂದು ಗಿರಿಜನರ ಸ್ಕೂಲ್ ಇಲ್ಲ. ನಾಯಕ ಜನಾಂಗದವರು ಷೆಡ್ಯೂಲ್ಡ್ ಟ್ರೈಬ್‌ನಲ್ಲಿ ಬರತಕ್ಕ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಬರತಕ್ಕ ಸ್ಕೂಲ್‌ಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲೂ ಕೂಡ ಇವರ ಹೆಸರಿನಲ್ಲಿ ಹಣವನ್ನು ದೋಚು ತ್ತಿದ್ದಾರೆ. ಇವತ್ತು ನಾವು ನಿಜವಾದ ಗಿರಿಜನರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅಕೌಂಟೆಂಟ್ ಜನರಲ್‌ರವರು ೧೫-೩-೧೯೮೨ರಲ್ಲಿ ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಒಂದು ಪತ್ರವನ್ನು ಬರೆದಿದ್ದಾರೆ, ನಿಮ್ಮ ಡಿಪಾರ್ಟ್‌ಮೆಂಟಿನ ಎಕ್ಸ್‌ಪ್ಲನೇಷನ್ ಕೇಳಿದ್ದಾರೆ. ಷೆಡ್ಯೂಲ್ಡ್ ಟ್ರೈಬ್‌ನವರಿಗೆ ನಿಗದಿ ಮಾಡಿದ ಹಣವನ್ನು ಯಾರಿಗೆ ಕೊಟ್ಟಿದ್ದೀರಿ ಎಂದು? ಅನ್ಯಾಯ ಮಾಡಿದ್ದೀರಿ ಎಂದು? ಬೇರೆ ಜನಾಂಗದವರು ಸುಳ್ಳು ಸರ್ಟಿಫಿಕೇಟ್ ಕೊಟ್ಟು ಹಣ ಪಡೆದುಕೊಂಡಿದ್ದಾರೆಂದು? ನೀವು ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ವಿವರಣೆ ಕೊಡಬೇಕೆಂದು ಕೇಳಿದ್ದಾರೆ. ಆದರೆ ಇದರ ಬಗ್ಗೆ ಏನೂ ಪರಿಣಾಮ ಬೀರಿಲ್ಲ. ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರತಿಯೊಂದರಲ್ಲೂ ಇದೇರೀತಿ ಅನಾಹುತ ಗಳು ಆಗಿವೆ, ಎರಡೂವರೆ ಲಕ್ಷ ನಿಜವಾದ ಗಿರಿಜನರು ಯಾರಿದ್ದಾರೆ ಅವರಿಗೆ ದೊರಕಬೇಕಾದ ನ್ಯಾಯ ದೊರಕಿಲ್ಲ. ಇವರಿಗೆ ಸೌಲಭ್ಯ ದೊರಕಿಲ್ಲ, ಇವರಿಗೆ ಸ್ಕಾಲರ್‌ಷಿಪ್ ದೊರಕಿಲ್ಲ, ಲೋಕಸೇವಾ ಆಯೋಗದಲ್ಲಿ ಉದ್ಯೋಗ ದೊರಕಿಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕಾದ ಪರಿಸ್ಥಿತಿ ಒದಗಿ ಬಂದಿದೆ. ಉದಾಹರಣೆಗೆ ಹೇಳುವುದಾದರೆ, ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಉನ್ನತ ಅಧಿಕಾರಿಗಳೊಬ್ಬರು ಅವರ ಕೈಕೆಳಗಿರತಕ್ಕ ಅಧಿಕಾರಿಗೆ ಒಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅವರು ನಾಯಕ ಜನಾಂಗ ದವರೂ ಅಲ್ಲ, ಷೆಡ್ಯೂಲ್ಡ್ ಟ್ರೈಬ್ ಅಲ್ಲ. ಅಂತಹವರು ಷೆಡ್ಯೂಲ್ಡ್ ಟ್ರೈಬ್ ಸರ್ಟಿಫಿಕೇಟ್ ಪಡೆದುಕೊಂಡು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಪಡೆದುಕೊಳ್ಳಲು ಅರ್ಜಿ ಹಾಕಿ ಕೊಂಡು ನಿವೇಶನ ದೊರಕಿಸಿ ಕೊಂಡಿದ್ದಾರೆ. ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ನಿಮ್ಮ ಕಣ್ಣೆದುರಿಗೆ ಈ ರೀತಿಯ ಅನಾಹುತಗಳು ಆಗುತ್ತವೆ ಅಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಇನ್ನೂ ಎಂತಹ ಅನಾಹುತ ಗಳು ಆಗುತ್ತವೆ, ಏನೇನು ಅನ್ಯಾಯಗಳು ಆಗುತ್ತವೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ೨½ ಲಕ್ಷ ಇರತಕ್ಕ ನಿಜವಾದ ಗಿರಿಜನರಿಗೆ ಅನ್ಯಾಯ ಮಾಡಿ ೩೫ ಲಕ್ಷ ಇರತಕ್ಕ ನಾಯಕ ಜನಾಂಗ ಷೆಡ್ಯೂಲ್ಡ್ ಟ್ರೈಬ್ ಎಂದು ಹೇಳಿಕೊಂಡು ಯಾವುದೋ ಒಂದು ಆರ್ಡರ್ ತೋರಿಸಿಕೊಂಡು ನಿಜ ವಾದ ಗಿರಿಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ೧೯೭೮ನೇ ಇಸವಿಯಿಂದ ಇವತ್ತಿನವರೆಗೆ ಷೆಡ್ಯೂಲ್ಡ್ ಟ್ರೈಬ್ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಮೋಸ ಮಾಡಿಕೊಂಡು ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ದೊರಕಿಸಿಕೊಂಡಿದ್ದಾರೆ. ವಿಧಾನಸೌಧದಲ್ಲಿ ಕ್ಲರ್ಕ್ಸ್ ಟೈಪಿಸ್ಟ್ ಎಲ್ಲಾ ಹುದ್ದೆಗಳಲ್ಲೂ ತಾವೇ ಗಿರಿಜನರೆಂದು ಹೇಳಿಕೊಂಡು ಹುದ್ದೆಗಳನ್ನು ದೋಚಿಕೊಂಡಿ ದ್ದಾರೆ. ಆದರೆ ನಿಜವಾದ ಗಿರಿಜನರು ಕಣ್ಣೀರು ಹಾಕುತ್ತಿದ್ದಾರೆ ಅವರನ್ನು ಕೇಳುವವರು ಯಾರು ಇಲ್ಲ, ಯಾರು ಕೂಡ ಅವರ ಬಗ್ಗೆ ಮಾತನಾಡುವವರು ಇಲ್ಲ. ಅವರು ಮಾತನಾಡತಕ್ಕ ಸೌಲಭ್ಯವೂ ಕೂಡ ದೊರೆತಿಲ್ಲ. ಇವರಿಗೆ ಅನ್ಯಾಯವಾಗಿದ್ದರೂ ಇವತ್ತು ನಾವು ಬೇಡಿಕೆಗಳನ್ನು ಮಂಜೂರು ಮಾಡುತ್ತಿದ್ದೇವೆ. ಈ ಬೇಡಿಕೆಯ ಬಗ್ಗೆ ರಿಪ್ಲೈ ಕೊಡತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ಎನ್‌ಕ್ವಯರಿ ಕಮೀಷನ್ ನೇಮಕ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಬೇಕು. ಕರ್ನಾಟಕ ರಾಜ್ಯದಲ್ಲಿ ಮೂರ್‍ನಾಲ್ಕು ವರ್ಷಗಳಿಂದ ಎಲ್ಲಾ ಕಾಲೇಜುಗಳಲ್ಲಿ, ಲೋಕಸೇವಾ ಆಯೋಗದಲ್ಲಿ, ವಿಧಾನಸೌಧದಲ್ಲಿ ಯಾರ್‍ಯಾರು ಮೋಸದ ಸರ್ಟಿಫಿಕೇಟ್‌ಗಳನ್ನು ಕೊಟ್ಟು ಕೆಲಸಕ್ಕೆ ಸೇರಿಕೊಂಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡು ಅವರುಗಳನ್ನು ಕೆಲಸದಿಂದ ವಜಾ ಮಾಡಿ. ಈ ರೀತಿ ಅನ್ಯಾಯ ಮಾಡಿ ಉದ್ಯೋಗ ಪಡೆದುಕೊಳ್ಳುತ್ತಿರುವವರನ್ನು ಮುಂದಕ್ಕೆ ಬಿಡಬೇಡಿ. ಆ ಕೆಲಸವನ್ನು ಮೊದಲು ಮಾಡು ತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ ಮದಕರಿನಾಯಕ, ಶಿವಪ್ಪನಾಯಕ ಅವರ ಹೆಸರು

ಹೇಳಿಕೊಂಡು ಷೆಡ್ಯೂಲ್ಡ್ ಟ್ರೈಬ್ ಹೆಸರಿನಲ್ಲಿ ವಿಧಾನಸೌಧಕ್ಕೆ ಶಾಸಕರಾಗಿ ಬರುವುದಾದರೆ ಬ್ರಾಹ್ಮಣರು, ಲಿಂಗಾಯಿತರು ಪ್ರತಿಯೊಬ್ಬರೂ ಕೂಡ ಕಾಡುಕುರುಬರು ನಾಯಕರು ಎಂದು ಹೆಸರಿಟ್ಟುಕೊಂಡು ಸರ್ಟಿಫಿಕೇಟ್ ಪಡೆದುಕೊಂಡು ಬರಬಹುದು. ಇವತ್ತಿನ ದಿವಸ ತಹಶೀಲ್ದಾರ್‌ರವರು ಜನರಿಗೆ ಮೋಸ ಮಾಡುತ್ತಿದ್ದಾರೆ. ಇದರ ಬಗ್ಗೆ ದೀರ್ಘ ತನಿಖೆಯಾಗಬೇಕು. ಇದರ ಬಗ್ಗೆ ಸುದೀರ್ಘವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ. ಆ ಕೆಲಸವನ್ನು ಮಾಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ನಮ್ಮ ಸಮಾಜದಲ್ಲಿ ಮಹಿಳೆಯರ ಗತಿ ಏನಾಗಿದೆ ಎಂಬುದನ್ನು ಸ್ವಲ್ಪ ಹೇಳುತ್ತೇನೆ. ಒಂದು ಕಡೆ ಸರ್ವೀಸ್ ಆದವರನ್ನು ೫ ವರ್ಷದ ಮೇಲೆ ಬೇರೆ ಕಡೆಗೆ ವರ್ಗ ಮಾಡಬೇಕೆಂದು ಒಂದು ನೋಟಿಫಿಕೇಷನ್ ತಂದಿದ್ದಾರೆ. ಅಂದರೆ ಯಾರನ್ನು ವರ್ಗ ಮಾಡಬೇಕು ? ಹಣ ಇದ್ದವರನ್ನು ಮಾಡಬೇಕೇ ಅಥವಾ ಸಕಲ ಅನುಕೂಲಗಳೂ ಇದ್ದವರನ್ನು ಮಾಡಬೇಕೇ ಅಥವಾ ಕೇವಲ ೨೦೦, ೩೦೦, ೪೦೦ ರೂ. ಗಳ ಸಂಬಳ ಬರುವವರನ್ನು ಮಾಡಬೇಕೇ ? ಮಹಿಳಾ ಟೈಪಿಸ್ಟ್ ಒಬ್ಬರನ್ನು ದೂರದ ಮೂಡಿಗೆರೆಗೆ ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಆದರೆ ಅವರಿಗೆ ಕಳೆದ ಒಂದು ವರ್ಷದಿಂದ ಅಲ್ಲಿ ವಾಸಕ್ಕೆ ಮನೆ ಸಿಕ್ಕಿಲ್ಲ. ಅದೇ ಗಂಡಸರಾದರೆ ಕಚೇರಿಯಲ್ಲಿರುವ ಟೇಬಲ್ ಮೇಲೆ ಬೇಕಾದರೆ ಮಲಗುತ್ತಾರೆ, ಆದರೆ ಹೆಂಗಸರಾದರೆ ಏನು ಮಾಡಬೇಕು ? ಇನ್ನು ಮುಂದೆ ಈ ರೀತಿ ಮಾಡಬೇಡಿ. ಒಬ್ಬರಿಗೆ ಅನುಕೂಲ ಮಾಡಿಕೊಡಲು ಇನ್ನೊಬ್ಬರಿಗೆ ಅನಾನುಕೂಲ ಮಾಡಬೇಡಿ. ನಾಲ್ಕನೇ ದರ್ಜೆ ನೌಕರರನ್ನು ಹಾಗೂ ಟೈಪಿಸ್ಟ್‌ಗಳನ್ನು ದೂರದ ಪ್ರದೇಶಕ್ಕೆ ತಾವು ವರ್ಗ ಮಾಡುವುದಾದರೆ ಅವರು ಹೋಗಬೇಕಾದ ಕಡೆಗಳಲ್ಲಿ ಮನೆಗಳನ್ನು ಒದಗಿಸುವುದಿದ್ದರೆ ಮಾತ್ರ ವರ್ಗ ಮಾಡಿ, ಇಲ್ಲದಿದ್ದರೆ ಇಂತಹ ಸಣ್ಣಪುಟ್ಟ ನೌಕರರಿಗೆ ಕಷ್ಟ ಕೊಡಬೇಡಿ ಎಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಶ್ರೀ ಎಸ್, ಆರ್. ಬೊಮ್ಮಾಯಿ.—ವರ್ಗ ಮಾಡಬಾರದೆಂದು ತಮ್ಮ ಅಭಿಪ್ರಾಯವೇ ?

ಕುಮಾರಿ ಎಸ್. ಪ್ರಮಿಳ,—ಮಾಡಬಾರದೆಂದು ನಾನು ಹೇಳುವುದಿಲ್ಲ. ಸಂಬಳ ಜಾಸ್ತಿ ತೆಗೆದುಕೊಳ್ಳುವವರನ್ನು ಮತ್ತು ಮನೆ ಮಾಡಲು ಶಕ್ತಿ ಇರುವವರನ್ನು ವರ್ಗ ಮಾಡಲಿ. ಇಂತಹ ಶಕ್ತಿ ಇಲ್ಲದವರನ್ನು ದೂರದ ಊರಿಗೆ ಹಾಕಿದರೆ ಬಹಳ ಕಷ್ಟವಾಗುತ್ತದೆಂದು ನಾನು ಹೇಳಿದ್ದು.

ಇನ್ನು ಶ್ರೀಮತಿ ಅನುಸೂಯ ಗಜಾನನಶರ್ಮಾ ಅವರು ಹೆಣ್ಣಿನ ಕಷ್ಟಗಳೇನೆಂಬುದನ್ನು ಬಹಳ ಚೆನ್ನಾಗಿ ಹೇಳಿದರು. ವರದಕ್ಷಿಣೆಯ ಒಂದು ಪಿಡುಗಿಗೆ ಬಲಿಯಾಗುವಂತಹ ಹೆಣ್ಣಿನ ಒಂದು ಚಿತ್ರವನ್ನು ಅವರು ಬಿಡಿಸಿ ಬಿಡಿಸಿ ಹೇಳಿದರು. ಬಹಳ ಹಿಂದೆಯೇ ದಿವಂಗತ ಟಿ. ಪಿ. ಕೈಲಾಸಂ ಅವರು 'ತಾಳಿ ಕಟ್ಟಕೂ ಕೂಲೀನೆ' ಎಂಬ ನಾಟಕ ಬರೆದಿದ್ದರು. ಇದು ಇಂದು ಬಹಳ ದೊಡ್ಡದಾಗಿ ಬೆಳೆದಿದೆ. ಇವೊತ್ತು ಮದುವೆಯಾಗುವಂತಹ ಗಂಡುಗಳು ವರದಕ್ಷಿಣೆ ಎಂದು ಹತ್ತು ಸಾವಿರ ರೂ. ಗಳು, ಟ್ರಾನ್ಸ್‌ಸಿಸ್ಟರ್, ರೆಫ್ರಿಜಿರೇಟರ್, ಸ್ಕೂಟರ್ ಹೀಗೆ ನಾನಾ ವಸ್ತುಗಳನ್ನು ಪಡೆಯುವುದರ ಮೂಲಕ ತಮ್ಮನ್ನು ತಾವೇ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ನೋಡಿದರೆ ನಮಗೆ ದುಃಖವಾಗುತ್ತದೆ. ಎಲ್ಲಿಯವರೆಗೆ ಇವರು ತಮ್ಮನ್ನು ತಾವೆ ಮಾರಾಟ ಮಾಡಿಕೊಳ್ಳುವುದನ್ನು ನಿಲ್ಲಿಸುವುದಿಲ್ಲ ಅಲ್ಲಿಯವರೆಗೆ ಈ ಸಮಾಜ ಉದ್ಧಾರವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಹೆಣ್ಣುಗಳು ಮಾರಾಟಕ್ಕಿರುವ ವಸ್ತುಗಳಾಗಿಬಿಟ್ಟಿದ್ದಾರೆ. ಹಿಂದೆ ರೋಮ್‌ನಲ್ಲಿ ನರಮನುಷ್ಯರನ್ನು ಮಾರಾಟದ ವಸ್ತು ಎಂದು ಭಾವಿಸುತ್ತಿದ್ದರು. ಅದೇ ರೀತಿ ಇವರುಗಳು ನಮ್ಮಲ್ಲಿ ಇಂದು ಕೊಂಡುಕೊಳ್ಳುವ ವಸ್ತುಗಳಾಗಿ ಮಾರ್ಪಾಡಾಗಿದ್ದಾರೆ. ಇದರಲ್ಲಿ ಇಂದು ಮನುಷ್ಯತ್ವ ಉಳಿದಿಲ್ಲ, ಮಾನವೀಯತೆ ಉಳಿದಿಲ್ಲ. ಇಂತಹ ಗಂಡು ಮಕ್ಕಳಿಗೆ ಏನು ಪ್ರಯೋಗವಾಗಬೇಕೆಂಬುದರ ಬಗ್ಗೆ ನಮ್ಮ ಸಮಾಜ ಯೋಚನೆ ಮಾಡಬೇಕಾಗಿದೆ.

ಶ್ರೀ ಜಿ. ಕೆ. ತಕ್ಕೇದ್.—ಕುಮಾರಿ ಪ್ರಮಿಳಾ ಅವರು ವರದಕ್ಷಿಣೆ ಬಗ್ಗೆ ಹೇಳುತ್ತಿದ್ದಾರೆ. ಆದರೆ ನಮ್ಮಲ್ಲಿ ಮದುವೆಯಾಗಬೇಕಾದ ಗಂಡು ಮಕ್ಕಳು ಹೆಣ್ಣಿಗೆ 'ತೆರ' ಎಂದು ಕೊಡಬೇಕಾಗಿದೆ. ತೆರವು ಕೊಡದಿದ್ದರೆ ಹೆಣ್ಣು ಕೊಡುವುದಿಲ್ಲ. ಇದು ನಮ್ಮಲ್ಲಿ ಇನ್ನೂ ಜಾರಿಯಲ್ಲಿದೆ. ಇದನ್ನು ನಾವು ಎಲ್ಲಿಂದ ತಂದು ಕೊಡುವುದು. ಇದನ್ನು ಕೊಡಮೀ ನಮಗೆ ಸಂಕಟವಾಗುತ್ತದೆ. ಆದರೆ ಇದರ ಬಗ್ಗೆ ಶ್ರೀಮತಿ ಅನುಸೂಯಗಜಾನನಶರ್ಮಾ ಅವರಾಗಲೀ ಕುಮಾರಿ ಪ್ರಮಿಳಾ ಅವರಾಗಲೀ ಏನನ್ನೂ ಹೇಳಲಿಲ್ಲ.

ಶ್ರೀಮತಿ ಅನಸೂಯ ಗಜಾನನಶರ್ಮಾ.—ಆ ಭಾಗದಲ್ಲಿ ತೆರವು ವಿಚಾರದಲ್ಲಿ ಯಾವ ಗಂಡಸರೂ ಸುಟ್ಟುಕೊಂಡು ಇಲ್ಲಿಯವರೆಗೆ ಸಾಯಲಿಲ್ಲ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಈಗ ಶ್ರೀಮತಿ ಪ್ರಮಿಳಾ ಅವರು ಒಂದು ಗಂಭೀರವಾದಂಥ ಸಮಸ್ಯೆ ಬಗ್ಗೆ ಹೇಳುತ್ತಿದ್ದಾರೆ. ಅವರು ವರದಕ್ಷಿಣೆ ಬಗ್ಗೆ ಮಾತನಾಡುತ್ತಿದ್ದಾರೆ. ಆದ ಕಾರಣ ಈ ಬಗ್ಗೆ ಬೇರೆಯವರು ಲೈಟಾಗಿ ತೆಗೆದುಕೊಂಡು ಮಾತನಾಡುವುದು ಸರಿಯಲ್ಲ. ಅವರು ಹೇಳುವುದನ್ನು ಸರಿಯಾದ ಗಮನ ಕೊಟ್ಟು ಕೇಳುವುದು ಅಗತ್ಯವೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಕೆ. ತಕ್ಕೇದ್.—'ತೆರವು' ಬಗ್ಗೆ ಸಹ ಅವರು ಮಾತನಾಡಲಿ ಎಂದು ನಾನು ಕೇಳಿದ್ದು.

SRI K BHASKAR NAIDU.—I am on a point of order. When the hon'ble Member Kum. Pramila started speaking, he accused the Government for not having put the Women and Children Welfare's Demand first in the agenda. According to the Agenda, the first Demand to be taken up for discussion is Social Welfare. When she got her chance she did not initiate her speech from the Women and Children Welfare Department, but she initiated from the Social Welfare Department. Why this discrimination ? I think this point shonld be upheld.

ಕುಮಾರಿ ಪ್ರಮಿಳಾ.—ಹೆಣ್ಣು ಈ ಸಮಾಜದ ಒಂದು ಅಂಗ, ಆದ ಕಾರಣ ಸಮಾಜ ಕಲ್ಯಾಣ ಇಲಾಖೆಯವರು ಈ ನಮ್ಮ ಸಮಾಜದ ಕಲ್ಯಾಣ ಮಾಡುವಾಗ ಹೆಣ್ಣು ಮಕ್ಕಳನ್ನು ಸಹ ಸೇರಿಸಿಕೊಂಡು ಸಮಾಜ ಕಲ್ಯಾಣ ಮಾಡುವುದು ಒಳ್ಳೆಯದೆಂದು ಹೇಳುವುದಕ್ಕಾಗಿ ನಾನು ಈ ಇಲಾಖೆಯ ಮೇಲೆ ಮೊದಲು ಮಾತನಾಡಲು ಪ್ರಾರಂಭ ಮಾಡಿದೆ. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು ನಮ್ಮ ಸರ್ಕಾರದವರು ಡೌರಿ ಪ್ರಾಹಿಬಿಷನ್ ಆಕ್ಟ್ ತಂದಿದ್ದಾರೆ. ಇದರಲ್ಲಿ ಎಷ್ಟು ಲೋಪ ದೋಷಗಳಿವೆ ಎಂಬುದರ ಕಡೆಗೆ ನಮ್ಮ ದೃಷ್ಟಿಕೋನವನ್ನು ಹರಿಸಬೇಕಾಗಿದೆ. ಮದ್ರಾಸ್ ಮುಂತಾದ ಕೆಲವು ರಾಜ್ಯಗಳಲ್ಲಿ ಇಂತಹ ಒಂದು ಆಕ್ಟ್‌ಗೆ ಸಂಬಂಧಪಟ್ಟಂತೆ ರೂಲ್ಸ್ ಫ್ರೇಮ್ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಇನ್ನೂ ರೂಲ್ಸ್ ಫ್ರೇಮ್ ಮಾಡಿಲ್ಲ. ಇದೇ ಕಾರಣದಿಂದ ಅನೇಕ ಹೆಣ್ಣು ಮಕ್ಕಳಿಗೆ ಅವರ ಅತ್ತೆ ಮಾವಂದಿರು ಹಾಗೂ ಗಂಡಂದಿರು ಸೇರಿಕೊಂಡು ಇಲ್ಲದ ತೊಂದರೆ ಕೊಡುವುದರ ಮೂಲಕ ಸೀಮೆಣ್ಣೆ ಸುರಿದು ಬೆಂಕಿಗೆ ಆಹುತಿ ಕೊಡುತ್ತಿದ್ದಾರೆ. ಈ ರೀತಿ ಮಾಡಿದ ನಂತರ ಅವರು ತಾವಾಗಿಯೇ ಸುಟ್ಟುಕೊಂಡರೆಂದು ಹೇಳಿ ಆಸ್ಪತ್ರೆಗೆ ತಂದು ಸೇರಿಸುತ್ತಾರೆ. ನಿಜ ಪರಿಸ್ಥಿತಿ ತಿಳಿದವರು ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೈಂಟ್ ಕೊಟ್ಟರೆ ಅವರು ತೆಗೆದುಕೊಳ್ಳುವುದೇ ಇಲ್ಲ. ನಮ್ಮ ಸಮಾಜದಲ್ಲಿ ಇಂತಹ ಒಂದು ವಿಪರ್ಯಾಸವಿರಲು ಕಾರಣವೇನೆಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಸರ್ಕಾರದವರು ಈ ಒಂದು ಕಾನೂನನ್ನು ಜಾರಿಗೆ ತಂದ ಮೇಲೆ ಇಲ್ಲಿಯವರೆಗೆ ಎಷ್ಟು ಕೇಸ್‌ಗಳನ್ನು ಹಾಕಿದ್ದಾರೆ ಮತ್ತು ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕೊಡಬೇಕು, ಈ ಪ್ರಶ್ನೆ ಕೇಳಲು ನಮ್ಮ ಸಮಾಜಕ್ಕೆ ಹಕ್ಕಿದೆ. ಜನರ ಕಣ್ಣೊರೆಸಲು ಇಂತಹ ಒಂದು ಕಾನೂನನ್ನು ತಾವು ತಂದಿದ್ದೀರೇ ಹೊರತು ನಿಜವಾಗಿಯೂ ಅನುಷ್ಠಾನದಲ್ಲಿ ತರಲು ತಾವು ಮನಸ್ಸು ಮಾಡಿಲ್ಲ, ಎಲ್ಲಿಯವರೆಗೆ ತಾವು ವರದಕ್ಷಿಣೆಯನ್ನು ಸಂಪೂರ್ಣವಾಗಿ ನಿಷೇಧ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಕಾನೂನು ಊರ್ಜಿತವಾಗುವುದಿಲ್ಲ. ಆದ ಕಾರಣ ಇದರ ಬಗ್ಗೆ ತಾವು ಸರಿಯಾಗಿ ಯೋಚನೆ ಮಾಡಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಇದಕ್ಕೆ ಸೂಕ್ತವಾದ ಪರಿಹಾರವೆಂದರೆ, ಯಾರು ಮದುವೆ ಮಾಡಿಕೊಳ್ಳುವುದಕ್ಕೆ ಮುಂದೆ ಬರುತ್ತಾರೋ ಅವರ ಕುಲಗೋತ್ರಗಳನ್ನು ತಿಳಿದುಕೊಳ್ಳುವಂತಹ ಒಂದು ರಿಜಿಸ್ಟರ್‌ನ್ನು ತಾವು ಮೇನ್‌ಟೇನ್ ಮಾಡಬೇಕು. ಅವರ ಮನೆತನ ಎಂಥಾದ್ದು, ಅವರು ತಮ್ಮ ಹೆಣ್ಣುಮಕ್ಕಳನ್ನು ಹಾಗೂ ಅಕ್ಕತಂಗಿಯರನ್ನು ಯಾವ ರೀತಿ ನೋಡಿಕೊಳ್ಳುತ್ತಾರೆ ಎಂಬತಕ್ಕಂಥ ಪೂರ್ಣ ಮಾಹಿತಿ ಆ ರಿಜಿಸ್ಟರ್‌ನಲ್ಲಿರಬೇಕು. ಇದಕ್ಕಾಗಿ ತಾವು ಒಂದು ಮ್ಯಾಟ್ರಿಮೋನಿಯಲ್ ಕೌನ್ಸಿಲ್ ಸೆಂಟರ್ ಎಂದು ಅಥವಾ ಬೇರೆ ಯಾವುದಾದರೂ ಒಂದು ಹೆಸರಿನ ಸಂಸ್ಥೆಯನ್ನು ತೆರೆಯುವುದರ ಮೂಲಕ ಅಲ್ಲಿ ಎಲ್ಲ ಗಂಡುಮಕ್ಕಳ ವಿವರಗಳನ್ನು ಇಡ

ಬೇಕು. ಈ ರೀತಿ ಮಾಡಿದರೆ ಹೆಣ್ಣುಮಕ್ಕಳಿರುವವರು ಅಲ್ಲಿಗೆ ಹೋಗಿ ಸರಿಯಾದ ವಿವರಗಳನ್ನು ಮತ್ತು ವರನನ್ನು ನೋಡಿ ಮದುವೆ ಮಾಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಹೆಣ್ಣುಮಕ್ಕಳಿಗೆ ಬಹಳ ಕಷ್ಟವಾಗುತ್ತದೆ. ಗಂಡನ ಮನೆಗೆ ಹೊರಟ ಹೆಣ್ಣು ಹುಟ್ಟಿಗೆ ಮನೆಗೆ ಹೂವು ತರುತ್ತೇನೆ ಹೊರತು ಹುಲ್ಲು ತರುವುದಿಲ್ಲವೆಂದು ಹೇಳಿ ಹೋಗುವುದರಿಂದ ಗಂಡನ ಮನೆಯಲ್ಲಿ ಎಷ್ಟೇ ಕಷ್ಟ ಬಂದರೂ ಸಹಿಸಿಕೊಂಡು ಇರುತ್ತಾಳೆಯೇ ಹೊರತು ತಾಯಿ ಮನೆಗೆ ಬಂದು ತನ್ನ ಕಷ್ಟವನ್ನು ಹೇಳಿ ಕೊಳ್ಳುವುದಿಲ್ಲ. ನಾನು ವಕೀಲಳಾಗಿ ಹೆಣ್ಣುಮಕ್ಕಳು ಎಂತಹ ಕಷ್ಟಗಳನ್ನು ಅನುಭವಿಸಬೇಕಾಗಿದೆ ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅದೇ ವಿದೇಶಗಳಲ್ಲಿಯಾದರೆ ಪ್ರತಿ ವರ್ಷವೂ ಕಡ್ಡಾಯ ವಾಗಿ ಹೆಣ್ಣುಮಕ್ಕಳ ದೇಹ ಪರೀಕ್ಷೆಯಾಗಬೇಕೆಂದು ಒಂದು ಕಾನೂನು ತಂದಿದ್ದಾರೆ. ಅಲ್ಲಿ ಈ ಕಾನೂನು ಪ್ರಕಾರ ಪ್ರತಿ ಮಹಿಳೆಯನ್ನು ಸಹ ಪರೀಕ್ಷೆಗೆ ಒಳಪಡಿಸುತ್ತಾರೆ. ಮಹಿಳೆಯರ ಆರೋಗ್ಯ ಸರಿಯಾಗಿದೆಯೇ ಎಂಬುದನ್ನು ನೋಡುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಆಕೆಯ ಮನೆಯವರು ಏನಾದರು ಹೊಡೆದುಬಡಿದು ಕಷ್ಟ ಕೊಟ್ಟಿದ್ದಾರೆಯೇ, ಅದಕ್ಕೆ ಸಂಬಂಧಪಟ್ಟಂತೆ ದೇಹದ ಮೇಲೆ ಏನಾದರು ಗುರುತು ಇದೆಯೇ ಎಂಬುದನ್ನು ತಿಳಿದುಕೊಳ್ಳುವ ಏಕಮಾತ್ರ ಉದ್ದೇಶ ದಿಂದ ಈ ಕಾನೂನನ್ನು ಅವರು ಜಾರಿಗೆ ತಂದಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಸಹ ಇಂತಹ ಕಾನೂನನ್ನು ಮಹಿಳೆಯರ ಕಲ್ಯಾಣವನ್ನು ಸಾಧಿಸುವ ದೃಷ್ಟಿಯಿಂದ ಮದುವೆಯಾದ ಪ್ರತಿ ಹೆಂಗಸಿಗೂ ಅನ್ವಯವಾಗುವಂತೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಓರ್ವ ಮಹಿಳೆ ಅನುಭವಿಸಿದ ಕಷ್ಟವನ್ನು ಇಲ್ಲಿ ಹೇಳಲು ನನಗೆ ದುಃಖವಾಗುತ್ತದೆ. ಈಕೆಗೆ ಮದುವೆಯಾಗಿ ಕೇವಲ ಒಂದೂವರೆ ವರ್ಷವಾಗಿತ್ತು. ತನ್ನ ಗಂಡ ಕೊಡುವ ಕಷ್ಟವನ್ನು ತಂದೆ ಮನೆಗೆ ಬಂದು ಹೇಳಿ ಕೊಳ್ಳುವ ಪರಿಸ್ಥಿತಿ ಕೂಡ ಈಕೆಗೆ ಇರಲಿಲ್ಲ.

ಅವಳು ಎಷ್ಟು ಕೇಳಿಕೊಂಡಾಗಲೂ ಕೂಡ ಗಂಡನಾದವನು ಅವಳ ಮಾತನ್ನು ಕೇಳದೆ ಅವಳನ್ನು ಒದ್ದಿದ್ದಾನೆ ಅವನು ಕುಡಿದ ಅಮಲ್‌ನಲ್ಲಿ ಸಿಗರೇಟ್ ಸೇದುತ್ತಿದ್ದ ಅಮಲ್‌ನಲ್ಲೇ ವಿಕಟ ಅಟ್ಟಹಾಸ ದಿಂದ ನಗುತ್ತಾ ಮೈಮೇಲೆ ಗಾಯ ಮಾಡಿ ಹಿಂಸೆ ಕೊಟ್ಟಿದ್ದಾನೆ. ರಾತ್ರಿಯಲ್ಲಾ ಆ ಸಿಗರೇಟಿನಿಂದ ಆಕೆಯ ದೇಹಕ್ಕೆ ಸುಟ್ಟು ಹಿಂಸೆ ಮಾಡಿದ್ದಾನೆ. ಆದರೂ ಅವಳು ಬೆಳಗಾದ ಮೇಲೆ ತನ್ನ ಮಾನ ಮರ್ಯಾದೆ ಮುಚ್ಚಿಕೊಳ್ಳಲು ಈ ಸಮಾಜದಲ್ಲಿ ತಾನೂ ಕೂಡ ಒಬ್ಬ ಗೌರವಾನ್ವಿತ ಮಹಿಳೆಯಾಗಬೇಕಲ್ಲಾ ಎಂದು ಬಹಳ ನೊಂದುಕೊಂಡು ರಾತ್ರಿಯಲ್ಲಾ ತಾನು ಅನುಭವಿಸಿದ ಕಷ್ಟವನ್ನೂ ಸಹಿಸಿಕೊಂಡು ಬೆಳಗಾದ ಮೇಲೆ ತನ್ನ ಬಾಳುವೆ ನಡೆಸುತಿದ್ದಾಳೆ. ಈರೀತಿಯಾಗಿ ಹೆಂಗಸರನ್ನು ಕೆಲವರು ಕಾಣುತ್ತಾ ಇದ್ದಾರೆ. ಸಮಾಜದಲ್ಲಿ ಇವಳೂ ಒಬ್ಬ ಗೌರವಾನ್ವಿತ ಮಹಿಳೆಯಾಗಿರಬೇಕು ಅನ್ನುವುದಾದರೆ ಗಂಡ ನಾದವನು ಇವಳಿಗೆ ಏನು ಚಿತ್ರಹಿಂಸೆ ಕೊಡುತ್ತಾನೋ ಇದನ್ನು ತಪ್ಪಿಸಬೇಕಾದರೆ ಇಂಥಾ ಮಹಿಳೆಯರ ಗಂಡಂದಿರನ್ನು ದೂರ ಮಾಡತಕ್ಕಂಥಾ ಒಂದು ಕಾನೂನನ್ನು ತರಬೇಕಾಗಿದೆ, ಈ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಕಾನೂನು ತರಬೇಕು. ಗಂಡಸರಾದವರು ರಾತ್ರಿ ಹೊತ್ತು ಕುಡಿದುಬಿಟ್ಟು ಆ ಅಮಲ್‌ನಲ್ಲಿ ಹೆಂಗಸರನ್ನು ಇಂಥಾ ಒಂದು ಹಿಂಸೆಗೆ ಈಡುಮಾಡುತ್ತಾರೆ. ಅದಕ್ಕೋಸ್ಕರವಾಗಿಯೇ ಮಹಾತ್ಮಾಗಾಂಧೀಜಿಯವರು ಸಮಾಜವನ್ನು ಒಂದು ಒಳ್ಳೆಯ ದಾರಿಗೆ ತರಬೇಕಂತಲೇ ಪ್ರೊಹಿಬಿಷನ್ ಆಕ್ಟನ್ನು ಜಾರಿಗೆ ತರಬೇಕೆಂದು ಹೇಳಿದ್ದರು. ಆದರೆ ಇದುವರೆಗೂ ಆ ಪಾನನಿರೋಧವನ್ನು ಜಾರಿಗೆ ತಂದಿಲ್ಲಾ. ಈ ಸರ್ಕಾರ ಪುರುಷರ ಸರ್ಕಾರ. ನಿಮಗೆ ದುಡ್ಡು ಬೇಕಾಗಿದೆ, ಸಮಾಜ ಒಳ್ಳೆಯ ತಳಹದಿ ಮೇಲೆ ನಿಲ್ಲಬೇಕು ಎನ್ನುವ ಯೋಚನೆ ಇಲ್ಲ, ನಿಮಗೆ ಬೇಕಾಗಿರುವುದು ದುಡ್ಡು. ಅದಕ್ಕಾಗಿ ಈ ಅಬ್ಕಾರಿ ಇಲಾಖೆಯನ್ನು ಉಳಿಸಿಕೊಂಡಿದ್ದಾರೆ. ಇದರಿಂದ ನಿಮಗೆ ಕೋಟಿಗಟ್ಟಲೆ ದುಡ್ಡು ಬರುತ್ತದೆ ಅಂತ ಹಾಗೆ ಇಟ್ಟುಕೊಂಡಿದ್ದೀರಾ ? ಇಡೀ ಕರ್ನಾಟಕದಲ್ಲಿರತಕ್ಕಂಥಾ ಹೆಣ್ಣು ಮಕ್ಕಳ ಜೀವನದ ಯಾತ್ರೆ ನೋಡಿದರೆ ನರಕಯಾತ್ರೆ ಆಗುತ್ತಾ ಇದೆ, ಅವರ ಕಲ್ಯಾಣದ ಕಡೆ ನಿಮಗೆ ಯೋಚನೆಯೇ ಇಲ್ಲ. ಈ ಪಾನನಿರೋಧ ಜಾರಿ ಮಾಡದೇ ಇರುವುದರಿಂದ ಆ ಗಂಡಸರು ಚೆನ್ನಾಗಿ ಕುಡಿದು ಬಿಟ್ಟು, ಅಮಲಿನಲ್ಲಿ ಹೆಂಡತಿ ಮತ್ತು ಮಕ್ಕಳನ್ನು ಸರಿಯಾಗಿ ನೋಡದೆ ಅವರಿಗೆ ಚಿತ್ರಹಿಂಸೆ ಕೊಡುತ್ತಿದ್ದಾರೆ. ಇದರ ಪರಿಣಾಮವಾಗಿ ಆ ಹೆಣ್ಣುಮಕ್ಕಳು ತಮ್ಮ ಸಂಸಾರವನ್ನು ಸರಿಯಾಗಿ ಇತರರಂತೆ ತೂಗಿಸಿ ಕೊಂಡು ಹೋಗುವುದು ಬಹಳ ಕಷ್ಟವಾಗಿದೆ. ಆದುದರಿಂದ ಅವರ ಒಂದು ಕಲ್ಯಾಣದ ಕಡೆ ತಾವು ಯೋಚನೆ ಮಾಡಬೇಕು. ಅವರ ಸಂಸಾರವನ್ನು ಸರಿಯಾದ ಒಳ್ಳೆಯ ರೀತಿಯಲ್ಲಿ ಸರಿದೂಗಿಸಿಕೊಂಡು ಹೋಗಬೇಕಾದರೆ ತಾವು ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಇಲ್ಲದೇ ಹೋದರೆ

ಯಾರಾದರೂ ಕುಡಿದು ಬಂದು ಆ ಅಮಲ್‌ನಲ್ಲಿ ಇಂತಹ ಒಂದು ಚಟ ಇಟ್ಟುಕೊಂಡು ಈ ಹೆಂಗಸರಿಗೆ ಚಿತ್ರಹಿಂಸೆ ಕೊಡುತ್ತಾರೋ ಅಂಥ ಪಾನಮತ್ತರಾದ ಗಂಡಸರಿಗೆ ಹೆಣ್ಣಿನ ಬಳಿ ಪ್ರವೇಶವಿಲ್ಲಾ ಅನ್ನುವ ಒಂದು ಕಾನೂನು ಜಾರಿಗೆ ತರಬೇಕು ಎಂದು ನಾನು ಹೇಳುತ್ತೇನೆ.

SRI K. BHASKAR NAIDU.—Sir, I rise to a point of order, I am hearing the hon. Member Smt. S. Pramila accusing the men. There are so many families who are leading happy life. But, in between some woman comes and she spoils the happy life of that family. What punishment should be given to such a woman? There must be some provision to prosecute such a women. Murders have happened only because of other woman. Number of families have been ruined. The hon. Member Smt. S. Pramila is a learned Lawyer, who argues almost everyday in the High Court. Can she say what punishment should be given to the woman who comes in between a couple who is leading a happy married life and shatters their happiness?

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಇದೇ ರೀತಿ ಮಾತನಾಡಿ ಎಂದು ನಾನು ಬಲವಂತ ಮಾಡುವುದಕ್ಕಾಗುವುದಿಲ್ಲ.

ಕುಮಾರಿ ಎಸ್. ಪ್ರಮೀಳ.—ಅದರ ಬಗ್ಗೆ ಬೇಕಾದರೆ ಮಾತನಾಡೋಣ. ಬೇಕಾದರೆ ಒಂದು ವ್ಯಾಖ್ಯಾನವನ್ನೇ ಮಾಡೋಣ. ನಾನು ಈಗ ಹೇಳುತ್ತಾ ಇರುವುದೇನೆಂದರೆ ಈ ವರದಕ್ಷಿಣೆಯು ಒಂದು ಪೆಡಂಭೂತ ಏನು ಇದೆ, ಈ ಒಂದು ಸಮಾಜದಲ್ಲಿ ವರದಕ್ಷಿಣೆಯು ಒಂದು ಪೆಡಂಭೂತ ಏನು ಇದೆ, ಇದು ಕೇವಲ ಗಂಡನಿಂದ ಮಾತ್ರ ಹೆಂಡತಿಗೆ ಕಷ್ಟ ಆಗುತ್ತಿದೆ ಎಂದು ಹೇಳಲಿಲ್ಲ, ಮನೆಯಲ್ಲಿರುವ ಅತ್ತೆ ನಾದಿನಿ, ಸೊಸೆ ಮತ್ತೆ ಯಾರ್ಯಾರು ಇದ್ದಾರೋ ಎಲ್ಲರಿಂದಲೂ ಕಷ್ಟವಾಗುತ್ತಿದೆ. ಆದ್ದರಿಂದ ಆ ಹೆಣ್ಣಿನ ಪರಿಸ್ಥಿತಿಯನ್ನು ಗಂಡನಾದವನು ಅರ್ಥಮಾಡಿಕೊಳ್ಳಬೇಕು. ಯಾವ ಹೆಣ್ಣನ್ನು ತೌರುಮನೆಯಿಂದ ಇನ್ನೊಬ್ಬರ ಮನೆಯ ಬಾಗಿಲಿಗೆ ಕಳುಹಿಸುತ್ತೇವೋ ಅದನ್ನು ಗಂಡನಾದವನು ಅರ್ಥಮಾಡಿಕೊಂಡು ಯಾವ ರೀತಿಯಾಗಿ ನಿಜ ಜೀವನ ಮಾಡಬೇಕೋ ಆ ರೀತಿ ಮಾಡಿದ್ದೇ ಆದರೆ ಯಾರಿಗೂ ತೊಂದರೆ ಇಲ್ಲ. ಹಾಗೆ ಮಾಡದೇ ಹೋದರೆ ನಾನು ಮೊದಲೇ ಹೇಳಿದಂತೆ ಆಕೆಗೆ ಚಿತ್ರಹಿಂಸೆ ಕೊಟ್ಟು ಯಾವರೀತಿಯಾಗಿ ಗೌರವಾನ್ವಿತವಾಗಿ ಕಾಣಬೇಕೋ ಆ ರೀತಿ ಕಾಣದಿದ್ದರೆ ಯಾವ ಹೆಣ್ಣೂ ಕೂಡ ಗಂಡಸರ ಹತ್ತಿರ ಸುಳಿಯುವುದಿಲ್ಲ. ಅದನ್ನು ಮಾನ್ಯ ಸದಸ್ಯರು ಯೋಚನೆ ಮಾಡಿ ಮಾತನಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರೇ, ಇನ್ನು ಮಹಿಳೆಯರ ಕಲ್ಯಾಣ ಎಂಬ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಮಾತ್ರ ಆಡಬೇಕೆಂದಿದ್ದೇನೆ.

SRI K. BHASKAR NAIDU.—Sir, there is a Red light Area and Frazer Street at Bombay. Do men live there? Do men sell their bodies there?

SRI R. RAMDEV.—It is men like you only have driven the women to such a position. ಈ ಹೆಣ್ಣನ್ನು ಆ ದಾರಿಗೆ ತಂದದ್ದು ಯಾರು ಅನ್ನುವುದನ್ನು ಮರೆಯಬೇಡಿ. ಸಮಾಜ ತಂದಿದೆ.

ಕುಮಾರಿ ಎಸ್. ಪ್ರಮೀಳ.—ಅದಕ್ಕೋಸ್ಕರವಾಗಿ ನಾನು ನೀತಾ ಆಕ್ಟ್ ಅನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಈಗ ಇರುವ ಕಾನೂನಿನಲ್ಲಿ ಯಾವ ಹೆಣ್ಣು ಒಂದು ವೇಶ್ಯಾವಾಟಿಕೆಗೆ ಆಗಲಿ ಅನಾಚಾರಕ್ಕಾಗಲಿ, ಅತ್ಯಾಚಾರಕ್ಕಾಗಲಿ ಹೋಗಿದ್ದರೆ ಅವಳಿಗೆ ಮಾತ್ರ ಪನಿಷ್‌ಮೆಂಟ್, ಒಂದು ವೇಳೆ ಗಂಡನಾದವನು ಅನಾಚಾರ, ಅತ್ಯಾಚಾರಕ್ಕೆ ಹೋಗಿದ್ದರೆ ಅವನಿಗೆ ಪನಿಷ್‌ಮೆಂಟ್ ಇಲ್ಲ, ಜೊತೆಗೆ ಇದರ ಬಗ್ಗೆ ಏಜೆಂಟ್ಸ್ ಏನು ಇದ್ದಾರೋ ಅವರಿಗೆ ಪನಿಷ್‌ಮೆಂಟ್ ಇಲ್ಲ. ಆ ಹೆಣ್ಣನ್ನು ಗಂಡ

ನಾದವನು ಹೊಡೆಯಲಿ, ಚಿತ್ರಹಿಂಸೆ ಕೊಡಲಿ, ಏನೂ ಪನಿಷ್‌ಮೆಂಟ್ ಕೊಡುವುದಿಲ್ಲ. ಆದುದರಿಂದ ಇದರ ಬಗ್ಗೆ ತಾವು ವಿಚಾರ ಮಾಡವುದಕ್ಕೆ ಕೇಂದ್ರ ಸರ್ಕಾರದಿಂದ ಸ್ಟ್ಯಾಟಿಸ್‌ಟಿಕ್ಸ್ ಏನಾದರೂ ತರಿಸಿದ್ದೀರಾ ? ಕೇಂದ್ರ ಸರ್ಕಾರದವರು ಇವರ ಬಗೆ ದೀರ್ಘವಾಗಿ ಯೋಚನೆ ಮಾಡಿ ಇದರ ಬಗ್ಗೆ ಕಾನೂನಿನಲ್ಲಿ ಸೂಕ್ತ ಬದಲಾವಣೆ ಮಾಡಲು ಯೋಚನೆ ಮಾಡಿರುವಂತೆ ತಾವೇನಾದರೂ ಯೋಚನೆ ಮಾಡಿದ್ದೀರಾ ?

ಈಗ ಇನ್ನೊಂದು ವಿಚಾರ ಹೇಳಲು ನನಗೆ ಬಹಳ ದುಃಖವಾಗುತ್ತದೆ, ಈ ವಿಚಾರ ಹೇಳಿದರೆ ಹೆಣ್ಣಿನ ಒಂದು ಪರಿಸ್ಥಿತಿ ಏನು ಅನ್ನುವುದು ತಮಗೆಲ್ಲರಿಗೂ ಅರ್ಥವಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥಾ ಮಹಿಳೆಯರ ಪರಿಸ್ಥಿತಿ ಏನಾಗಿದೆ ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸು ತ್ತೇನೆ. ಬೆಂಗಳೂರಿನ ಮಹಿಳೆಯರ ಪರಿಸ್ಥಿತಿ ಆಮೇಲೆ ಹೇಳುತ್ತೇನೆ. ಈಗ ಗುಲ್ಬರ್ಗ ನಗರದ ಮಹಿಳೆಯರ ಪರಿಸ್ಥಿತಿ ಹೇಳುತ್ತೇನೆ. ಗುಲ್ಬರ್ಗಾ ಜಿಲ್ಲೆಯ ಮಹಾಪುರಿ ದೇವಸ್ಥಾನದಲ್ಲಿ ನಡೆಯುತ್ತಾ ಇರುವುದನ್ನು ಹೇಳಬೇಕೆಂದರೆ ಅಲ್ಲಿ ಈವೊತ್ತಿನ ದಿವಸ ಹರಿಜನ ಮಹಿಳೆಯರು ಬೆತ್ತಲೆ ಆಗಿ ಜೋತಿ ಸೇವೆ ಮಾಡುವುದು ಜೋಗತಿಯರಾಗುವುದು, ಬಸವಿ ಬಿಡುವುದು ಮುಂತಾದ ಕ್ರೌರ್ಯಗಳು ನಡೆಯು ತ್ತಿವೆ. ಎಷ್ಟೋ ಹರಿಜನ ಮಹಿಳೆಯರು ಇದಕ್ಕೆ ತುತ್ತಾಗಿದ್ದಾರೆ. ಪೂರ್ಣಿಮೆಯ ದಿವಸ ಈ ಹರಿಜನ ಮಹಿಳೆಯರನ್ನು ಬೆತ್ತಲೆ ಮಾಡಿ ಜ್ಯೋತಿ ಸೇವೆಗೆ ಬಿಡುವುದು ನಡೆಯುತ್ತದೆ, ಅಲ್ಲಿ ಆರತಿ ಮಾಡುತ್ತಾರೆ. ಆ ದಿವಸ ಯಾವ ಗಂಡಸರಾದರೂ ಇಂತಹವರನ್ನು ಕರೆದುಕೊಂಡು ಹೋಗಬಹುದು. ಇದಕ್ಕಾಗಿಯೇ ಕೆಲವು ಏಜೆಂಟರು ಇದ್ದಾರೆ. ಅವರು ಆ ದಿವಸ ಮುಂಬೈ ಮತ್ತು ಗೋವಾ ಈ ಪ್ರದೇಶಗಳಿಗೆ ಈ ಬಸವಿ ಬಿಟ್ಟವರನ್ನು ಕರೆದುಕೊಂಡು ಹೋಗಿ ವೇಶ್ಯೆಯರೆಂದು ಕರೆದು ಅಲ್ಲಿ ಅತ್ಯಾ ಚಾರ ನಡೆಸುತ್ತಾರೆ. ಇದರಿಂದ ಬಂದ ಹಣವನ್ನು ಈ ದಳ್ಳಾಳಿಗಳ ಮುಖಾಂತರ ನಮ್ಮ ಕರ್ನಾಟಕ ದಲ್ಲಿರುವವರಿಗೂ ಸ್ವಲ್ಪ ಭಾಗ ಹಂಚುತ್ತಾರೆ. ಇಂಥಾ ಪರಿಣಾಮಕಾರಿಯಾದ ಕೆಲಸಕ್ಕೆ ತಾವೇನು ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೀರಾ ? ಇನ್ನೊಂದು ವಿಚಾರವೆಂದರೆ ಶ್ರೀಮಾನ್ ತಕ್ಕೇದ್‌ರವರಿಗೆ ಹೇಳಬೇಕಾದರೆ, ಎಲ್ಲಮ್ಮನ ದೇವಸ್ಥಾನದಲ್ಲಿ ನಡೆಯತಕ್ಕಂಥಾದ್ದು. ನಮ್ಮಲ್ಲಿ ೩ ಹುಣ್ಣಿಮೆಗಳು ಇವೆ. (೧) ಭರತ್ ಹುಣ್ಣಿಮೆ, (೨) ರಂಡೆ ಹುಣ್ಣಿಮೆ, (೩) ಬಂಡು ಹುಣ್ಣಿಮೆ ಎಂದು ಇವೆ, ಈ ಮಾತನ್ನು ನಾನು ಬಹಳ ಮನನೊಂದು ಹೇಳುತ್ತಿದ್ದೇನೆ. ಈ ಎಲ್ಲಮ್ಮನ ದೇವಸ್ಥಾನಕ್ಕೆ ಅಮಾನತ್ ಆಗಿ ೧೦ ರಿಂದ ೧೬ ವರ್ಷದ ಆ ಎಳೆ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ ಅವರಿಗೆ ಒಂದು ನಂಬಿಕೆ ಹುಟ್ಟಿಸಿಬಿಟ್ಟು ಜ್ಯೋತಿ ಸೇವೆಗೆ ಬಿಟ್ಟುಬಿಡುತ್ತಾರೆ, ಏನೂ ಅರಿಯದ ಈ ಹಸುಕೂಸುಗಳು ಈ ಒಂದು ಕೆಲಸಕ್ಕೆ ಬಲಿಯಾಗಿಬಿಡುತ್ತಾರೆ. ಇದನ್ನು ತಪ್ಪಿಸುವುದಕ್ಕೆ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಶಾಸಕರಾದವರು ಸಹ ನಮ್ಮ ಹೊಣೆಯನ್ನು ಅರಿತುಕೊಂಡು ಇದನ್ನು ತಪ್ಪಿಸುವುದಕ್ಕೆ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಇಲ್ಲದೇ ಹೋದರೆ ಏನೂ ಅರಿಯದ ಆ ಅತಿಚಿಕ್ಕ ವಯಸ್ಸಿನ ಹೆಣ್ಣುಮಕ್ಕಳು, ಏನೂ ಅರಿಯದ ಆ ಹೆಣ್ಣು ಮಕ್ಕಳು ಈ ಒಂದು ಕ್ರೌರ್ಯಕ್ಕೆ ತುತ್ತಾಗಿ ಬಲಿಯಾಗುತ್ತಾರೆ. ಇದರ ಬಗ್ಗೆ ಏನಾದರೂ ಒಂದು ಕಾನೂನು ಮಾಡಿ ಬೇಕು. ದೇವದಾಸಿ ಪದ್ಧತಿ ಅಂತ ಏನು ಇದೆ ಅದನ್ನು ತೆಗೆದುಹಾಕುವಂತಹ ಒಂದು ಕಾನೂನು ಮಾಡಬೇಕು. ಮಾನ್ಯ ಸಚಿವರಿಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ. ದಿನೇ ದಿನೇ ನಮ್ಮ ಹೆಣ್ಣು ಮಕ್ಕಳನ್ನು ಬೇರೆ ದೇಶಗಳಗೆ ಮಾರಾಟ ಮಾಡಿ ಕರೆದುಕೊಂಡು ಹೋಗುತ್ತಿರುವುದನ್ನು ನೋಡುತ್ತಾ ಇದ್ದೇವೆ, ಹೀಗಾದರೆ ಈ ಸಮಾಜದ ಉದ್ಧಾರವಾಗುತ್ತದೆಯೇ ? ಇಂತಹ ಕೆಲಸ ಮಾಡುವವರು ಯಾರು ? ಮೇಲ್‌ವರ್ಗದ ಗಂಡಸರು. ಮೇಲೆ ಎಂದರೆ ಗಂಡಸು ಅನ್ನುವ ಅರ್ಥ. ವರ್ಗ ಅಂದರೆ ಉತ್ತಮ ವರ್ಗದವರು. ಇವರುಗಳು ಈ ಹೆಣ್ಣುಮಕ್ಕಳನ್ನು ಇಲ್ಲಿಂದ ಕರೆದುಕೊಂಡು ಹೊರ ದೇಶಕ್ಕೆ ಮಾರಾಟ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಹರಿಜನ ಹೆಣ್ಣುಮಕ್ಕಳ ಒಂದು ಪರಿಸ್ಥಿತಿ ಹೀಗೆ ಇದೆ. ಆ ದೇವಸ್ಥಾನದಲ್ಲಿ ಈ ಮೇಲ್ಪಟ್ಟದವರ್ಗದವರು ಯಾರೂ ಹಾಜರು ಇರುವುದಿಲ್ಲ. ಇದಕ್ಕೆ ದಳ್ಳಾಳಿ ಗಳು ಇರುತ್ತಾರೆ. ಅವರು ಈ ದೇವಸ್ಥಾನಕ್ಕೆ ಬರುತ್ತಾರೆ ಅವರು ಆ ದಿವಸ ಇದಕ್ಕಾಗಿಯೇ ಕಾದು ಕುಳಿತುಕೊಂಡಿರುತ್ತಾರೆ. ಇದನ್ನು ನಾವು ನೋಡಬಹುದು. ಬಿಜಾಪುರದಲ್ಲಿ ಒಂದು ಮಾರುತಿ ದೇವಸ್ಥಾನ ಇದೆ. ಆತ ಬ್ರಹ್ಮಚಾರಿ. ಆ ದೇವಸ್ಥಾನಕ್ಕೆ ಇಂಥಾ ಹೆಣ್ಣು ಮಕ್ಕಳನ್ನು ಅವರ ತಂದೆ ತಾಯಿಗಳು ಕರೆದುಕೊಂಡು ಬಂದು ಬಸವಿಗೆ ಅಂತ ಬಿಟ್ಟುಬಿಡುತ್ತಾರೆ. ಹಾಗೆ ಬಸವಿಗೆ ಆ ಹೆಣ್ಣನ್ನು ಬಿಟ್ಟಮೇಲೆ ಅದು ಬೇಕಾದರೆ ಮರಕ್ಕಾದರೂ ಮದುವೆ ಮಾಡಿಕೊಳ್ಳಬಹುದು ಇಲ್ಲವೇ ಯಾವನ್ನಾದರೂ

ಒಬ್ಬನನ್ನು ಕಟ್ಟಿಕೊಂಡು ಹೋಗಬಹುದು, ಈ ತರಹವಾಗಿ ಸಹಸ್ರಾರು ಹೆಣ್ಣುಮಕ್ಕಳನ್ನು ಬಸವಿಗೆ ಬಿಡುವ ಒಂದು ಪದ್ಧತಿ ಬಿಜಾಪುರ ಜಿಲ್ಲೆ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಇದೆ. ಆ ದೇವಸ್ಥಾನದಲ್ಲಿ ಕೆಲವು ದಳ್ಳಾಳಿಗಳು ಬಂದು ಈ ಹೆಣ್ಣುಮಕ್ಕಳನ್ನು ಮುಂಬೈ ಮತ್ತು ಗೋವಾಕ್ಕೆ ಕರೆದುಕೊಂಡು ಹೋಗಿ ಅಲ್ಲಿ ವೇಶ್ಯಾವಾಟಿಕೆ ನಡೆಸುತ್ತಾರೆ. ಕೆಲವು ಹೆಣ್ಣುಮಕ್ಕಳನ್ನು ಶ್ರೀಮಂತ ರಾಷ್ಟ್ರಗಳಿಗೆ ಮಾರುವುದೂ ಉಂಟು. ಇಂಥಾ ಒಂದು ಪರಿಸ್ಥಿತಿ ನಮ್ಮ ರಾಜ್ಯದ ಹೆಣ್ಣು ಮಕ್ಕಳಿಗೆ ಬಂದಿದೆ. ಹಾಗಾದರೆ ನಾನು ಕೇಳುತ್ತೇನೆ, ಹೆಚ್ಚಾಗಿ ಹುಟ್ಟುವುದು ತಪ್ಪೆ, ಈ ಸಣ್ಣ ಹೆಣ್ಣು ಮಕ್ಕಳನ್ನು ಏನೂ ಅರಿಯದ ೧೫ ರಿಂದ ೧೬ ವರ್ಷ ವಯಸ್ಸಿನೊಳಗಿರುವ ಹೆಣ್ಣು ಮಕ್ಕಳನ್ನು, ಆಗತಾನೇ ಕಣ್ಣು ಬಿಡುತ್ತಿರುವ ಈ ಹೆಣ್ಣು ಮಕ್ಕಳನ್ನು ಇನ್ನೂ ಸಂಸಾರ ಏನು ಅನ್ನುವುದು ನಿಜವಾಗಿಯೂ ನೋಡಿಲ್ಲದಂತಹ ಸಮಯದಲ್ಲಿ ಅವರ ಕಣ್ಣು ತಪ್ಪಿಸಿ ಅವರ ತಂದೆತಾಯಿಗಳು ಆ ದೇವಸ್ಥಾನಕ್ಕೆ ಕರೆದುಕೊಂಡು ಬಂದು ಬಸವಿ ಅಂತ ಬಿಟ್ಟು ಈ ರೀತಿ ಮಾಡುತ್ತಿದ್ದಾರಲ್ಲಾ ಇದನ್ನು ತಪ್ಪಿಸವುದಕ್ಕೆ ತಾವೇನು ಯೋಚನೆ ಮಾಡಿದ್ದೀರಾ ? ತಿರುಪತಿಯ ಹುಂಡಿಗೆ ನಾವು ಹರಿಸಿಕೊಂಡ ಹಾಗೆ ಕಾಣಿಕೆಯನ್ನು ಏನು ಇಡುತ್ತೇವೋ ಹಾಗೆ ಈ ಹೆಣ್ಣುಮಕ್ಕಳನ್ನು ಆ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಮುಡುಪು ಇಡುವ ಹಾಗೆ ಮಾಡಿ ಅವರನ್ನು ಬಸವಿಗೆ ಅಂತ ಬಿಡುವುದನ್ನು ತಪ್ಪಿಸುವುದಕ್ಕೆ ತಾವೇನು ಯೋಜನೆ ಮಾಡಿದ್ದೀರಾ ಅನ್ನುವುದನ್ನು ತಿಳಿಸಬೇಕಾಗಿ ಕೇಳುತ್ತೇನೆ,

೬–೩೦ ಪಿ.ಎಂ.

ಇದಕ್ಕಿಂತ ಮೊದಲು ಕರ್ನಾಟಕದ ಅಲ್ಪಸಂಖ್ಯಾತರ ಹೆಣ್ಣು ಮಕ್ಕಳ ಪರಿಸ್ಥಿತಿ ಏನಾಗಿದೆ ಎಂದು ನಾವು ನೋಡಬೇಕಾಗಿದೆ. ದುಬಾಯಿ, ಸೌದಿ ಅರೇಬಿಯಾ ಮತ್ತು ಅರೇಬಿಯನ್ ದೇಶಗಳಿಂದ ಬರತಕ್ಕವರು ಇಲ್ಲಿನ ಅಲ್ಪಸಂಖ್ಯಾತರ ಹೆಣ್ಣು ಮಕ್ಕಳನ್ನು ವಿದೇಶಕ್ಕೆ ಕರೆದುಕೊಂಡು ಹೋಗಿ ನಿಕ ಎಂದು ಹೇಳಿ ಮದುವೆ ಮಾಡಿಕೊಂಡರೆ ಮುಂದೆ ಅವರ ಗತಿ ಏನೋ ನಮಗೆ ತಿಳಿಯದಾಗಿದೆ. ಅವರು ಸತ್ತಿದ್ದಾರೋ ಬದುಕಿದ್ದಾರೋ ಎನ್ನುವುದು ಅವರ ತಂದೆ ತಾಯಿಗಳಿಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ನಗರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳ ಪರಿಸ್ಥಿತಿ ಈ ರೀತಿಯಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿಯಿಂದೆ ಎನ್ನುವುದನ್ನು ತಾವು ಕಲ್ಪನೆ ಮಾಡಿಕೊಳ್ಳಬೇಕು. ಈ ಒಂದು ಅದೋಗತಿಗೆ ಹೆಣ್ಣನ್ನು ಎಳೆದು ತಂದಂಥ ಸಮಾಜಕ್ಕೆ ನಾನು ಏನು ಹೇಳಬೇಕೋ ತಿಳಿಯುತ್ತಿಲ್ಲ. ಈ ಸಮಾಜದ ಉದ್ಧಾರ ಹೇಗೆ ಎನ್ನುವುದರ ಬಗ್ಗೆ ತಾವು ಯೋಚನೆ ಮಾಡಬೇಕು. ಈ ಪರಿಸ್ಥಿತಿಯ ಜೊತೆಗೆ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಇವತ್ತು ಹೆಣ್ಣು ಮಕ್ಕಳು ಸಹ ಪೌರ ಕಾರ್ಮಿಕರಾಗಿದ್ದಾರೆ ಸುಮಾರು ನಾಲ್ಕೈದು ಸಾವಿರ ಜನ ಹೆಣ್ಣು ಮಕ್ಕಳು ಅಲ್ಲಿ ಪೌರ ಕಾರ್ಮಿಕರಾಗಿದ್ದಾರೆ. ಇವರೆಲ್ಲರೂ ನನಗೆ ತಿಳಿದ ಹಾಗೆ ಹೆಣ್ಣು ಮಕ್ಕಳು. ಈ ಹೆಣ್ಣು ಮಕ್ಕಳ ಪರಿಸ್ಥಿತಿ ಏನಾಗಿದೆ ಎಂದರೆ, ಮಾನ್ಯ ಸಚಿವರು ಹರಿಜನರ ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ಹೆಣ್ಣು ಮಕ್ಕಳ ಪರಿಸ್ಥಿತಿಯ ಕಡೆ ಅವರು ತಮ್ಮ ಗಮನವನ್ನು ಹರಿಸಿದ್ದಾರೆಯೇ ಎಂದು ನಾನು ಕೇಳಬೇಕಾಗಿದೆ. ಮಾನ್ಯ ಬಸವಲಿಂಗಪ್ಪನವರು ಪೌರಾಡಳಿತ ಸಚಿವರಾಗಿದ್ದಾಗ ತಲೆಯ ಮೇಲೆ ಮಲವನ್ನು ಹೊರುವುದನ್ನು ನಿಷಿದ್ಧ ಮಾಡಿದರು, ಈ ಕಾನೂನನ್ನು ಮಾನ್ಯ ಬಸವಲಿಂಗಪ್ಪನವರು ಒಂದು ಒಳ್ಳೆಯ ಉದ್ದೇಶದಿಂದ ಜಾರಿಗೆ ತಂದರು. ಆದರೆ ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲಿ ಡ್ರೈನೇಜನ್ನು ಕ್ಲೀನ್ ಮಾಡಲು ಈ ಹೆಣ್ಣು ಮಕ್ಕಳು ಅದರ ಒಳಗೆ ನುಗ್ಗಿ ಕ್ಲೀನ್ ಮಾಡಬೇಕಾದ ಪರಿಸ್ಥಿತಿ ಬಂದಿದೆ. ತಲೆಯ ಮೇಲೆ ಮಲ ಹೊರುವುದು ಒಂದು ರೀತಿಯಾದರೆ ಇದು ಮಾತ್ರದಲ್ಲಿಯೇ ಕೆಳಗೆ ಇಳಿದು ಡ್ರೈನೇಜನ್ನು ಕ್ಲೀನ್ ಮಾಡಬೇಕಾದ ಪರಿಸ್ಥಿತಿ ಇಂದು ಅಲ್ಲಿದೆ, ಇದರ ಕಡೆ ತಾವು ಗಮನ ಹರಿಸಿದ್ದೀರಾ ಎಂದು ನಾನು ಕೇಳಬೇಕಾಗಿದೆ ? ಈ ಹೆಣ್ಣು ಮಕ್ಕಳು ರಾತ್ರಿ ಹಗಲು ಈ ಕೆಲಸವನ್ನು ಮಾಡಬೇಕಾಗಿದೆ.

SRI K. BHASKAR NAIDU.—Sir, it is already 6.32 P.M. now. You can request the Hon'ble Member Kum. Pramila to continue her speech tomorrow.

SRI B. BHASKAR SHETTY.—Just ten minutes.........

SRI M. C. NANAIAH.—No, No. I do not know whether you have got any other work. We have been sitting from 9-00 A.M. to 1-45 P.M. and again from 3-00 P.M. Let the Hon'ble Member Kum. Pramila speak tomorrow.

MR DEPUTY SPEAKER.—Now the House stands adjourned to meet tomorrow at 9-00 A.M.

(The House adjourned at Thirty-three minutes past Six of the Clock to meet again at Nine of the Clock on Friday, the 9th July 1982.)

WD—6338